ಸಂಪುಟ: 04 ಸಂಚಿಕೆ: 285 ಪುಟಗಳು: 08 ಶನಿವಾರ 28 ಡಿಸೆಂಬರ್ 2024
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**
ಜ್ಞಾನವೇ ಶಕ್ತಿ. ನಾವೆಲ್ಲರೂ ಅದನ್ನು ಒಪ್ಪುತ್ತೇವೆ. ಜ್ಞಾನವು ಈಗಾಗಲೇ ಮನುಷ್ಯನಲ್ಲಿರುವ ಶಕ್ತಿಯ ಅಭಿವ್ಯಕ್ತಿಯಾಗಿದೆ.

# ಉದಯ ವಾಹಿನಿ

UV
ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

## ಹೊಸ ವರ್ಷಕ್ಕೆ ನಮ್ಮ ಮೆಟ್ರೊ ಸಂಚಾರ ಅವಧಿ ವಿಸ್ತರಣೆ

**ಎರಡು ತಾಸಿಗೂ ಅಧಿಕ ಸಮಯ**

• ಉದಯವಾಹಿನಿ, ಬೆಂಗಳೂರು

ಹೊಸ ವರ್ಷದ ಸಂಭ್ರಮಾಚರಣೆಗೆ ಅನುಕೂಲ ಆಗುವಂತೆ ಡಿ.31ರಂದು ನಮ್ಮ ಮೆಟ್ರೊ ರೈಲು ಸಂಚಾರವನ್ನು ಬಿಎಂಆರ್‌ಸಿಎಲ್ ರಾತ್ರಿ ಎರಡು ತಾಸಿಗೂ ಅಧಿಕ ಸಮಯ ವಿಸ್ತರಿಸಿದೆ. ಎಂ.ಜಿ. ರಸ್ತೆ ನಿಲ್ದಾಣವನ್ನು ರಾತ್ರಿ 11ರ ನಂತರ ತೆರೆಯದಂತೆ ಪೊಲೀಸ್ ಇಲಾಖೆ ಸೂಚಿಸಿದೆ. ನೇರಳೆ ಮಾರ್ಗ ಮತ್ತು ಹಸಿರು ಮಾರ್ಗಗಳಲ್ಲಿ ಪ್ರತಿ ದಿನ ರಾತ್ರಿ 11.30ಕ್ಕೆ ಇದ್ದ ಕೊನೆಯ ರೈಲು ಸೇವೆಯನ್ನು ಡಿ.31ರಂದು ರಾತ್ರಿ 2.40ರ ತನಕ ವಿಸ್ತರಿಸಲಾಗಿದೆ. ಈ ಸಂದರ್ಭದಲ್ಲಿ ಪ್ರತಿ 10 ನಿಮಿಷಕ್ಕೊಂದು ರೈಲು ಸಂಚರಿಸಲಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ವೈಟ್‌ಫೀಲ್ಡ್, ಚಲ್ಲಘಟ್ಟ, ಮಾದಾವರ ಮತ್ತು ಸಿಲ್ಕ್ ಇನ್‌ಸ್ಟಿಟ್ಯೂಟ್ ಟರ್ಮಿನಲ್‌ಗಳಿಂದ ಕೊನೇ ರೈಲುಗಳು ರಾತ್ರಿ 2ಕ್ಕೆ ಹೊರಡಲಿವೆ. ಮೆಜೆಸ್ಟಿಕ್‌ನಿಂದ ನಾಲ್ಕು ಟರ್ಮಿನಲ್‌ಗಳ ಕಡೆಗೆ 2.40ಕ್ಕೆ ಕೊನೇ ರೈಲು ಇರಲಿದೆ. ಸುರಕ್ಷತೆಯ ದೃಷ್ಟಿಯಿಂದ ರಾತ್ರಿ 11ರ ನಂತರ ಎಂ.ಜಿ. ರಸ್ತೆಯ ಮೆಟ್ರೊ ನಿಲ್ದಾಣ ಪ್ರವೇಶ ನಿರ್ಬಂಧಿಸಬೇಕು ಎಂದು ಪೊಲೀಸ್ ಇಲಾಖೆ ಸೂಚಿಸಿರುವುದರಿಂದ ಅಂದು 11 ಗಂಟೆಯ ನಂತರದ ಅವಧಿಯಲ್ಲಿ ಎಂ.ಜಿ. ರಸ್ತೆಯ ಬದಲು ಟ್ರಿನಿಟಿ ಅಥವಾ ಕಬ್ಬನ್ ಪಾರ್ಕ್ ಮೆಟ್ರೊ ನಿಲ್ದಾಣಗಳಿಗೆ ತೆರಳಿ ಪ್ರಯಾಣಿಕರು ಸಂಚಾರ ಮಾಡಬಹುದು ಎಂದು. ಸೂಚಿಸಿದೆ.

ಟ್ರಿನಿಟಿ ಮತ್ತು ಕಬ್ಬನ್ ಪಾರ್ಕ್ ನಿಲ್ದಾಣಗಳಿಂದ ಪ್ರಯಾಣಿಸುವವರಿಗೆ 50 ಮೊತ್ತದ ಕಾಗದದ ಟಿಕೆಟ್ ವಿತರಿಸಲಾಗುವುದು. ಕಾಗದದ ಟಿಕೆಟ್‌ಗಳನ್ನು ಅಂದು ಮುಂಚಿತವಾಗಿಯೇ ಪಡೆಯಬೇಕು. ಮಧ್ಯರಾತ್ರಿ ಟಿಕೆಟ್ ವಿತರಣೆ ಇರುವುದಿಲ್ಲ. ಸ್ಮಾರ್ಟ್ ಕಾರ್ಡ್ ಮತ್ತು ಕ್ಯೂಆರ್ ಕೋಡ್ ಟಿಕೆಟ್ ಹೊಂದಿರುವ ಪ್ರಯಾಣಿಕರು ಎಂದಿನಂತೆ ರಿಯಾಯಿತಿ ದರದಲ್ಲಿ ಪ್ರಯಾಣಿಸಬಹುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.



## ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾಗಿ ಷಡಕ್ಷರಿ ಆಯ್ಕೆ

• ಉದಯವಾಹಿನಿ, ಬೆಂಗಳೂರು

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಚುನಾವಣೆಯಲ್ಲಿ ಸಿಎಸ್ ಷಡಕ್ಷರಿ ಭರ್ಜರಿ ಗೆಲುವು ಸಾಧಿಸಿದ್ದಾರೆ. ಈ ಮೂಲಕ ಮತ್ತೊಮ್ಮೆ ಅವಧಿಗೆ ರಾಜ್ಯಾಧ್ಯಕ್ಷರಾಗಿ ಕೆಲಸ ಮಾಡಲಿದ್ದಾರೆ. ಇಂದು ನಡೆದ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರ ಚುನಾವಣೆಯಲ್ಲಿ ಸಿ ಎಸ್. ಷಡಕ್ಷರಿ (507 ಮತಗಳು) ಹತ್ತಿರದ ಪ್ರತಿಸ್ಪರ್ಧಿ ಕೃಷ್ಣ ಗೌಡ (442 ಮತಗಳು )ಅವರಿಗಿಂತ 65 ಹೆಚ್ಚಿನ ಮತದ ಅಂತರದಿಂದ ಮತ್ತೊಮ್ಮೆ ರಾಜ್ಯಾಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ. ರಾಜ್ಯ ಸರ್ಕಾರಿ ನೌಕರರ ಸಂಘದ ಖಜಾಂಜಿ ಸ್ಥಾನದ ಚುನಾವಣೆಯಲ್ಲಿ ಶಿವರುದ್ರಯ್ಯ ವಿ. ವಿ. (485 ಮತಗಳು ) ರವರು ಹತ್ತಿರದ ಪ್ರತಿಸ್ಪರ್ಧಿ ನಾಗರಾಜ ಆರ್ ಜುಮ್ಮನವರ್ (467 ಪಡೆದ ಮತಗಳು ) ರವರಿಗಿಂತ 18 ಮತಗಳ ಅಂತರದಿಂದ ಶಿವರುದ್ರಯ್ಯ ವಿ. ವಿ. ಅವರು ಗೆದ್ದು ಬೀಗಿದ್ದಾರೆ. ಇನ್ನೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾಗಿ ಆಯ್ಕೆಯಾದ ಸಿ ಎಸ್. ಷಡಕ್ಷರಿ ಅವರಿಗೆ ಹಾಗೂ ಖಜಾಂಜಿಯಾಗಿ ಆಯ್ಕೆಯಾದ ಶಿವರುದ್ರಯ್ಯ ವಿ. ವಿ. ಅವರಿಗೆ ಸಾಗರ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಸಂತೋಷ ಕುಮಾರ್ ಎನ್, ರಾಜ್ಯ ಪರಿಷತ್ ಸದಸ್ಯರು ದೇವೇಂದ್ರಪ್ಪ ಕೆ, ಖಜಾಂಚಿ ಸಹದೇವ ಎಸ್ ಬಡಿಗೇರ, ಪ್ರಧಾನ ಕಾರ್ಯದರ್ಶಿ ಅಣ್ಣಪ್ಪ ಡಿ. ಕೆ. ತಮ್ಮಣ್ಣ ಕೆಳದಿ, ರಾಜ್ಯ ಪರಿಷತ್ ಸದಸ್ಯರುಗಳು ಅಭಿನಂದನೆಗಳನ್ನೂ ಸಲ್ಲಿಸಿದ್ದಾರೆ.

## ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಸರ್ಕಾರಿ ಹಣ ಬಳಕೆ: ಜೋಶಿ

• ಉದಯವಾಹಿನಿ, ಧಾರವಾಡ

'ಬೆಳಗಾವಿ ಕಾಂಗ್ರೆಸ್ ಅಧೀವೇಶನಕ್ಕೆ ಸರ್ಕಾರಿ ಹಣ ಬಳಸುತ್ತಿರುವುದಕ್ಕೆ ನಮ್ಮ ಆಕ್ಷೇಪ ಇದೆ. ಈ ಅಧಿವೇಶನಕ್ಕೆ 'ಹೆಸ್ಕಾಂ'ನಿಂದ ವಿದ್ಯುತ್ ದೀಪಗಳನ್ನು ಹಾಕಿದ್ದಾರೆ' ಎಂದು ಕೇಂದ್ರ ಗ್ರಾಹಕ ವ್ಯವಹಾರ ಮತ್ತು ಆಹಾರ ಸಚಿವ ಪ್ರಲ್ಹಾದ ಜೋಶಿ ದೂರಿದರು. ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಕಾಂಗ್ರೆಸ್‌ನವರು ಬೆಳಗಾವಿ ಗಾಂಧಿ ಅಧಿವೇಶನದಲ್ಲಿ ಭಾರತದ ದೇಶದ ನಕಾಶೆಯನ್ನೇ ಸರಿಪಡಿಸಿಲ್ಲ. ದೇಶವನ್ನು ಹೇಗೆ ಸರಿಪಡಿಸುತ್ತಾರೆ' ಎಂದು ಲೇವಡಿ ಮಾಡಿದರು. 'ಕಾಂಗ್ರೆಸ್ ವಿಸರ್ಜನೆ ಮಾಡುವಂತೆ ಗಾಂಧೀಜಿ ಹೇಳಿದ್ದರು. ಕಾಂಗ್ರೆಸ್‌ನವರು ಯಾಕೆ ಮಾಡಲಿಲ್ಲ. ಕಾಂಗ್ರೆಸ್‌ನವರು ಗಾಂಧೀಜಿ ಹೆಸರಿನಲ್ಲಿ ಜಾತ್ರೆ ಮಾಡುತ್ತಿದ್ದಾರೆ' ಎಂದು ಟೀಕಿಸಿದರು. 'ತನ್ನ ಕ್ಷೇತ್ರಕ್ಕೆ ಹೋದ ಶಾಸಕ ಮುನಿರತ್ನ ಅವರಿಗೆ ತೊಂದರೆ ನೀಡಲಾಗಿದೆ. ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವವರೆಗೆ ಬಿಡಲ್ಲ ಎನ್ನುವಂತ ಧಮಕಿ ಹಾಕುವುದು ಸರಿಯಲ್ಲ. ಮುನಿರತ್ನ ಅವರಿಗೆ ಪೊಲೀಸ್ ಭದ್ರತೆ ನೀಡಬೇಕಿತ್ತು' ಎಂದು ಉತ್ತರಿಸಿದರು.

## ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣ ಖಂಡ್ರೆ ಮೌನ ನಾಚಿಕೆಗೇಡಿತನ

• ಉದಯವಾಹಿನಿ, ಬೀದರ್

'ಯುವ ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಜೀನಾಮೆ ಕೊಟ್ಟು ತನಿಖೆಗೆ ಸಹಕಾರ ಕೊಡಬೇಕು. ಬೀದರ್ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಈ ಬಗ್ಗೆ ಮೌನ ವಹಿಸಿರುವುದು ನಾಚಿಕೆಗೇಡಿತನದ ಸಂಗತಿ' ಎಂದು ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಹೇಳಿದ್ದಾರೆ. ಪ್ರತಿಯೊಂದಕ್ಕೂ ಈಶ್ವರ ಬಿ. ಖಂಡ್ರೆ ಪ್ರತಿಕ್ರಿಯಿಸುತ್ತಾರೆ. ಆದರೆ, ಈ ವಿಷಯದ ಬಗ್ಗೆ, ಒಂದೇ ಒಂದು ಮಾತನಾಡಿಲ್ಲ. ನಾಲ್ಕು ಸಲ ಭಾಲ್ಕಿ ಕ್ಷೇತ್ರದಿಂದ ಖಂಡ್ರೆ ಗೆದ್ದಿದ್ದಾರೆ. ಆದರೆ, ಅದೇ ಕ್ಷೇತ್ರದ ಯುವಕನ ಸಾವನ್ನು ಖಂಡಿಸಿಲ್ಲ. ತಾನೊಬ್ಬ ಸಮಯ ಸಾಧಕ ಎಂಬುದು ತೋರಿಸಿಕೊಟ್ಟಿದ್ದಾರೆ ಎಂದು ಟೀಕಿಸಿದ್ದಾರೆ.

## ಜನವರಿಯಲ್ಲಿ ಮತ್ತೆ ರೆಬಲ್ಸ್ ಬಿಜೆಪಿ ವಕ್ಫ್ ಪ್ರವಾಸ

• ಉದಯವಾಹಿನಿ, ಬೆಂಗಳೂರು

ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಬಂಧನ ಪ್ರಕರಣದಿಂದ ಒಂದಾದಂತೆ ಕಂಡು ಬಂದಿದ್ದ ಬಿಜೆಪಿ ಮತ್ತೆ ಹಳೇ ಹಾದಿ ಹಿಡಿದಿದ್ದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದ ರೆಬಲ್ಸ್ ಟೀಂ ಗುರುವಾರ ಮತ್ತೆ ಸಭೆ ನಡೆಸಿದೆ. ಮಾಜಿ ಶಾಸಕ ಕುಮಾರ ಬಂಗಾರಪ್ಪ ನಿವಾಸದಲ್ಲಿ ಸಭೆ ನಡೆಸಿದ ಈ ತಂಡ ಜನವರಿ ಮೊದಲನೇ ವಾರದಿಂದ ಹಳೇ ಮೈಸೂರು ಭಾಗದಲ್ಲಿ ವಕ್ಸ್ ಪ್ರವಾಸ ನಡೆಸುವ ಬಗ್ಗೆ ಚರ್ಚೆ ನಡೆಸಿದೆ. ಯತ್ನಾಳ್, ಅರವಿಂದ ಲಿಂಬಾವಳಿ, ರಮೇಶ್ ಜಾರಕಿಹೊಳಿ, ಕುಮಾರ ಬಂಗಾರಪ್ಪ, ಎನ್.ಆರ್. ಸಂತೋಷ್ ಸೇರಿ ಹಲವರು ಈ ಸಭೆಯಲ್ಲಿ ಭಾಗವಹಿಸಿದ್ದು, ಮುಂದಿನ ಕಾರ್ಯತಂತ್ರದ ಬಗ್ಗೆ ಚರ್ಚಿಸಿದ್ದಾರೆ.



# ಮೌನಕ್ಕೆ ಜಾರಿದ ಮನಮೋಹನ



ದೇಶದ ಆರ್ಥಿಕ ಬಲವರ್ಧನೆಗೆ ನವಚೈತನ್ಯ ತುಂಬಿದ ಮಾಜಿ ಪ್ರಧಾನಿ, ಆರ್ಥಿಕ ತಜ್ಞ ಡಾ. ಮನ್‌ಮೋಹನ್‌ಸಿಂಗ್ ಅವರ ಅಂತ್ಯಕ್ರಿಯೆ ಇಂದು ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು, ನವದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ನಿಧನರಾದರು. ಮನ್‌ಮೋಹನ್‌ಸಿಂಗ್ ನಿಧನದ ಹಿನ್ನೆಲೆ ದೇಶಾದ್ಯಂತ 7 ದಿನಗಳ ಕಾಲ ಶೋಕಾಚರಣೆ ಘೋಷಿಸಲಾಗಿದೆ. ಕಾಂಗ್ರೆಸ್ ಸಂಸ್ಥಾಪನಾ ದಿನ ಸೇರಿದಂತೆ ಎಲ್ಲಾ ಅಧಿಕೃತ ಕಾರ್ಯಕ್ರಮಗಳನ್ನು ಕಾಂಗ್ರೆಸ್ ರದ್ದುಪಡಿಸಿದೆ.

■ ಮನಮೋಹನ್ ಸಿಂಗ್ ಅಗಲಿಕೆ ದೇಶಕ್ಕಷ್ಟೇ ಅಲ್ಲ , ಇಡೀ ಜಗತ್ತಿಗೆ ನಷ್ಟ: ಸಿಎಂ ಸಿದ್ದರಾಮಯ್ಯ ■ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ನಿಧನ: ■ ಇಂದು ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ■ ದೇಶದ ಆರ್ಥಿಕ ಚರಿತ್ರೆಯನ್ನೇ ಬದಲಿಸಿದ ಸಿಂಗ್ ■ ಭಾರತದ ದೂರದೃಷ್ಟಿಯ ಮಹಾನ್ ನಾಯಕ 'ಮನಮೋಹನ'

• ಉದಯವಾಹಿನಿ, ನವದೆಹಲಿ

ದೇಶದ ಆರ್ಥಿಕ ಬಲವರ್ಧನೆಗೆ ನವಚೈತನ್ಯ ತುಂಬಿದ ಮಾಜಿ ಪ್ರಧಾನಿ, ಆರ್ಥಿಕ ತಜ್ಞ ಡಾ. ಮನ್‌ಮೋಹನ್ ಸಿಂಗ್ ಅವರ ಅಂತ್ಯಕ್ರಿಯೆ ಇಂದು ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು, ಗುರುವಾರ ನವದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ನಿಧನರಾದರು. ಮನ್‌ಮೋಹನ್ ಸಿಂಗ್ ನಿಧನದ ಹಿನ್ನೆಲೆ ದೇಶಾದ್ಯಂತ 7 ದಿನಗಳ ಕಾಲ ಶೋಕಾಚರಣೆ ಘೋಷಿಸಲಾಗಿದೆ.

ಕಾಂಗ್ರೆಸ್ ಸಂಸ್ಥಾಪನಾ ದಿನ ಸೇರಿದಂತೆ ಎಲ್ಲಾ ಅಧಿಕೃತ ಕಾರ್ಯಕ್ರಮಗಳನ್ನು ಕಾಂಗ್ರೆಸ್ ರದ್ದುಪಡಿಸಿದೆ.

ರಾಷ್ಟ್ರಪತಿ ದ್ರೌಪದಿಮುರ್ಮು, ಉಪರಾಷ್ಟ್ರಪತಿ ಜಗದೀಪ್‌ಧನ್ಕರ್, ಲೋಕಸಭಾಧ್ಯಕ್ಷ ಓಂಬಿರ್ಲಾ, ಪ್ರಧಾನಿ ನರೇಂದ್ರ ಮೋದಿ, ಮಾಜಿ ಪ್ರಧಾನಿ ಎಚ್.ಡಿ ದೇವೇಗೌಡ ಸೇರಿದಂತೆ ಗಣ್ಯಾತಿಗಣ್ಯರು ಡಾ. ಮನ್‌ಮೋಹನ್‌ಸಿಂಗ್ ನಿಧನಕ್ಕೆ ಕಂಬನಿ ಮಿಡಿದಿದ್ದಾರೆ. ಏಮ್ಸ್ ಆಸ್ಪತ್ರೆಯಿಂದ ಡಾ. ಮನ್ಮೋಹನ್‌ಸಿಂಗ್ ಅವರ ಪಾರ್ಥೀವ ಶರೀರವನ್ನು ದೆಹಲಿಯ ಮೋತಿಲಾಲ್‌ನೆಹರು ಮಾರ್ಗದಲ್ಲಿರುವ ಅವರ ನಿವಾಸಕ್ಕೆ ತರಲಾಗಿದ್ದು, ಅಂತಿಮ ದರ್ಶನಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮೂಲದಿಂದ ತಿಳಿದು ಬಂದಿದೆ. ಪ್ರಧಾನಮಂತ್ರಿ ಮೋದಿ ಅವರು ಅಗಲಿದ ಮಹಾ ನಾಯಕನ ಮನ್‌ಮೋಹನ್‌ಸಿಂಗ್ ನಿವಾಸಕ್ಕೆ ತೆರಳಿ ಪಾರ್ಥೀವ ಶರೀರದ ಅಂತಿಮ ದರ್ಶನ ಪಡೆದು ಕುಟುಂಬಸ್ತರಿಗೆ ಸಾಂತ್ವನ ಹೇಳಿದರು. ಇದೇ ವೇಳೆ ಕೇಂದ್ರ ಸಚಿವ ಅಮಿತ್ ಶಾ, ರಾಜ್‌ನಾಥ್ ಸಿಂಗ್, ನಿರ್ಮಲಾ ಸೀತಾರಾಮನ್, ಜೆಪಿ ನಡ್ಡಾ, ಪ್ರಲ್ಹಾದ್‌ಜೋಷಿ, ಎಚ್.ಡಿ ಕುಮಾರಸ್ವಾಮಿ, ನಿತಿನ್‌ಗಡ್ಕರಿ ಸೇರಿದಂತೆ ಸಂಪುಟ ಸಹೋದ್ಯೋಗಿಗಳು ಅಂತಿಮ ದರ್ಶನ ಪಡೆದು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು.

ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ಪ್ರತಿಪಕ್ಷ ನಾಯಕ ರಾಹುಲ್‌ಗಾಂಧಿ, ಸಂಸದೆ ಪ್ರಿಯಾಂಕಗಾಂಧಿ, ಪಕ್ಷದ ಹಿರಿಯ ನಾಯಕರು, ಮುಖಂಡರು ಅಂತಿಮ ದರ್ಶನ ಪಡೆದು ತಮ್ಮ ನೆಚ್ಚಿನ ನಾಯಕನ ಅಗಲಿಕೆಗೆ ಭಾವಪೂರ್ಣ ಶ್ರದ್ಧಾಂಜಲಿ ಸಮರ್ಪಿಸಿದರು. ಯುಪಿಎ ಸರ್ಕಾರದ ಅವಧಿಯಲ್ಲಿ ಎರಡು ಬಾರಿ ದೇಶದ ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ್ದ ಮನ್‌ಮೋಹನ್ ಸಿಂಗ್ ಅವರು ಜನಪರ ಆಡಳಿತ ನೀಡುವಲ್ಲಿ ಯಶಸ್ವಿಯಾಗಿದ್ದರು. 33 ವರ್ಷಗಳ ಕಾಲ ರಾಜ್ಯಸಭಾ ಸದಸ್ಯರಾಗಿಯೇ ಆಯ್ಕೆಯಾಗಿದ್ದರು. 1991 ರಿಂದ 1996ರ ವರೆಗೆ ಅಂದು ಪ್ರಧಾನಿಯಾಗಿದ್ದ ಪಿ.ವಿ ನರಸಿಂಹರಾವ್ ಅವರ ಮಂತ್ರಿ ಮಂಡಲದಲ್ಲಿ ಹಣಕಾಸು ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು. ಮೊದಲ ಬಾರಿಗೆ ದಕ್ಷಿಣ ದೆಹಲಿ ಲೋಕಸಭಾ ಕ್ಷೇತ್ರದಿಂದ ಚುನಾವಣಾ ಅಖಾಡಕ್ಕೆ ಧುಮುಕ್ಕಿದ್ದರು. ಆದರೆ, ಸಂಸತ್ ತಲುಪಲು ಸಾಧ್ಯವಾಗಲಿಲ್ಲ. ಈ ವರ್ಷ ಏಪ್ರಿಲ್‌ನಲ್ಲಿ ರಾಜ್ಯಸಭೆಯಲ್ಲಿನ ತಮ್ಮ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ ನಂತರ ನಿವೃತ್ತರಾಗಿದ್ದರು. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರು, ಗಾಲಿಕುರ್ಚಿಯ ಸಹಾಯದಿಂದ ನಡೆದಾಡುತ್ತಿದ್ದರು. 2014ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಿನ ನಂತರ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ತಮ್ಮ ಕುಟುಂಬದೊಂದಿಗೆ ದೆಹಲಿಯ ಮೋತಿಲಾಲ್‌ನೆಹರು ಮಾರ್ಗದಲ್ಲಿರುವ ಸರ್ಕಾರಿ ನಿವಾಸದಲ್ಲಿ ವಾಸವಾಗಿದ್ದರು.

**1** ವಿಶ್ವ ಕಂಡ ಶ್ರೇಷ್ಠ ಆರ್ಥಿಕ ತಜ್ಞನಿಗೆ ಅಂತಿಮ ವಿದಾಯ ಹೇಳಿದ ಎಚ್‌ಡಿ ಕುಮಾರಸ್ವಾಮಿ

**2** ದೇಶಕ್ಕೆ ಮನಮೋಹನ್ ಸಿಂಗ್ ಅವರ ಆರ್ಥಿಕ ಕೊಡುಗೆ ಸ್ಮರಿಸಿದ ಕೇಂದ್ರ ಸಚಿವ

**3** ಮನಮೋಹನ್ ಸಿಂಗ್ ನಿಧನ ವೈಯಕ್ತಿಕವಾಗಿ ದು:ಖ ತಂದಿದೆ ಎಂದ ಎಚ್‌ಡಿ ಕುಮಾರಸ್ವಾಮಿ

### ಭಾರತದ ಆರ್ಥಿಕತೆಯ ಆಪದ್ಬಾಂಧವ ಮನಮೋಹನ್ ಸಿಂಗ್



ಆರ್ಥಿಕ ಸಂಕಷ್ಟದಲ್ಲಿದ್ದ ಭಾರತ 1991ರ ಬಜೆಟ್ ಮೂಲಕ ಅಂದಿನ ಹಣಕಾಸು ಸಚಿವರಾಗಿದ್ದ ಮನಮೋಹನ್ ಸಿಂಗ್ ಪಾರು ಮಾಡಿದರು. 1991ರ ಬಜೆಟ್ ಅನ್ನು ಭಾರತೀಯ ಇತಿಹಾಸದಲ್ಲಿ ದೇಶದ ಆರ್ಥಿಕತೆಗೆ ಹೊಸ ತಿರುವು ನೀಡಿದ ಬಜೆಟ್ ಎಂದು ಕರೆಯಲಾಗುತ್ತದೆ. ಡಾ. ಮನಮೋಹನ್ ಸಿಂಗ್ ಅವರ ನೇತೃತ್ವದಲ್ಲಿ ನರಸಿಂಹರಾವ್ ಸರ್ಕಾರದ ಈ ಬಜೆಟ್ ದೇಶದ ಆರ್ಥಿಕತೆಯಲ್ಲಿ ಜಾಗತಿಕ ವಾಣಿಜ್ಯಕ್ಕೆ ಬಾಗಿಲನ್ನು ತೆರೆಯಿತು. ಆ ಮೂಲಕ ಅಂದಿನಿಂದ ಭಾರತ ಮುಕ್ತ ಮಾರುಕಟ್ಟೆಗೆ ತನ್ನನ್ನು ತೆರೆದುಕೊಂಡಿತು. ಪಿವಿ ನರಸಿಂಹರಾವ್ ಅವರಿಗೂ ಹಿಂದೆ ಪ್ರಧಾನಿಯಾಗಿದ್ದ ಚಂದ್ರಶೇಖರ್ ಅವರು ಚಿನ್ನವನ್ನು ವಿದೇಶದಲ್ಲಿ ಅಡವಿಟ್ಟು ಬಂದಿದ್ದರು.

### ರಜೆ ಘೋಷಣೆ

ಮನಮೋಹನ್ ಸಿಂಗ್ ನಿಧನದ ಹಿನ್ನೆಲೆ ಇಂದು ಅರ್ಧ ದಿನ ರಜೆ ಇರುತ್ತದೆ. ತೆಲಂಗಾಣ ಮತ್ತು ಕರ್ನಾಟಕದಲ್ಲಿ ಎಲ್ಲಾ ಸರ್ಕಾರಿ ಕಚೇರಿಗಳು ಮತ್ತು ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಿಸಿದೆ. ಹೆಚ್ಚುವರಿಯಾಗಿ, ಮುಂದಿನ 7 ದಿನಗಳವರೆಗೆ, ಕಾಂಗ್ರೆಸ್ ಪಕ್ಷವು ಎಲ್ಲಾ ಅಧಿಕೃತ ಕಾರ್ಯಕ್ರಮಗಳನ್ನು ರದ್ದುಗೊಳಿಸಿದೆ. ಪ್ರಧಾನಿ ಅವರ ಅಧ್ಯಕ್ಷತೆಯಲ್ಲಿ ಡಾ.ಮನಮೋಹನ್ ಸಿಂಗ್ ಅವರಿಗೆ ಎರಡು ನಿಮಿಷಗಳ ಮೌನಾಚರಣೆ ಮಾಡುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿತು.

### ಸಿಂಗ್ ಪ್ರತಿಷ್ಠಿತ ನಾಯಕ

ಮಾಜಿ ಪ್ರಧಾನಿ ಡಾ. ಮನಮೋಹನ್‌ಸಿಂಗ್ ಅವರ ನಿಧನದಿಂದ ತೀವ್ರ ದುಃಖವಾಗಿದೆ. ಅವರು ದೇಶದ ಪ್ರತಿಷ್ಠಿತ ನಾಯಕರಲ್ಲಿ ಒಬ್ಬರಾಗಿದ್ದರು. ದೇಶ ಆರ್ಥಿಕ ಸಂಕಷ್ಟದಲ್ಲಿದ್ದ ಸಮಯದಲ್ಲಿ ಅವರು ಕೈಗೊಂಡ ಆರ್ಥಿಕ ಸುಧಾರಣಾ ಕ್ರಮಗಳಿಂದ ದೇಶದ ಆರ್ಥಿಕ ಚಟುವಟಿಕೆಗೆ ಮರಳಲು ಮತ್ತು ಆರ್ಥಿಕತೆಯನ್ನು ಪುನರ್ ನಿರ್ಮಾಣ ಮಾಡುವಲ್ಲಿ ಪ್ರಮುಖಪಾತ್ರ ವಹಿಸಿದ್ದರು ಎಂದು ಪ್ರಧಾನಿ ನರೇಂದ್ರಮೋದಿ ಗುಣಗಾನ ಮಾಡಿದ್ದಾರೆ. ಭಾರತದ ಕೊಡುಗೆ ಸದಾ ಸ್ಮರಣೀಯ, ಸಿಂಗ್ ಅವರು ದೇಶದ ಅತ್ಯಂತ ಪ್ರತಿಷ್ಠಿತ ಮುಖಂಡರಲ್ಲಿ ಒಬ್ಬರಾಗಿದ್ದರು. ಅರ್ಥಶಾಸ್ತ್ರಜ್ಞರಾಗಿ. ಸರ್ಕಾರದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ದೇಶದ ಭದ್ರ ಬುನಾದಿ ಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ಸಾಮಾಜಿಕ ಜಾಲತಾಣ ಎಕ್ಸ್ ಖಾತೆಯಲ್ಲಿ ಬಣ್ಣಿಸಿದ್ದಾರೆ.

## ಮನಮೋಹನ್ ಸಿಂಗ್ ಕೆಲಸಗಳ ಮೂಲಕ ಜೀವಂತವಾಗಿದ್ದಾರೆ

• ಉದಯವಾಹಿನಿ, ಬೆಳಗಾವಿ

ಮನಮೋಹನ್ ಸಿಂಗ್ ಅವರು ನಿಧನ ಹೊಂದಿಲ್ಲ. ಅವರ ಕೆಲಸಗಳ ಮೂಲಕ ಎಂದಿಗೂ ನಮ್ಮ ನಡುವೆ ಜೀವಂತವಾಗಿದ್ದಾರೆ. ಜನಸಾಮಾನ್ಯನಿಗೆ ಆಹಾರದ ಹಕ್ಕನ್ನು ಸಂವಿಧಾನಾತ್ಮಕವಾಗಿ ನೀಡಿದವರು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು. ಬೆಳಗಾವಿಯಲ್ಲಿ ಹಮ್ಮಿಕೊಂಡಿದ್ದ ದಿವಂಗತ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ಶ್ರದ್ಧಾಂಜಲಿ ಸಭೆಯ ಬಳಿಕ ಶುಕ್ರವಾರ ಮಾಧ್ಯಮಗಳಿಗೆ ಮಾತನಾಡಿದರು. ಅವರು ಜಾರಿಗೆ ತಂದ ಅನೇಕ ಯೋಜನೆಗಳನ್ನು ಯಾವ ಸರ್ಕಾರವು ನಿಲ್ಲಿಸಲು ಆಗುವುದಿಲ್ಲ. ಆಧಾರ್ ಯೋಜನೆ, ಅರಣ್ಯ ಭೂಮಿ ಹಕ್ಕು ಶಿಕ್ಷಣದ ಹಕ್ಕು, ರೈತರಿಗೆ ಸಂಕಷ್ಟದ ಹೊತ್ತಿದಲ್ಲಿ ಪರಿಹಾರ ಪ್ಯಾಕೇಜ್ ಕಾಯ್ದೆ, ಆಶಾ ಕಾರ್ಯಕರ್ತರ ಯೋಜನೆ, ನರೇಗಾ, ಮಾಹಿತಿ ಹಕ್ಕು ಎಂದು ವಿವರಿಸಿದರು. ಅನೇಕ ಬಾರಿ ಕೇವಲ ದೊಡ್ಡ ದೊಡ್ಡ ಉದ್ದಿಮೆದಾರರ ಸಾಲಗಳನ್ನು ಮಾತ್ರ ಮನ್ನಾ ಮಾಡಲಾಗುತ್ತಿತ್ತು ಮನಮೋಹನ್ ಸಿಂಗ್ ಅವರು ಮೊಟ್ಟಮೊದಲ ಬಾರಿಗೆ 70,000 ಕೋಟಿ ರೂ. ರೈತರ ಸಾಲವನ್ನು ಮನ್ನಾ ಮಾಡಿದವರು ಎಂದು ಡಿಸಿಎಂ ಡಿಕೆಶಿ ಹೇಳಿದರು. ಅವರು ನಮ್ಮನ್ನು ಬಿಟ್ಟು ಹೋಗಿರಬಹುದು. ಆದರೆ, ಅವರ ಕಾರ್ಯಕ್ರಮಗಳ ಮೂಲಕ ನಮ್ಮ ನಡುವೆ ಜೀವಂತವಾಗಿದ್ದಾರೆ. ನಾವೆಲ್ಲರೂ ಅವರ ಆದರ್ಶಗಳನ್ನು ಉಳಿಸುವ ಕೆಲಸ ಮಾಡಬೇಕು. ನಾವೆಲ್ಲರೂ ಇವರ ಹಾದಿಯಲ್ಲಿ ನಡೆಯೋಣ ಎಂದು ಆಶಿಸುತ್ತೇನೆ. ಅತ್ಯಂತ ಗೌರವ ಪೂರಕವಾಗಿ ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತೇನೆ ಎಂದು ಭಾವುಕರಾದರು.



## 10 ಸ್ಮಾರ್ಟ್ ಅಪ್‌ಗಳ ಉಪಕರಣಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸಲಿದೆ ಇಸ್ರೋನ ಪಿಒಇಎಂ-4

• ಉದಯವಾಹಿನಿ, ನವದೆಹಲಿ



ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಸ್ಟಾರ್ಟ್ ಅಪ್‌ಗಳಿಗೆ ಸಹಾಯ ಮಾಡಲು ಮುಂದಾಗುತ್ತಿದ್ದು, ಇದರ ಪಿಒಇಎಂ-4 ನೌಕೆಯ ಮೂಲಕ ಬಾಹ್ಯಾಕಾಶ ಸ್ಟಾರ್ಟ್ ಅಪ್ ಕಂಪನಿಗಳಿಗೆ ತಮ್ಮ ಉಪಕರಣಗಳನ್ನು ಬಾಹ್ಯಾಕಾಶಕ್ಕೆ ಹಾರಿಸಲು ಅನುವು ಮಾಡಿಕೊಡುತ್ತಿದೆ. ಹೌದು, ಈ ಪ್ರಯೋಗವು ಭಾರತದ ಬಾಹ್ಯಾಕಾಶ ಪರಿಸರ ವ್ಯವಸ್ಥೆಯು ಕಡಿಮೆ ವೆಚ್ಚದಲ್ಲಿ ತಮ್ಮ ಪ್ರಯೋಗಗಳನ್ನು ಪ್ರಯತ್ನಿಸಲು ಸಹಾಯ ಮಾಡುವುದಲ್ಲದೆ, ರಾಕೆಟ್‌ನ ಮೇಲಿನ ಹಂತಗಳು ಬಾಹ್ಯಾಕಾಶದಲ್ಲಿ ಉತ್ಪತ್ತಿಸುವ ತ್ಯಾಜ್ಯವನ್ನು ಕೂಡಾ ಕಡಿಮೆ ಮಾಡುತ್ತದೆ ಎಂದು ಇಸ್ರೋ ಅಧ್ಯಕ್ಷ ಡಾ ಎಸ್ ಸೋಮನಾಥ್ ಹೇಳಿದ್ದಾರೆ.

ಸ್ಮಾರ್ಟ್ ಅಪ್‌ಗಳಂತಹ ಸಣ್ಣ ಕಂಪನಿಗಳು ಸ್ವತಂತ್ರವಾಗಿ ಬಾಹ್ಯಾಕಾಶಕ್ಕೆ ತಮ್ಮ ಪ್ರಯೋಗಗಳನ್ನು ಉಡಾಯಿಸಲು ಹೆಚ್ಚಿನ ಹಣಕಾಸಿನ ಮೂಲಗಳನ್ನು ಹೊಂದಿರುವುದಿಲ್ಲ. ಹೀಗಾಗಿ ಇಸ್ರೋ ಸಣ್ಣ ಕಂಪನಿಗಳಿಗೆ ಸಹಾಯ ಮಾಡಲು ಪಿಒಇಎಂ-4 ಅನ್ನು ಹೊರತಂದಿದೆ. ಹತ್ತು ಭಾರತೀಯ ಸ್ಟಾರ್ಟ್ ಅಪ್ ಕಂಪನಿಗಳು ಬಾಹ್ಯಾಕಾಶಕ್ಕೆ ಹಸಿರು ಪ್ರೊಪಲ್ಸ್‌ನ್ ಮಾಡ್ಯೂಲ್ ಗಳನ್ನು ಪರೀಕ್ಷಿಸಲಾಗುತ್ತಿದೆ. ತಮ್ಮ ಉಪಕರಣಗಳನ್ನು ಪಿಒಇಎಂ-4 ಮೂಲಕ ಹಾರಿಸಲಿವೆ. ಇದರಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆಯನ್ನು ಬಳಸಿಕೊಂಡು ದೂರದ ಕಂಪ್ಯೂಟಿಂಗ್ ಪ್ರಯೋಗವನ್ನು ಮಾಡಲಾಗುತ್ತಿದೆ.

# 5 ಗ್ಯಾರಂಟಿಗಳ ಜೊತೆಗೆ ಆತಹತ್ಯೆ ಭಾಗ್ಯವನ್ನೂ ಕರುಣಿಸಿದೆ ಸರ್ಕಾರ

● ಕಲಬುರಗಿ ಮಹಾನಗರ ಪಾಲಿಕೆಯ ಮಾಜಿ ಕಾರ್ಪೊರೇಟರ್ ರಾಜು ಕಪನೂರು ವಿರುದ್ಧ ಹಣಕ್ಕೆ ಬೇಡಿಕೆ, ಕೊಲೆ ಬೆದರಿಕೆಯಂತಹ ಆರೋಪ

• ಉದಯವಾಹಿನಿ, ಬೆಂಗಳೂರು

**ಕಾಂಗ್ರೆಸ್ ವಿರುದ್ಧ ವಾಗ್ದಾಳಿ**

ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಸರ್ಕಾರ ರಾಜ್ಯದ ಜನತೆಗೆ ಪಂಚ ಗ್ಯಾರಂಟಿಗಳ ಜೊತೆಗೆ ಆತಹತ್ಯೆಯ ಭಾಗ್ಯವನ್ನೂ ಕರುಣಿಸಿ ನತದೃಷ್ಟ ಕುಟುಂಬಗಳನ್ನು ಅನಾಥವಾಗಿಸಲು ಹೊರಟಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಟೀಕಿಸಿದ್ದಾರೆ. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಕಲಬುರಗಿ ಮಹಾನಗರ ಪಾಲಿಕೆಯ ಮಾಜಿ ಕಾರ್ಪೊರೇಟರ್ ರಾಜು ಕಪನೂರು ವಿರುದ್ಧ ಹಣಕ್ಕೆ ಬೇಡಿಕೆ, ಕೊಲೆ ಬೆದರಿಕೆಯಂತಹ ಗಂಭೀರ ಆರೋಪಗಳನ್ನು ಮಾಡಿ, ಗುತ್ತಿಗೆದಾರ ನೊಬ್ಬ ಆತಹತ್ಯೆಗೆ ಶರಣಾಗಿರುವ ಘಟನೆ ಕುರಿತು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಕಾಂಗ್ರೆಸ್ ಸರ್ಕಾರದಲ್ಲಿ ಕೆಲವು ಮಂತ್ರಿಗಳು ತಮ ಬಲಗೈ ಬಂಟರು ಹಾಗೂ ಆಪ್ತ ಸಹಾಯಕರಿಗೆ ಜನರಲ್ ಪವರ್ ಆಫ್ ಅಟಾರ್ನಿ ನೀಡಿದಂತಿದೆ.

ಇತ್ತೀಚೆಗಷ್ಟೇ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಆಪ್ತಸಹಾಯಕನ ಕಿರುಕುಳಕ್ಕೆ ತಹಸೀಲ್ದಾರ್ ಕಚೇರಿಯ ಎಸ್ಡಿ ರುದ್ರೇಶ್ ಆತಹತ್ಯೆ. ಇದರ ಬೆನ್ನಲ್ಲೇ ವಿಧಾನ ಮಂಡಲದ ಸುವರ್ಣ ಸೌಧಕ್ಕೆ ನುಗ್ಗಿ ಶಾಸಕರಾದ ಸಿ.ಟಿ.ರವಿ ಅವರ ಮೇಲೆ ಗೂಂಡಾಗಿರಿ ಪ್ರದರ್ಶಿಸಿದ್ದ ಸುದ್ದಿ ಹಸಿಯಾಗಿರುವಾಗಲೇ ಇಂದು ಸಚಿವ ಪ್ರಿಯಾಂಕ್ ಖರ್ಗೆ ಅವರ ಆಪ್ತ ರಾಜು ಕಪನೂರನ ಕಿರುಕುಳ ಹಾಗೂ ಬೆದರಿಕೆಯಿಂದ ತತ್ತರಿಸಿದ ಬೀದರ್ ನ ಗುತ್ತಿಗೆದಾರ ಸಚಿನ್ ಸುದೀರ್ಘ ಪತ್ರ ಬರೆದು ಆತಹತ್ಯೆ ಮಾಡಿಕೊಂಡಿದ್ದಾರೆ ಎಂದು ದೂರಿದ್ದಾರೆ.



### ಸಾವಿಗೀಡಾದ ನತದೃಷ್ಟ ಸಚಿನ್ ಆತ್ಮಕ್ಕೆ ಶಾಂತಿ ದೊರಕಲಿ

ಪ್ರಿಯಾಂಕ್ ಖರ್ಗೆ ಅವರ ಬಲಗೈ ಬಂಟ ಹಾಗೂ ಕಾಂಗ್ರೆಸ್ ಮುಖಂಡ ರಾಜುವಿನ ದೌರ್ಜನ್ಯಕ್ಕೆ ಸಿಲುಕಿ ಆತಹತ್ಯೆ ಮಾಡಿಕೊಂಡಿರುವ ಸಚಿನ್ ಬರೆದಿಟ್ಟಿರುವ ಪತ್ರ ಇದಕ್ಕೆ ಸಾಕ್ಷಿ ಒದಗಿಸಿದೆ. ಈ ಕೂಡಲೇ ಪೊಲೀಸ್ ಅಧಿಕಾರಿಗಳು ಪಕ್ಷಪಾತಿಗಳಂತೆ ವರ್ತಿಸುವುದನ್ನು ಬಿಟ್ಟು ಪಾರದರ್ಶಕ ತನಿಖೆ ನಡೆಸದಿದ್ದರೆ ಬಿಜೆಪಿ ಇದನ್ನು ಗಂಭೀರವಾಗಿ ಪರಿಗಣಿಸಿ ಪ್ರಿಯಾಂಕ್ ಖರ್ಗೆ ಅವರು ರಾಜೀನಾಮೆ ನೀಡುವವರೆಗೂ ಹೋರಾಟ ನಡೆಸಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ. ಸಾವಿಗೀಡಾದ ನತದೃಷ್ಟ ಸಚಿನ್ ಆತ್ಮಕ್ಕೆ ಶಾಂತಿ ದೊರಕಲಿ, ಸರ್ಕಾರ ಈ ಕೂಡಲೇ ಆ ಕುಟುಂಬಕ್ಕೆ ಸೂಕ್ತ ಪರಿಹಾರ ಘೋಷಿಸಿ, ಮೃತ ಗುತ್ತಿಗೆದಾರ ಸಚಿನ್ ಪಡೆದಿದ್ದ ಗುತ್ತಿಗೆ ಕೆಲಸಗಳ ಬಾಕಿ ಉಳಿದಿರುವ ಹಣವನ್ನು ಪಾವತಿಸಿ ಆ ಕುಟುಂಬಕ್ಕೆ ಆತಸ್ಥೆರ್ಯ ತುಂಬಲಿ ಹಾಗೂ ತಪ್ಪಿತಸ್ಥರಿಗೆ ಶಿಕ್ಷೆಯಾಗುವ ಮೂಲಕ ನ್ಯಾಯ ಒದಗಿಸಲಿ ಎಂದು ಅವರು ಒತ್ತಾಯಿಸಿದ್ದಾರೆ.



ಕಾಂಗ್ರೆಸ್ ಸರ್ಕಾರ ಪಂಚ ಗ್ಯಾರಂಟಿಗಳ ಜೊತೆಗೆ ಆತಹತ್ಯೆಯ ಭಾಗ್ಯವನ್ನೂ ಕರುಣಿಸಿ ನತದೃಷ್ಟ ಕುಟುಂಬಗಳನ್ನು ಅನಾಥವಾಗಿಸಲು ಹೊರಟಿದೆ. ಪ್ರತಿಯೊಂದು ವಿಷಯದಲ್ಲೂ ಅನಗತ್ಯ ಮೂಗು ತೂರಿಸಿ ತಮ ನಡೆ, ನುಡಿಗಳಲ್ಲಿ ದಾಷ್ಟತನ ಪ್ರದರ್ಶಿಸುವ ಸಚಿವ ಪ್ರಿಯಾಂಕ್ ಖರ್ಗೆ ಈ ಸಾವಿಗೆ ಹೊಣೆಗಾರರಾಗಿದ್ದಾರೆ ಎಂಬುದು ಆತಹತ್ಯೆಗೊಳಗಾದ ದುರ್ದೈವಿ ಗುತ್ತಿಗೆದಾರ ಸಚಿನ್ ಬರೆದಿರುವ ಪತ್ರದಲ್ಲಿ ಸ್ಪಷ್ಟವಾಗಿರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕೂಡಲೇ ಸಚಿವ ಪ್ರಿಯಾಂಕ್ ಖರ್ಗೆ ಅವರ ರಾಜೀನಾಮೆ ಪಡೆಯಲಿ ಎಂದು ಆಗ್ರಹಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದಲೂ ಗುತ್ತಿಗೆದಾರರು ಅತ್ಯಂತ ಆತಂಕ ಸ್ಥಿತಿ ಎದುರಿಸುತ್ತಿದ್ದಾರೆ, ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ನಲುಗಿ ಹೋಗಿದ್ದಾರೆ. ವಿಪರೀತ ಆರ್ಥಿಕ ಒತ್ತಡ ಅವರನ್ನು ಆತಹತ್ಯೆಗೆ ಪ್ರೇರೇಪಿಸುತ್ತಿದೆ. ಸಚಿವರ ಕೈ ಕೆಳಗಿನ ಅಧಿಕಾರಿಗಳು ಹಾಗೂ ಆಪ್ತರ ಒತ್ತಡಗಳು ಗುತ್ತಿಗೆದಾರರನ್ನು ಉಸಿರುಗಟ್ಟಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 102.92 ₹/L ಡೀಸೆಲ್ : 88.99 ₹/L ಬಂಗಾರ: ₹7,800/Gram24ct ₹7,150/Gram22ct ಬೆಳ್ಳಿ: ₹92.50/Gram



## ಸಿದ್ಧಸೂಕ್ತಿ

**ಡಾ ಆರೂಢಭಾರತೀ ಸ್ವಾಮೀಜಿ**
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಮಂದಿರಗಳ ಮೇಲೆ ಮುಸ್ಲಿಮರ ದಾಳಿ

ಇತ್ತೀಚೆಗೆ ಉತ್ತರ ಪ್ರದೇಶದ ಸಂಭಲ್ ಜಿಲ್ಲೆಯಲ್ಲಿ ಒತ್ತುವರಿ ತೆರವುಗೊಳಿಸುವಾಗ ಕಗ್ಗುಸರಾಯಿ ಪ್ರದೇಶದಲ್ಲಿ ಭಸ್ಮಶಂಕರ ದೇವಸ್ಥಾನ ಹಾಗೂ ಬಾವಿ ಪತ್ತೆಯಾಗಿದೆ. ಈ ದೇವಾಲಯದಲ್ಲಿ ಹನುಮಂತನ ಮೂರ್ತಿ ಹಾಗೂ ಶಿವಲಿಂಗ ಇದೆ. ಈ ಶಿವಲಿಂಗವನ್ನು ಕಾರ್ತಿಕ ಮಹಾದೇವ ಎಂದೂ, ಇಲ್ಲಿನ ಬಾವಿಯನ್ನು ಅಮೃತಕೂಪ ಎಂದೂ ಕರೆಯಲಾಗುತ್ತಿತ್ತು. 1978 ರಲ್ಲಿ ನಡೆದ ಕೋಮುಗಲಭೆಯ ವೇಳೆ ಈ ದೇಗುಲಕ್ಕೆ ಬೀಗ ಹಾಕಲಾಗಿದ್ದು ಈ ಪ್ರದೇಶದ ಹಿಂದುಗಳನ್ನು ಸ್ಥಳಾಂತರಿಸಲಾಗಿತ್ತು. ಸಂಭಲ್ ಜಿಲ್ಲೆಯ ಶಾಹಿ ಜಾಮಾ ಮಸೀದಿಯ ಬಳಿಯೇ ಇರುವ ಈ ದೇವಸ್ಥಾನವನ್ನು 13.12.2024 ರಂದು ತೆರವುಗೊಳಿಸಿ ಪೂಜೆಗೆ ಅವಕಾಶ ಮಾಡಿಕೊಡಲಾಗಿದೆ. ಉತ್ತರಪ್ರದೇಶದ ಮುಸ್ಲಿಂ ಬಹುಸಂಖ್ಯಾತ ಪ್ರದೇಶವಾದ ಅಲಿಗಢದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿ ಪಾಳುಬಿದ್ದಿದ್ದ ಶಿವದೇವಾಲಯವನ್ನು 18.12.2024 ರಂದು ಪತ್ತೆ ಹಚ್ಚಲಾಗಿದ್ದು ಶುದ್ಧೀಕರಣಗೊಳಿಸಿ ಪೂಜೆಗೆ ಅನುವು ಮಾಡಿಕೊಡಲಾಗಿದೆ. ಬಹುಸಂಖ್ಯಾತರಾದ ಮೂಲನಿವಾಸಿಗಳಾದ ಹಿಂದುಗಳ ಹಿಂದುಸ್ಥಾನದಲ್ಲಿ ಹಿಂದುದೇವಾಲಯಗಳಿಗೆ ಹಿಂದುಗಳಿಗೆ ಈ ದುರ್ಗತಿ.

# ಬೆಳಗಾವಿಯ ಸಿಪಿಎಡ್ ಮೈದಾನದಲ್ಲಿ ನಡೆದ ಶ್ರದ್ಧಾಂಜಲಿ ಸಭೆ

## ದೇಶದ ಎಲ್ಲಾ ವರ್ಗದ ಜನರನ್ನು ಕಾಪಾಡಿದ ಶ್ರೇಷ್ಠ ಪ್ರಧಾನಿ, ಆರ್ಥಿಕ ತಜ್ಞ ಮನಮೋಹನ್ ಸಿಂಗ್: ಡಿಸಿಎಂ

• **ಉದಯವಾಹಿನಿ, ಬೆಂಗಳೂರು**

ಮನಮೋಹನ್ ಸಿಂಗ್ ಅವರು ಈ ದೇಶದ ಶ್ರೇಷ್ಠ ಪ್ರಧಾನ ಮಂತ್ರಿ, ದೇಶದ ಎಲ್ಲಾ ವರ್ಗದ ಜನರನ್ನು ಕಾಪಾಡಿದ ನಿಜವಾದ ಆರ್ಥಿಕ ತಜ್ಞ ಹಾಗೂ ಕ್ರಾಂತಿಕಾರಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಅಭಿಪ್ರಾಯಪಟ್ಟರು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ನಿಧನದ ಹಿನ್ನೆಲೆಯಲ್ಲಿ ಬೆಳಗಾವಿಯ ಸಿಪಿಎಡ್ ಮೈದಾನದಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಶಿವಕುಮಾರ್ ಅವರು ಮಾತನಾಡಿದರು.




**ಇಡೀ ಗಾಂಧಿ ಭಾರತ ಕಾರ್ಯಕ್ರಮ**

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮನಮೋಹನ್ ಸಿಂಗ್ ಅವರ ಹೆಸರಿನಲ್ಲಿ ಆರ್ಥಿಕ ಸಂಶೋಧನಾ ಹಾಗೂ ಅಧ್ಯಯನ ಕೇಂದ್ರವನ್ನು ಸ್ಥಾಪನೆ ಮಾಡಬೇಕು ಎಂದು ಉನ್ನತ ಶಿಕ್ಷಣ ಸಚಿವರಲ್ಲಿ ಮನವಿ ಮಾಡುತ್ತೇನೆ. ಮುಂದಿನ ಪೀಳಿಗೆಗೆ ಇವರ ಆರ್ಥಿಕ ಕ್ರಾಂತಿ ಸೇರಿದಂತೆ ದೇಶಕ್ಕೆ ನೀಡಿದ ಕೊಡುಗೆಗಳನ್ನು ತಲುಪಿಸುವುದೇ ನಿಜವಾದ ಶ್ರದ್ಧಾಂಜಲಿ, ವಿದ್ಯಾರ್ಥಿಗಳು ಇವರ ಆರ್ಥಿಕ ನೀತಿಗಳನ್ನು ಅಧ್ಯಯನ ಮಾಡುವ ಮೂಲಕ ಮನಮೋಹನ್ ಸಿಂಗ್ ಅವರ ಜ್ಞಾನವನ್ನು ಪಸರಿಸುವ ಹಾಗೂ ಉಳಿಸುವ ಕೆಲಸವಾಗುತ್ತದೆ ಎಂದು ಹೇಳಿದರು.

ಮದುವೆಗೆ ಮಸಣಕೋ ಎಂದ ಕಡೆಗೋಡು ಮಂಕುತಿಮ್ಮ ಎನ್ನುವ ಕವಿ ಡಿವಿಜಿ ಅವರ ಮಾತು ಇಂದಿಗೆ ತಾಳೆಯಾಗುತ್ತಿದೆ. ಕೊರಗಲೇಕೆ ಮರುಗಲೇಕೆ, ಹುಟ್ಟಿ ಬಂದಿದ್ದ ಅಳಲೇಕೆ ಸುಖವೇ ಬರಲೀ, ದುಃಖವೇ ಬರಲಿ, ರೋಗ ಭೋಗವೆ ಇರಲಿ, ಎಲ್ಲಾ ಹೊತ್ತು ಋಣ ತೆತ್ತು, ಮುಂದೆ ಪುಣ್ಯದ ಬೀಜ ಬಿತ್ತು ಎನ್ನುವ ಮಾತಿದೆ. ಮನಮೋಹನ್ ಸಿಂಗ್ ಅವರು ಪುಣ್ಯದ ಹಾಗೂ ಅಭಿವೃದ್ಧಿಯ ಬೀಜವನ್ನು ಬಿತ್ತಿ ಹೋಗಿದ್ದಾರೆ ಅದನ್ನು ನಾವು ಬೆಳೆಸೋಣ ಉಳಿಸೋಣ ಎಂದರು. ನಾವು ಅವರ ನಿಧನಕ್ಕೆ ದುಃಖವನ್ನು ಪಡುವುದರ ಬದಲು ಅವರು ಹಾಕಿಕೊಟ್ಟ ಆದರ್ಶ ಮಾರ್ಗದಲ್ಲಿ ನಡೆಯುವುದೇ ಅವರಿಗೆ ನಾವು ಸಲ್ಲಿಸುವ ಕೊಡುಗೆ ಎಂದು ಹೇಳಿದರು.

> **ಅವರು ಜಾರಿಗೆ ತಂದ ಅನೇಕ ಯೋಜನೆಗಳನ್ನು ಯಾವ ಸರ್ಕಾರವು ನಿಲ್ಲಿಸಲು ಆಗುವುದಿಲ್ಲ. ಆಧಾರ್ ಯೋಜನೆ, ಅರಣ್ಯ ಭೂಮಿ ಹಕ್ಕು ಕಾಯ್ದೆ, ಆಶಾ ಕಾರ್ಯಕರ್ತರ ಯೋಜನೆ, ನರೇಗಾ, ಮಾಹಿತಿ ಹಕ್ಕು, ಶಿಕ್ಷಣದ ಹಕ್ಕು ರೈತರಿಗೆ ಸಂಕಷ್ಟದ ಹೊತ್ತಿದಲ್ಲಿ ಪರಿಹಾರ ಪ್ಯಾಕೇಜ್ ನೀಡುವ ಮೂಲಕ ಅವರ ಬೆನ್ನಿಗೆ ನಿಂತ ಶಕ್ತಿ ಮನಮೋಹನ್ ಸಿಂಗ್ ಅವರು ಎಂದರು.**
>
> **-ಡಿಸಿಎಂ ಡಿಕೆಶಿ**

'ಗಾಂಧಿಯವರ ಇತಿಹಾಸವನ್ನು ಮೆಲುಕು ಹಾಕಲು ಇಡೀ ದೇಶದ ಮೂಲೆ ಮೂಲೆಗಳಿಂದ ನಾಯಕರು ಬೆಳಗಾವಿಗೆ ಬಂದಿದ್ದರು. ನಮ್ಮ ಮುಂದಿನ ಪೀಳಿಗೆಗೆ ಗಾಂಧಿ ಅವರ ಆದರ್ಶಗಳನ್ನು ತಲುಪಿಸುವ ಕೆಲಸಕ್ಕೆ ನಾವು ಮುಂದಾಗಿದೆವು. ಆದರೆ ವಿಧಿಯಾಟ ಬೇರೆಯಾಗಿತ್ತು ಎಂದರು. 'ಇಡೀ ಗಾಂಧಿ ಭಾರತ ಕಾರ್ಯಕ್ರಮಕ್ಕೆ ಸೋನಿಯಾ ಗಾಂಧಿ ಅವರು ಸಾಕ್ಷಿಯಾಗಲಿ ಎಂದು ಜೂಮ್ ಆಪ್ ಮುಖಾಂತರ ಅವರಿಗೆ ಕಾರ್ಯಕ್ರಮದ ಕೊಂಡಿಯನ್ನು ಕಳಿಸಲಾಗಿತ್ತು. ವೇಣುಗೋಪಾಲ್ ಅವರ ಸಲಹೆಯಂತೆ ಮನಮೋಹನ್ ಸಿಂಗ್ ಅವರನ್ನು ಕೂಡ ಈ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲು ನಾವು ಬಯಸಿದ್ದೆವು. ಈ ಕಾರಣಕ್ಕೆ ಅವರ ಕಚೇರಿಯನ್ನು ಸಂಪರ್ಕಿಸಿದಾಗ ಸಿಂಗ್ ಅವರ ಆರೋಗ್ಯ ಸರಿ ಇಲ್ಲ, ಅವರನ್ನು ದೆಹಲಿಯ ಏಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ ಎನ್ನುವ ಮಾಹಿತಿ ದೊರೆಯಿತು. ಅವರು ಆರೋಗ್ಯಯುತವಾಗಿ ಮರಳಿ ಬರುವ ವಿಶ್ವಾಸವಿತ್ತು.

> **ತಮ್ಮ ಆಡಳಿತ ಅವಧಿಯಲ್ಲಿ ಸಿಂಗ್ ಅವರು ರೂಪಿಸಿರುವ ಕಾಯ್ದೆಗಳು ಕರಾರುವಕ್ಕಾಗಿದ್ದವು. ಶಿಕ್ಷಣ ಹಕ್ಕು, ಆರೋಗ್ಯದ ಹಕ್ಕು ಆಹಾರದ ಹಕ್ಕನ್ನು ಪ್ರತಿಪಾದಿಸಿದವರು. ಗ್ರಾಮೀಣ ಭಾಗದ ಜನರ ಆರೋಗ್ಯ ಕಾಪಾಡಲು ಆಶಾ ಕಾರ್ಯಕರ್ತರ ಯೋಜನೆಯನ್ನು ರೂಪಿಸಿದವರು ಎಂದು ಸ್ಮರಿಸಿದರು.**

ಆದರೆ ಇಂದು ಅವರು ನಮ್ಮ ಜೊತೆಯಲ್ಲಿಲ್ಲ ಎಂದರು. ನಾವೆಲ್ಲರೂ ಗಾಂಧಿ ಭಾರತ ಕಾರ್ಯಕ್ರಮ ಮಾಡಲು ಸಜ್ಜಾಗಿದ್ದೆವು ಆದರೆ, ಇದೇ ಚಪ್ಪರದ ಅಡಿಯಲ್ಲಿ ಆರ್ಥಿಕತೆಯ ಗಾಂಧಿ ಮನಮೋಹನ್ ಸಿಂಗ್ ಅವರ ಶ್ರದ್ಧಾಂಜಲಿ ಸಭೆಯನ್ನು ನಡೆಸುತ್ತಿದ್ದೇವೆ. ಇದನ್ನೇ ವಿಧಿಯಾಟ ಎಂದು ಕರೆಯಲಾಗುತ್ತದೆ. ಇದು ಅತ್ಯಂತ ದುಃಖದ ಸಂಗತಿ ಎಂದರು.

### ಅಮ್ಮನ ತೋಳಿನಲ್ಲಿದ್ದ ಮಗುವಿನ ಮೇಲೆ ದಾಳಿ ಮಾಡಿದ ನಾಯಿ

• **ಉದಯವಾಹಿನಿ, ಬೆಂಗಳೂರು**

ಅಮ್ಮನ ತೋಳಿನಲ್ಲಿದ್ದ ಎರಡು ವರ್ಷದ ಮಗುವಿನ ಮೇಲೆ ನಿಷೇಧಿತ ಪಿಟ್ಬುಲ್ ನಾಯಿ ದಾಳಿ ಮಾಡಿದ್ದು, ಮಗುವಿನ ಸ್ಥಿತಿ ಗಂಭೀರವಾಗಿರುವ ಘಟನೆ ಬಾಣಸವಾಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ನೇಪಾಳಿ ಮೂಲದ ನಬ್ರಾಜ್-ಅನುಷ್ಕಾ ದಂಪತಿಯ ಎರಡು ವರ್ಷದ ಮಗುವಿನ ಮೇಲೆ ಪಕ್ಕದ ಮನೆಯವರು ಸಾಕಿದ್ದ ಈ ನಾಯಿ ಮೂರು ದಿನಗಳ ಹಿಂದೆ ದಾಳಿ ಮಾಡಿದ್ದು ಮಗುವಿಗೆ ಶಸ್ತ್ರ ಚಿಕಿತ್ಸೆ ಮಾಡಲಾಗಿದೆ. ಎರಡು ತಿಂಗಳ ಹಿಂದೆಯಷ್ಟೇ ಕೆಲಸ ಅರಿಸಿಕೊಂಡು ನೇಪಾಳಿ ಕುಟುಂಬ ಬೆಂಗಳೂರಿಗೆ ಬಂದಿದ್ದು, ಬಾಣಸವಾಡಿಯ ಸುಬ್ಬನಪಾಳ್ಯದ ಮನೆಯೊಂದರಲ್ಲಿ ವಾಸವಿದ್ದಾರೆ. ಅಂದ ಸಂಜೆ ಮಗುವನ್ನು ಎತ್ತಿಕೊಂಡು ಮನೆ ಮುಂದೆ ನಿಂತಿದ್ದಾಗ ಏಕಾಏಕಿ ಪಕ್ಕದ ಮನೆಯ ನಾಯಿ ಮಗುವಿನ ಮೇಲೆ ಹಾರಿ ಭುಜವನ್ನು ಕಚ್ಚಿ ಎಳೆದಿದೆ. ನಾಯಿಯಿಂದ ತಪ್ಪಿಸಿಕೊಳ್ಳಲು ತಾಯಿ ಯತ್ನಿಸಿದರೂ ಸಾಧ್ಯವಾಗಿಲ್ಲ. ಗಂಭೀರ ಗಾಯಗೊಂಡಿರುವ ಮಗು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದೆ. ಈ ಬಗ್ಗೆ ಮಗುವಿನ ತಾಯಿ ಅವರು ನಾಯಿ ಮಾಲೀಕರ ವಿರುದ್ಧ ನೀಡಿದ ದೂರಿನ ಮೇರೆಗೆ ಬಾಣಸವಾಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

### ಸರ್ಕಾರಿ ನೌಕರರ ಸೌಲಭ್ಯ ಸಕಾಲಕ್ಕೆ ತರಲು ಮನವಿ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಎ.ಅಮೃತ್ ರಾಜ್ ರವರು ಮುಖ್ಯ ಕಾರ್ಯದರ್ಶಿಗೆ ಸರ್ಕಾರಿ ನೌಕರರ ಆಡಳಿತ ಸೌಲಭ್ಯ ಸಕಾಲ ವ್ಯಾಪ್ತಿಗೆ ತರಲು ಮನವಿ ಪತ್ರ ನೀಡಿದರು.



ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ನೌಕರರ ಆಡಳಿತ ಸೌಲಭ್ಯವನ್ನು ಸಕಾಲ ವ್ಯಾಪ್ತಿಗೆ ಒಳಪಡಿಸಲು ಮನವಿ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿ ಬರುವ ಸರ್ಕಾರದ ಸೌಲಭ್ಯವನ್ನು ಸಾರ್ವಜನಿಕರಿಗೆ ಸಕಾಲ ವ್ಯಾಪ್ತಿಯಲ್ಲಿ ತಂದು ಯಶಸ್ವಿಯಾಗಲು ಸರ್ಕಾರಿ ಸೇವೆ ಸಲ್ಲಿಸುತ್ತಿರುವ ಸರ್ಕಾರದ ಅಧಿಕಾರಿ ನೌಕರರು ಕಾರಣ ಕರ್ತರಾಗಿರುತ್ತಾರೆ. ಆದರೆ ಸದರಿ ಅಧಿಕಾರಿ/ನೌಕರರು ಮುಂಬಡ್ತಿ, ವರ್ಗಾವಣೆ, ವಾರ್ಷಿಕ ವೇತನ ಬಡ್ತಿ, ಅನುಕಂಪದ ಆಧಾರದ ಮೇಲೆ ನೌಕರಿ, ನಿವೃತ್ತಿ ವೇತನ ಉಪದಾನಗಳಿಕೆ ರಜೆ, ವೃಂದ ಮತ್ತು ನೇಮಕಾತಿ ನಿಯಾಮವಳಿ (ತಿದ್ದುಪಡಿ) ಮತ್ತು ವೈದ್ಯಕೀಯ ವೆಚ್ಚ ಮರುಪಾವತಿ ಹಾಗೂ ಕರ್ತವ್ಯ ಲೋಪದ ಮೇಲೆ ಅಮಾನತ್ತು ತೆರವುಗೊಳುವಿಕೆ, ಇನ್ನಿತರೆ ಆಡಳಿತ ಸೌಲಭ್ಯವನ್ನು ಪಡೆಯಲು, ಸರ್ಕಾರಿ ನೌಕರರು ಸಾಕಷ್ಟು ತಿಂಗಳು/ವರ್ಷಗಳಾದರು ಆಡಳಿತ ಸೌಲಭ್ಯ ಪಡೆಯಲು ವಿಳಂಭ / ವಂಚಿತರಾಗುತ್ತಿರುತ್ತಾರೆ.

ಆದ್ದರಿಂದ ಸರ್ಕಾರಿ ನೌಕರರು ಸಾರ್ವಜನಿಕರಿಗೆ ಮೂಲಭೂತ ಸೇವೆಯನ್ನು ಸಕಾಲ ವ್ಯಾಪ್ತಿಯಲ್ಲಿ ನೀಡುತ್ತಿರುವುದರಿಂದ, ಅದರಂತೆ ಸರ್ಕಾರಿ ನೌಕರರಿಗೆ ಸಹ ಆಡಳಿತ ಸೌಲಭ್ಯವನ್ನು ಪಡೆಯಲು ಸಕಾಲ ವ್ಯಾಪ್ತಿಗೆ ತರಲು ಈ ಮೂಲಕ ಮುಖ್ಯ ಕಾರ್ಯದರ್ಶಿಗೆ ಕೋರಲಾಗಿದೆ.

### ಜಮೀರ್ ಇಲಾಖೆಯಲ್ಲಿ ಪೆಟ್ರೋಲ್ ಹಗರಣ, ಏನಿದು ಯತ್ನಾಳ್ ಆರೋಪ

• **ಉದಯವಾಹಿನಿ, ಬೆಂಗಳೂರು**

ಅಲ್ಪಸಂಖ್ಯಾತ ಕಲ್ಯಾಣ, ವಕ್ಫ್ ಹಾಗೂ ಹಜ್ ಇಲಾಖೆಯಲ್ಲಿ ನಕಲಿ ಇಂಡೆಂಟ್‌ಗಳನ್ನು ಕೊಟ್ಟು ಪೆಟ್ರೋಲ್ ದುರ್ಬಳಕೆ ಮಾಡಲಾಗುತ್ತಿದೆ ಎಂದು ಭಾರೀ ಭ್ರಷ್ಟಾಚಾರದ ಆರೋಪವನ್ನು ಬಿಜೆಪಿಯ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರು ಮಾಡಿದ್ದಾರೆ. ಈ ಸಂಬಂಧ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಯತ್ನಾಳ್ ಪತ್ರ ಬರೆದು, ಸರ್ಕಾರದ ಎಲ್ಲಾ ಇಲಾಖೆಗಳಿಗೂ ಇಂಧನ ಮಿತಿ ಮಾರ್ಗಸೂಚಿ ಹೊರಡಿಸುವಂತೆ ಮನವಿ ಮಾಡಿಕೊಂಡಿದ್ದಾರೆ. ರಾಜ್ಯದ ತೆರಿಗೆ ಹಣವನ್ನು ಅತ್ಯಂತ ಜವಾಬ್ದಾರಿಯಿಂದ ರಾಜ್ಯದ ಕಲ್ಯಾಣಕ್ಕೆ, ಅಭಿವೃದ್ಧಿ ಕಾರ್ಯಗಳಿಗೆ, ಉದ್ಯೋಗ, ಮೂಲಸೌಕರ್ಯ ಅಭಿವೃದ್ಧಿ, ಬಡವರ, ರೈತರ ಶ್ರೇಯೋಭಿವೃದ್ಧಿಗೆ, ಮಹಿಳಾ ಸಬಲೀಕರಣಕ್ಕೆ ಉಪಯೋಗಿಸಿಕೊಳ್ಳಬೇಕು. ಆದರೆ, ಇಲಾಖೆಯಲ್ಲಿ ಮನಬಂದಂತೆ ಪೆಟ್ರೋಲ್ ಇಂಡೆಂಟ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ.




**ಇಂಡೆಂಟ್‌ಗಳನ್ನು ಕೊಟ್ಟು ಪೆಟ್ರೋಲ್ ದುರ್ಬಳಕೆ**

ಆ ಮೂಲಕ ಸರ್ಕಾರಿ ವಾಹನ ಚಾಲಕರು ಹಾಗೂ ಪೆಟ್ರೋಲ್ ಸರ್ವಿಸ್ ಸ್ಟೇಷನ್ ನವರು ದೊಡ್ಡ ಭ್ರಷ್ಟಾಚಾರ ಎಸಗಿದ್ದಾರೆಂದು ಆಪಾದನೆ ಮಾಡಿದ್ದಾರೆ. ಕಾರಿಗೆ ಪೆಟ್ರೋಲ್ ಹಾಕಿಸುವಾಗ ಸಂಬಂಧಪಟ್ಟ ಇಲಾಖೆ ಸೀಲ್ ಇರಬೇಕು ಮತ್ತು ಇಲಾಖೆಯ ಮುಖ್ಯಸ್ಥರ ಸಹಿ ಕೂಡ ಇರಬೇಕು. ಆದ್ರೆ, ಇಲಾಖೆಯ ಕಾರ್ಯದರ್ಶಿ ಮನೋಜ್ ಕುಮಾರ್ ಅವರ ವಾಹನ ಸಂಖ್ಯೆ KA 01 GB 9990ಗೆ ಇಂಡೆಂಟ್‌ಗಳು ಇಲ್ಲ. ಆದರೂ ಪೆಟ್ರೋಲ್ ತುಂಬಿಸಲಾಗಿದೆ. ಈ ಬಗ್ಗೆ ಮಾಧ್ಯಮಗಳು ದಾಖಲೆ ಸಮೇತ ಬಯಲು ಮಾಡಿವೆ. ಕೇವಲ 5 ತಿಂಗಳಲ್ಲಿ ಈ ವಾಹನಕ್ಕೆ 390 ಲೀಟರ್ ಪೆಟ್ರೋಲ್ ಹಾಕಿಸಲಾಗಿದೆ.

> **ಚಾಲಕ ಮಹೇಶ್ ಎನ್ ಎಂಬುವವರು 2023 ಡಿಸೆಂಬರ್, 2024 ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಮೇ ತಿಂಗಳ ಇಂಧನನಿಂದ ಬಿಲ್‌ಗಳಲ್ಲಿ ವ್ಯತ್ಯಾಸ ಆಗಿದೆ. ಈ ಸಂಬಂಧ ದಾಖಲೆಯನ್ನು ಪತ್ರದ ಮೂಲಕ ಲಗತ್ತಿರಿಸುತ್ತೇನೆ ಎಂದು ಉಲ್ಲೇಖಿಸಿದ್ದಾರೆ.**

### ಬೈಕ್ ಸ್ಕಿಡ್ ಆಗಿ ಬಿದ್ದ ಸವಾರನ ಮೇಲೆ ಹರಿದ ಅಪರಿಚಿತ ವಾಹನ

• **ಉದಯವಾಹಿನಿ, ಬೆಂಗಳೂರು**

ಪ್ಲೈಓವರ್ ಮೇಲೆ ಸ್ಕಿಡ್ ಆಗಿ ಬಿದ್ದ ಬೈಕ್ ಸವಾರನ ಮೇಲೆ ಅಪರಿಚಿತ ವಾಹನವೊಂದು ಹರಿದುಹೋದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಬೆಂಗಳೂರಿನ ಕೆ.ಆರ್.ಮಾರುಕಟ್ಟೆ ಬಳಿ ನಡೆದಿದೆ. ಶಂಕರ್ ಮೃತ ದುರ್ದೈವಿ. ಬೈಕ್‌ನಲ್ಲಿ ತೆರಳುತ್ತಿದ್ದ ಶಂಕರ್ ಸ್ಕಿಡ್ ಆಗಿ ಕೆಳಗೆ ಬಿದ್ದಿದ್ದಾರೆ. ಈ ವೇಳೆ ಬಂದ ಅಪರಿಚಿತ ವಾಹನ ಅವರ ಮೇಲೆ ಹರಿದು ಹೋಗಿದ್ದು, ಸ್ಥಳದಲ್ಲೇ ಶಂಕರ್ ಸಾವನ್ನಪ್ಪಿದ್ದಾರೆ. ಸದ್ಯ ಶಂಕರ್ ಮೃತದೇಹ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

### ವೈದ್ಯ ದಂಪತಿಗೂ ವಂಚಿಸಿದ್ದ ಖತರ್ನಾಕ್ ವಂಚಕಿ ಐಶ್ವರ್ಯಾ..!

• **ಉದಯವಾಹಿನಿ, ಬೆಂಗಳೂರು**

ಮಾಜಿ ಸಂಸದ ಡಿ.ಕೆ. ಸುರೇಶ್ ಸಹೋದರಿ ಎಂದು ನಂಬಿಸಿ ವಂಚನೆ ಮಾಡಿರುವ ಆರೋಪ ಪ್ರಕರಣದ ಐಶ್ವರ್ಯಾ ಗೌಡ ಈ ಹಿಂದೆಯೂ ಕೋಟ್ಯಂತರ ರೂ. ವಂಚಿಸಿದ್ದಳು ಎಂಬುದು ತನಿಖೆಯ ವೇಳೆ ಬಯಲಾಗಿದೆ. ಕಳೆದ ಫೆಬ್ರವರಿಯಲ್ಲಿ ವಿಜಯ ನಗರ ಪೊಲೀಸ್ ಠಾಣೆಯಲ್ಲಿ ಈಕೆಯ ವಿರುದ್ಧ ವಂಚನೆ ಪ್ರಕರಣವೊಂದು ದಾಖಲಾಗಿದೆ.

ವೃತ್ತಿಯಲ್ಲಿ ವೈದ್ಯರಾಗಿರುವ ವಿಜಯನಗರ ನಿವಾಸಿ ಡಾ.ಗಿರೀಶ್ ಮತ್ತು ಅವರ ಪತ್ನಿ ಡಾ.ಮಂಜುಳಾ ದಂಪತಿಗೆ ಸೆಕೆಂಡ್ ಹ್ಯಾಂಡ್ ಕಾರು ಕೊಡಿಸುವುದಾಗಿ 6.2 ಕೋಟಿ ರೂ. ಪಡೆದು ವಂಚಿಸಿದ ಆರೋಪದಡಿ ಈ ದೂರು ದಾಖಲಾಗಿದೆ.




ಏನಿದು ಪ್ರಕರಣ?: 2022 ರಲ್ಲಿ ಕಾಸ್ಮಿಟಿಕ್ ಸರ್ಜರಿ ಮಾಡಿಸಲು ಐಶ್ವರ್ಯಾ ಗೌಡ ಆಸ್ಪತ್ರೆಗೆ ಬಂದಾಗ ಡಾ.ಗಿರೀಶ್ ದಂಪತಿಗೆ ಪರಿಚಿತರಾಗಿದ್ದಾರೆ. ಈ ವೇಳೆ ನಾನು ರಿಯಲ್ ಎಸ್ಟೇಟ್, ಫೈನಾನ್ಸ್ ವ್ಯವಹಾರ ಮಾಡುತ್ತಿದ್ದೇನೆ. ಜೊತೆಗೆ ಐಷಾರಾಮಿ ಸೆಕೆಂಡ್ ಹ್ಯಾಂಡ್ ಕಾರುಗಳ ವ್ಯವಹಾರ ಸಹ ಮಾಡುತ್ತಿದ್ದೇನೆ ಎಂದು ಹೇಳಿಕೊಂಡಿದ್ದಾಳೆ. ಆಗ ವೈದ್ಯ ದಂಪತಿ ಸೆಕೆಂಡ್ ಹ್ಯಾಂಡ್ ಕಾರು ಖರೀದಿಸುವ ಬಗ್ಗೆ ಹೇಳಿದ್ದಾರೆ. ಈ ವೇಳೆ ಕಡಿಮೆ ಬೆಲೆಗೆ ಸೆಕೆಂಡ್ ಹ್ಯಾಂಡ್ ಐಷಾರಾಮಿ ಕಾರು ಕೊಡಿಸುವುದಾಗಿ ಆರೋಪಿತೆ ಆನ್‌ಲೈನ್ ಮೂಲಕ 2.75 ಕೋಟಿ ರೂ. ಮತ್ತು 3.25 ಕೋಟಿ ರೂ. ನಗದು ಪಡೆದುಕೊಂಡಿದ್ದಾಳೆ. ಬಳಿಕ ಕಾರು ಕೊಡಿಸದೆ ವಂಚಿಸಿದ್ದಾಳೆ ಎಂದು ವೈದ್ಯ ದಂಪತಿ ದೂರಿನಲ್ಲಿ ತಿಳಿಸಿದ್ದಾರೆ. ಇತ್ತ ಹಣ ವಾಪಸ್ ಕೇಳಿದ್ದಕ್ಕೆ ವೈದ್ಯ ದಂಪತಿಗೆ ಐಶ್ವರ್ಯಾ ಪ್ರಾಣ ಬೆದರಿಕೆ ಹಾಕಿದ್ದಾಳೆ. ಹಣ ಕೇಳಿದರೆ ನಿಮ್ಮ ಮೇಲೆ ರೇಪ್ ಕೇಸ್ ದಾಖಲಿಸುವುದಾಗಿ ಬೆದರಿಸಿದ್ದಾಳೆ.

> **ಈ ವಿಚಾರವನ್ನು ಇಲ್ಲಿಗೆ ಬಿಡಬೇಕಾದರೆ 5 ಲಕ್ಷ ರೂ. ಕೊಡಬೇಕು ಎಂದು ಬೇಡಿಕೆ ಇರಿಸಿ, ಡಾ.ಗಿರೀಶ್ ಅವರಿಂದ 2 ಲಕ್ಷ ರೂ. ಸುಲಿಗೆ ಮಾಡಿದ್ದಾಳೆ ಎಂದು ಆರೋಪಿಸಲಾಗಿದೆ. ಈ ಸಂಬಂಧ ವೈದ್ಯ ಗಿರೀಶ್ ದೂರು ನೀಡಿದ್ದರು. ಆದರೆ ಹೈಕೋರ್ಟ್ ತನಿಖೆಗೆ ತಡೆಯಾಜ್ಞೆ ನೀಡಿದೆ.**

### ಹವಾಮಾನ ಇಲಾಖೆ ಮುನ್ಸೂಚನೆ

• **ಉದಯವಾಹಿನಿ, ಬೆಂಗಳೂರು**

ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ 2 ದಿನಗಳಿಂದ ಒಂದೇ ಸಮನೆ ಜಿಟಿ ಜಿಟಿ ಮಳೆಯಾಗುತ್ತಿದ್ದು, ಇದರೊಂದಿಗೆ ಶೀತ ಗಾಳಿಯೂ ಹೆಚ್ಚಿದೆ. ಬೆಂಗಳೂರಿನಲ್ಲಿ ಒಂದೆಡೆ ಮಳೆ, ಶೀತಗಾಳಿ, ದಟ್ಟವಾದ ಮೋಡಕವಿದ ಕರ್ನಾಟಕ ವಾತಾವರಣವಿದ್ದು ಇಡೀ ನಗರವನ್ನು ವಾತಾವರಣ ಕೂಲ್ ಕೂಲ್ ಮಾಡಿದೆ.

ನಿನ್ನೆಯಿಂದ ಬೆಂಗಳೂರಿನಲ್ಲಿ ಒಂದೇ ಸಮನೆ ಜಿಟಿ ಜಿಟಿ ಮಳೆಯಾಗುತ್ತಿದ್ದು ಮೈಕೊರೆವ ಚಳಿ ಹೆಚ್ಚಾಗಿದೆ. ಬಂಗಾಳ ಉಪಸಾಗರದಲ್ಲಿ ವಾಯುಭಾರ ಕುಸಿತವಾಗಿರುವ ಹಿನ್ನೆಲೆಯಲ್ಲಿ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಳೆಯಾಗಲಿದೆ. ಕರಾವಳಿ, ಉತ್ತರ ಒಳನಾಡಿನ ಕೆಲ ಜಿಲ್ಲೆಗಳಲ್ಲಿಯೂ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

### ಸರ್ಕಾರಿ ನೌಕರರಿಗೆ ಬಂಪರ್: ಡಿಎ ಹೆಚ್ಚಳ ಶೀಘ್ರ!

• **ಉದಯವಾಹಿನಿ, ಬೆಂಗಳೂರು**

2025 ಸಂತೋಷದ ವರ್ಷವಾಗಿರಲಿದೆ ಎಂದು ಹೇಳಲಾಗುತ್ತಿದೆ. ಅದರಲ್ಲೂ ಕೇಂದ್ರ ಸರ್ಕಾರಿ ನೌಕರರಿಗೆ ಮುಂದಿನ ವರ್ಷ ಭರ್ಜರಿ ಗುಡ್ ನ್ಯೂಸ್ ಕಾದಿದೆ. ಕೇಂದ್ರ ಸರ್ಕಾರಿ ನೌಕರರ ತುಟ್ಟಿ ಭತ್ಯೆ ಪರಿಷ್ಕರಣೆಯು 2025ನೇ ಸಾಲಿನ ಜನವರಿಯಲ್ಲಿ ನಡೆಯಲಿದೆ. ಕೇಂದ್ರ ಸರ್ಕಾರಿ ನೌಕರರು ಡಿಎ ಹೆಚ್ಚಳಕ್ಕಾಗಿ ಕಾಯುತ್ತಿದ್ದಾರೆ. ಇದೀಗ ಈ ವಿಷಯಕ್ಕೆ ಸಂಬಂಧಿಸಿದಂತೆ ಮಹತ್ವದ ಅಪ್‌ಡೇಟ್ ಬಂದಿದೆ.

ಆದರೆ, ಇದರ ನಡುವೆ ಆಲ್ ಇಂಡಿಯಾ ಕನ್ಸೂಮರ್ ಪ್ರೈಸ್ ಇಂಡೆಕ್ಸ್ ವರದಿಯ ನಿರೀಕ್ಷೆ ಸಹ ಮುಂದುವರಿದಿದೆ ಎಂದು ಹೇಳಲಾಗಿದೆ. ಈ ವರದಿಗಾಗಿ ಕಾಯುತ್ತಿರುವ ಹಿನ್ನೆಲೆಯಲ್ಲಿ ಡಿಎ ಪರಿಷ್ಕರಣೆ ಪ್ರಕ್ರಿಯೆ ಅಲ್ಪ ಪ್ರಮಾಣದಲ್ಲಿ ಹಿನ್ನಡೆ ಆಗುವ ಸಾಧ್ಯತೆಯೂ ಇದೆ. AICPI ಪ್ರಕಾರ ಡಿಎ ಶೇ.56ರಕ್ಕೆ ಹೆಚ್ಚಳವಾಗುವ ಸಾಧ್ಯತೆ ಇದೆ. ಡಿಎ ಹೆಚ್ಚಳಕ್ಕೆ ಸಂಬಂಧಿಸಿದಂತೆ ಪ್ರಮುಖ ಮಾಹಿತಿ ಇಲ್ಲಿದೆ.




ಕೇಂದ್ರ ಸರ್ಕಾರವು ಸರ್ಕಾರಿ ನೌಕರರ ಜೀವನಮಟ್ಟವನ್ನು ಸುಧಾರಿಸುವ ಉದ್ದೇಶದಿಂದ ಎಐಸಿಪಿಐ ವರದಿಯನ್ನು ಆಧರಿಸಿ ಡಿಎ ಹೆಚ್ಚಳ ಮಾಡುತ್ತದೆ. ಸಾಮಾನ್ಯವಾಗಿ ಕೇಂದ್ರ ಸರ್ಕಾರವು ವರ್ಷಕ್ಕೆ ಎರಡು ಬಾರಿ ತುಟ್ಟಿ ಭತ್ಯೆಯನ್ನು (ಡಿಎ) ಹೆಚ್ಚಳ ಮಾಡುತ್ತದೆ. ಪರಿಷ್ಕರಣೆ ಪ್ರಕ್ರಿಯೆಗಳು ನಿರಂತರವಾಗಿ ನಡೆಯುತ್ತಿರುತ್ತವೆ.

ಸಾಮಾನ್ಯವಾಗಿ ಜನವರಿಯಿಂದ ಜೂನ್ ಅವಧಿಯಲ್ಲಿ ಹಾಗೂ ಜುಲೈನಿಂದ ಡಿಸೆಂಬರ್ ಅವಧಿಯಲ್ಲಿ ಡಿಎ ಪರಿಷ್ಕರಣೆ ಪ್ರಕ್ರಿಯೆ ನಡೆಯುತ್ತದೆ.

### ಮತ್ತೆ ಪೊಲೀಸರ ಅತಿಥಿಯಾದ ವಿಕ್ಕಿಪೀಡಿಯಾ ವಿಕಾಸ್

• **ಉದಯವಾಹಿನಿ, ಬೆಂಗಳೂರು**

ನಾನು ನಂದಿನಿ' ಹಾಡಿನ ಖ್ಯಾತಿಯ ವಿಕ್ಕಿ, ಅಮಿತ್ ಚಿಟ್ಟೆ ಇದೀಗ ಪೊಲೀಸರ ಅತಿಥಿಯಾಗಿದ್ದಾರೆ. ನಾನು ನಂದಿನ ಬೆಂಗಳೂರಿಗೆ ಬಂದಿನಿ ಎಂಬ ಈ ಹಾಡು ದೇಶ ದಾದ್ಯಂತ ಖ್ಯಾತಿ ಪಡೆದು ವಿಕ್ಕಿ ಅವರಿಗೆ ದೊಡ್ಡ ಹೆಸರನ್ನೂ ತಂದುಕೊಟ್ಟಿತು. ಆದರೆ, ಇದೀಗ ಅದೇ ವಿಕ್ಕಿ ಹಾಗೂ ಅಮಿತ್ ಚಿಟ್ಟೆ ಇಬ್ಬರೂ ಸ್ಕಾಮ್ ಮಾಡಲು ಹೋಗಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ ಎಂದು ವಿಡಿಯೋದಲ್ಲಿ ತೋರಿಸಲಾಗಿದೆ. ಸೋಶಿಯಲ್ ಮೀಡಿಯಾದಲ್ಲಿ ಹೊಸ ಹೊಸ ವಿಡಿಯೋವನ್ನು ಶೇರ್ ಮಾಡಿಕೊಂಡು ನೆಟ್ಟಿಗರಿಗೆ ಮನರಂಜನೆ ನೀಡುತ್ತಿದ್ದ ಕಂಟೆಂಟ್ ಕ್ರಿಯೇಟರ್ ವಿಕ್ಕಿಪೀಡಿಯಾ ವಿಕಾಸ್ ಪೊಲೀಸರ ಅತಿಥಿಯಾಗಿದ್ದಾರೆ. ಭಿನ್ನ ವಿಭಿನ್ನ ರೀಲ್ಸ್‌ಗಳನ್ನು ಶೇರ್ ಮಾಡಿ ಸಖತ್ ಸುದ್ದಿಯಲ್ಲಿ ಇರುತ್ತಿದ್ದ ಕಂಟೆಂಟ್ ಕ್ರಿಯೇಟರ್ ವಿಕ್ಕಿಪೀಡಿಯಾ ವಿಕಾಸ್‌ಗೆ ಮತ್ತೊಂದು ಹೊಸ ಹಾಡನ್ನು ರೆಡಿ ಮಾಡಿದ್ದಾರೆ. ಅದೇ ವಿಡಿಯೋವನ್ನು ತಮ್ಮ ಇನ್ಸ್ಟಾಗ್ರಾಮ್ ಖಾತೆಯಲ್ಲಿ ಶೇರ್ ಮಾಡಿಕೊಂಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಅದರಲ್ಲೂ ರಾಜಧಾನಿ ಬೆಂಗಳೂರಿನಲ್ಲಿ ಸೈಬರ್ ಕ್ರೈಮ್ ಅಪರಾಧಗಳು ಜಾಸ್ತಿ ನಡೆಯುತ್ತಿವೆ. ಇದಕ್ಕೆ ಸಾಕ್ಷಿ ಎಂಬಂತೆ ಒಂದೇ ವರ್ಷದಲ್ಲಿ ಸಾವಿರ ಕೋಟಿಗೂ ಅಧಿಕ ಹಣ ಸೈಬರ್ ವಂಚಕರ ಪಾಲಾಗಿದೆ. ಹೀಗಾಗಿ ಇಂತಹ ವಂಚಕರಿಗೆ ಆಹಾರವಾಗಬಾರದು ಎಂದು ವಿಕಿಪೀಡಿಯಾ ವಿಕಾಸ್ ವಿಡಿಯೋ ಮೂಲಕ ನೆಟ್ಟಿಗರಿಗೆ ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದ್ದಾರೆ.




### ಕಾಂಗ್ರೆಸ್ ಅಧಿವೇಶನದಲ್ಲಿ ಮಹಿಳೆಯರನ್ನು ತಳ್ಳಿದ್ರಾ ಡಿಸಿಎಂ ಡಿಕೆ ಶಿವಕುಮಾರ್..?

• **ಉದಯವಾಹಿನಿ, ಬೆಂಗಳೂರು**

ಕಾಂಗ್ರೆಸ್ ಅಧಿವೇಶನದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಮಹಿಳೆಯರನ್ನು ತಳ್ಳಿದ್ದಾರೆ ಎನ್ನಲಾದ ವಿಡಿಯೋವೊಂದು ಸೋಶಿಯಲ್ ಮೀಡಿಯಾದಲ್ಲಿ ಚರ್ಚೆಗೆ ಕಾರಣವಾಗಿದೆ. ಈ ಬಗ್ಗೆ ಬಿಜೆಪಿ ತನ್ನ ಎಕ್ಸ್ ಖಾತೆಯಲ್ಲಿ ವಿಡಿಯೋವೊಂದನ್ನು ಹಂಚಿಕೊಂಡಿದೆ. ಡಿಸಿಎಂ ಡಿಕೆ ಶಿವಕುಮಾರ್ ಗೂಂಡಾಗಳಂತೆ ವರ್ತಿಸುತ್ತಾರೆ ಮತ್ತು ತನ್ನ ಬಾಸ್ ಅನ್ನು ಸಮಾಧಾನಪಡಿಸಲು ಕಾಂಗ್ರೆಸ್ ಕಾರ್ಯಕರ್ತೆಯರನ್ನು ಪಕ್ಕಕ್ಕೆ ತಳ್ಳುತ್ತಾರೆ. ಕಾಂಗ್ರೆಸ್ ಆಡಳಿತದಲ್ಲಿ ಮಹಿಳೆಯರು ಅನುಭವಿಸಿದ ಅಗೌರವ ಇದು. ತಮ್ಮದೇ ಸದಸ್ಯರು ಇಂತಹ ಅವಮಾನವನ್ನು ಎದುರಿಸಿದರೆ, ಕಾಂಗ್ರೆಸ್ ಆಡಳಿತದಲ್ಲಿ ದೇಶಾದ್ಯಂತ ಮಹಿಳೆಯರು ಸುರಕ್ಷತೆಯನ್ನು ಹೇಗೆ ನಿರೀಕ್ಷಿಸಬಹುದು ಎಂದು ಬಿಜೆಪಿ ಟೀಟ್ ಮಾಡಿದೆ.

### ಲೈಂಗಿಕ ದೌರ್ಜನ್ಯ: ಆರೋಪ ಕನ್ನಡದ ಖ್ಯಾತ ಕಿರುತೆರೆ ನಟ ಚರಿತ್ ಬಾಳಪ್ಪ ಅರೆಸ್ಟ್

• **ಉದಯವಾಹಿನಿ, ಬೆಂಗಳೂರು**

ಖ್ಯಾತ ಕಿರುತೆರೆ ನಟ ಚರಿತ್ ವಿರುದ್ಧ ಲೈಂಗಿಕ ದೌರ್ಜನ್ಯ ಆರೋಪ ಮಾಡಲಾಗಿದೆ. ಈ ಸಂಬಂಧ ಅವರ ವಿರುದ್ಧ ಎಫ್ಐಆರ್ ಕೂಡ ದಾಖಲಾಗಿದೆ. ಈ ಪ್ರಕರಣದಲ್ಲಿ ಕಿರುತೆರೆ ನಟ ಚರಿತ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಬೆಂಗಳೂರಿನ ಆರ್ ಆರ್ ನಗರ ಪೊಲೊಲೀಸ್ ಠಾಣೆಯಲ್ಲಿ ಕನ್ನಡದ ಮುದ್ದು ಲಕ್ಷ ಅಮೀ ಸೀರಿಯಲ್ ನಟ ಚರಿತ್ ಬಾಳಪ್ಪ ಅವರ ವಿರುದ್ಧ ಯುವತಿಯೊಬ್ಬಳು ಲೈಂಗಿಕ ದೌರ್ಜನ್ಯ ಆರೋಪ ಮಾಡಿದ್ದಾರೆ. ಈ ಸಂಬಂಧ ದೂರು ನೀಡಿದ ಕಾರಣ, ನಟ ಚರಿತ್ ಬಾಳಪ್ಪ ವಿರುದ್ಧ ಎಫ್ಐಆರ್ ದಾಖಲಾಗಿದೆ. ಇನ್ನೂ ಪರಿಚಯದ ಗೆಳತಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಪ್ರಕರಣದ ದಾಖಲಾದ ನಂತ್ರ ಚರಿತ್ ಬಾಳಪ್ಪ ಅವರನ್ನು ಆರ್‌ಆರ್ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಕರ್ನಾಟಕ ಚರಿತ್ ಬಾಳಪ್ಪ ಅವರು ಕನ್ನಡದ ಮುದ್ದು ಲಕ್ಷ್ಮೀ ಸೀರಿಯಲ್ ಸೇರಿದಂತೆ ಇತರೆ ಧಾರವಾಹಿಗಳಲ್ಲಿ ನಟಿಸಿದ್ದಾರೆ. ಅಲ್ಲದೇ ತೆಲುಗಿನ ಕಿರುತೆರೆಯಲ್ಲೂ ನಟಿಸಿದ್ದಾರೆ. ಅಂದಹಾಗೇ ಯುವತಿ ನೀಡಿರುವಂತ ದೂರಿನಲ್ಲಿ ಕಿರುತೆರೆ ನಟ ಚರಿತ್ ಬಾಳಪ್ಪ ಅವರು ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ.

### ಚಿಣ್ಣರ ನೃತ್ಯ ಸಂಹಿತೆ - 2024

• **ಉದಯವಾಹಿನಿ, ಬೆಂಗಳೂರು**

ಪ್ರಣವಾಂಜಲಿ ಅಕಾಡೆಮಿ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ ಸಂಸ್ಥೆಯು ಡಿ. 28, ಶನಿವಾರ ಬೆಳಗ್ಗೆ 10 ಗಂಟೆಗೆ ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ವಿಶೇಷವಾದ ನೃತ್ಯ ಹಬ್ಬ, ಚಿಣ್ಣರ ನೃತ್ಯ ಸಂಹಿತ, ಮಕ್ಕಳಿಂದ ಮಕ್ಕಳಿಗಾಗಿ ಕಾರ್ಯಕ್ರಮ ಆಯೋಜಿಸಿದ್ದಾರೆ.




ವಿದುಷಿ ಶ್ರೀಮತಿ ಸ್ಮಿತಾ ಶ್ರೀಪತಿರವರ ನಿರ್ದೇಶನದಲ್ಲಿ ಅರ್ಥ ನೃತ್ಯ ಕಲಾಮಂದಿರದ ಮಕ್ಕಳು ಭರತನಾಟ್ಯವನ್ನು, ವಿದುಷಿ ಶ್ರೀಮತಿ ಗೌರಿ ಸಾಗರ್ ರವರ ನಿರ್ದೇಶನದಲ್ಲಿ ಶ್ರೀ ಕಂಠೇಶ್ವರ ಕಲಾ ಕೇಂದ್ರದ ಮಕ್ಕಳು ಭರತನಾಟ್ಯವನ್ನು, ವಿದುಷಿ ಶ್ರೀಮತಿ ಭಾನುಪ್ರಿಯಾ ರಾಕೇಶ್ ರವರ ನಿರ್ದೇಶನದಲ್ಲಿ ಅರ್ಕ ಕಲಾ ಕುಟಿರದ ಮಕ್ಕಳು ಭರತನಾಟ್ಯವನ್ನು, ವಿದುಷಿ ಶ್ರೀಮತಿ ಪದ್ಮಜ ಜಯರಾಮ್ ರವರ ನಿರ್ದೇಶನದಲ್ಲಿ ಶ್ರೀ ನಾಟ್ಯ ಕಲಾರ್ಪಣ ನೃತ್ಯ ಕೇಂದ್ರದ ಮಕ್ಕಳು ಭರತನಾಟ್ಯವನ್ನು, ವಿದ್ವಾನ್ ಕಲಾಯೋಗಿ ಕೆ ಪಿ ಸತೀಶ್ ಬಾಬು ರವರ ನಿರ್ದೇಶನದಲ್ಲಿ ನಾಟ್ಯೇಶ್ವರ ನೃತ್ಯ ಶಾಲೆಯ ಮಕ್ಕಳು ಭರತನಾಟ್ಯ ಜಾನಪದ ನೃತ್ಯವನ್ನು ಮಾಡುತ್ತಿದ್ದಾರೆ. ಮುಖ್ಯ ಅತಿಥಿಗಳಾಗಿ ಶ್ರೀ ಆರ್ ಚಂದ್ರಶೇಖರ್ (ಸಹಾಯಕ ನಿರ್ದೇಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ನಗರಜಿಲ್ಲೆ) ಹಾಗೂ ನೃತ್ಯ ದಿಶಾ ಟ್ರಸ್ಟ್‌ನ ನಿರ್ದೇಶಕರು, ಡಾ. ದರ್ಶಿನಿ ಮಂಜುನಾಥ್ ರವರು ಆಗಮಿಸುತ್ತಿದ್ದಾರೆ ಎಂದು ಪ್ರಣವಾಂಜಲಿ ಸಂಸ್ಥೆಯ ನಿರ್ದೇಶಕಿ ಪವಿತ್ರ ಪ್ರಶಾಂತ್ ತಿಳಿಸಿದ್ದಾರೆ.

# ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ನೋಂದಣಿಗೆ ಜ.31ರವರೆಗೂ ವಿಸ್ತರಣೆ

## ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸುವುದು ಕಡ್ಡಾಯದ ಗಡುವು ಮುಂದೆ ಹೋಗುತ್ತಲೇ ಇದೆ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕದಲ್ಲಿ ವಾಹನಗಳಿಗೆ ಹೈ ಸೆಕ್ಯೂರಿಟಿ ರಿಜಿಸ್ಟ್ರೇಷನ್ ನಂಬರ್ ಪ್ಲೇಟ್ (ಹೆಚ್‌ಎಸ್‌ಆರ್‌ಪಿ) ಅಳವಡಿಸುವುದು ಕಡ್ಡಾಯವಾಗಿದ್ದರೂ ಪ್ರಕರಣ ನ್ಯಾಯಾಲಯದ ವಿಚಾರಣೆಯಲ್ಲಿರುವುದರಿಂದ ಗಡುವು ಮುಂದೆ ಹೋಗುತ್ತಲೇ ಇದೆ. ನ್ಯಾಯಾಲಯದಿಂದ ಅಂತಿಮ ಆದೇಶ ಹೊರ ಬೀಳುವವರೆಗೂ ದಂಡ ಪ್ರಯೋಗ ಬೇಡ ಎಂದು ಕರ್ನಾಟಕ ಹೈಕೋರ್ಟ್ ಈಗಾಗಲೇ ಸಾರಿಗೆ ಇಲಾಖೆಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ. ಈ ಕಾರಣದಿಂದ ಐದನೇ ಬಾರಿಗೆ ಗಡುವನ್ನು ಕರ್ನಾಟಕ ಸಾರಿಗೆ ಇಲಾಖೆ ವಿಸ್ತರಿಸಿದೆ. 2025ರ ಜನವರಿ 31ರವರೆಗೂ ಸಾರಿಗೆ ಇಲಾಖೆ ವಿಸ್ತರಣೆ ಮಾಡಿದೆ. ಡಿಸೆಂಬರ್ ಅಂತ್ಯದವರೆಗೂ ನೋಂದಣಿಗೆ ಗಡುವು ನಿಗದಿ ಮಾಡಲಾಗಿತ್ತು. ಈಗ ಮತ್ತೆ ಗಡುವು ವಿಸ್ತರಣೆಯಾಗುತ್ತಿದೆ. ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಶುಕ್ರವಾರ ಆದೇಶ ಹೊರ ಬೀಳಬೇಕಾಗಿತ್ತಾದರೂ ಮನಮೋಹನಸಿಂಗ್ ಅವರ ನಿಧನದ ಕಾರಣದಿಂದ ರಜೆ ಬಂದಿದ್ದರಿಂದ ಸೋಮವಾರ ಅಧಿಕೃತ ಆದೇಶ ಪಕಟವಾಗಲಿದೆ.

ಭಾರತದಾದ್ಯಂತ ಏಕ ರೂಪದ ನಂಬರ್‌ಪ್ಲೇಟ್‌ಗಳು ಸೂಕ್ತ ಭದ್ರತೆ ಹಾಗೂ ಸುರಕ್ಷತೆಯೊಂದಿಗೆ ಅಳವಡಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿತ್ತು. ಈಗಾಗಲೇ ಹಲವು ರಾಜ್ಯಗಳಲ್ಲಿ ಇದು ಜಾರಿಯಾಗಿದ್ದರೂ ಕರ್ನಾಟದಲ್ಲಿ ಕಳೆದ ವರ್ಷ ವಾಹನಗಳಿಗೆ ಹೈ ಸೆಕ್ಯೂರಿಟಿ ರಿಜಿಸ್ಟ್ರೇಷನ್ ನಂಬರ್ ಪ್ಲೇಟ್ ಅಳವಡಿಸುವ ಪ್ರಕ್ರಿಯೆಗೆ ಚಾಲನೆ ನೀಡಲಾಗಿತ್ತು. ಸುಮಾರು ಒಂದೂವರೆ ವರ್ಷದಲ್ಲಿ ಈವರೆಗೂ 57 ವಾಹನಗಳಿಗೆ ಮಾತ್ರ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸಲಾಗಿದೆ. ಇನ್ನೂ 1.44 ಕೋಟಿ ವಾಹನಗಳಿಗೆ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಕೆ ಬಾಕಿಯಿದೆ. ಇದರ ನಡುವೆ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಮಾಡಿಸಿಕೊಳ್ಳದ ವಾಹನ ಸವಾರರಿಗೆ ದಂಡ ವಿಧಿಸಲು ಸಾರಿಗೆ ಇಲಾಖೆ ಮುಂದಾಗಿದೆ. ಗಡುವು ಮುಗಿದ ನಂತರವೂ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅಳವಡಿಸದ ದಂಡ ಪ್ರಯೋಗ ಶುರುವಾಗುವ ಮುನ್ನವೇ ಇದನ್ನು ಪ್ರಶ್ನಿಸಿ ವಾಹನ ಸವಾರರು ಕೋರ್ಟ್ ಮೊರೆ ಹೋದರು. ಕರ್ನಾಟಕ ಹೈಕೋರ್ಟ್‌ನಲ್ಲಿ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಆದೇಶ ರದ್ದುಪಡಿಸುವಂತೆ ಕೋರಲಾಗಿತ್ತು. ಈ ಪ್ರಕರಣದ ವಿಚಾರಣೆ ಮುಂದುವರಿದಿದೆ. ಕಳೆದ ತಿಂಗಳು ವಿಚಾರಣೆ ನಡೆಸಿದ್ದ ಹೈಕೋರ್ಟ್ ಈ ಕುರಿತು ವಿವರವಾದ ವರದಿ ನೀಡುವಂತೆ ಸಾರಿಗೆ ಇಲಾಖೆಗೆ ಆದೇಶ ನೀಡಿದೆ. 2025ರ ಜನವರಿ 15ರ ನಂತರ ಹೈಕೋರ್ಟ್ ನಲ್ಲಿ ಈ ಪ್ರಕರಣ ವಿಚಾರಣೆಗೆ ಬರಲಿದೆ. ಇದರಿಂದಾಗಿ ಕರ್ನಾಟಕ ಸಾರಿಗೆ ಇಲಾಖೆಯು 2025ರ ಜನವರಿ 31 ರವರೆಗೂ ಗಡುವನ್ನು ವಿಸ್ತರಿಸಲು ಮುಂದಾಗಿದೆ. ಇದರೊಟ್ಟಿಗೆ ಸಾರಿಗೆ ಇಲಾಖೆಯಿಂದಲೂ ಹೈಕೋರ್ಟ್‌ಗೆ ಹೆಚ್‌ಎಸ್‌ಆರ್ ಪಿ ನೋಂದಣಿಗೆ ಮಹತ್ವವನ್ನು ತಿಳಿಸಿಕೊಡುತ್ತೇವೆ ಎನ್ನುವುದು ಸಾರಿಗೆ ಇಲಾಖೆ ಆಯುಕ್ತರಾದ ಎ.ಎಂ.ಯೋಗೀಶ್ ನೀಡುವ ವಿವರಣೆ.




**ಹೆಚ್ಚಿನ ವಾಹನ ಮಾಲೀಕರು ಹೆಚ್‌ಎಸ್‌ಆರ್‌ಪಿ ಅಳವಡಿಕೆಗೆ ನಿರಾಸಕ್ತಿ ತೋರುತ್ತಿದ್ದಾರೆ. ಹೀಗಾಗಿ ಸಾರಿಗೆ ಇಲಾಖೆಯು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಅರಿವು ಮೂಡಿಸಲು ಶಿಬಿರಗಳನ್ನು ಆಯೋಜನೆ ಮಾಡಲು ತೀರ್ಮಾನ ಮಾಡಿದೆ.**

> **ಭಾರತದಲ್ಲಿ ಪಶ್ಚಿಮ ಬಂಗಾಳದಲ್ಲಿ ಹೆಚ್ಚಿನ ಪ್ರಮಾಣದಲ್ಲ ವಾಹನ ನೋಂದಣಿಯಾಗಿದೆ. ಕರ್ನಾಟಕದಲ್ಲಿ ಈ ಪ್ರಮಾಣ ಕಡಿಮೆ. ಇತರೆ ರಾಜ್ಯಗಳಲ್ಲೂ ಇದು ಪ್ರಗತಿಯಲ್ಲಿದೆ. ನ್ಯಾಯಾಲಯದ ಅಂತಿಮ ನಿರ್ದೇಶನ ಆಧರಿಸಿ ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸಾರಿಗೆ ಇಲಾಖೆ ಮುಂದಾಗಿದೆ.**

#### ನಂಬರ್ ಪ್ಲೇಟ್ ಪ್ರಕ್ರಿಯೆ ಜಾರಿ

**ವಾಹನಗಳಿಗೆ ಹೈ ಸೆಕ್ಯೂರಿಟಿ ರಿಜಿಸ್ಟ್ರೇಷನ್ ನಂಬರ್ ಪ್ಲೇಟ್ ಪ್ರಕ್ರಿಯೆ ಜಾರಿಯಲ್ಲಿದೆ. ಇದರ ನಡುವೆ ಹೈಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದು.. ನ್ಯಾಯಾಲಯದ ತೀರ್ಪು ಬಾಕಿ ಇರುವುದರಿಂದ ದಂಡ ಪ್ರಯೋಗ ಶುರುವಾಗಿಲ್ಲ. ಈಗಲೂ ನೋಂದಣಿಗೆ ಅವಕಾಶವಿದೆ. ಗಡುವನ್ನು 2025ರ ಜನವರಿ 31 ರವರೆಗೂ ವಿಸ್ತರಿಸಿದ ಪ್ರಸ್ತಾವನೆ ಸಲ್ಲಿಕೆಯಾಗಿದ್ದು ಆದೇಶ ಒಂದೆರಡು ದಿನದಲ್ಲಿ ಜಾರಿಯಾಗಲಿದೆ.**

# ಜಿಲ್ಲೆಯಲ್ಲಿ ಕಡ್ಡಾಯವಾಗಿ ಕನ್ನಡ ನಾಮಫಲಕ ಹಾಕಲು ಜ.7ರ ಗಡುವು

## • ನಿಯಮ ಪಾಲಿಸದಿದ್ದರೆ ನಿರ್ದಾಕ್ಷಿಣ್ಯ ಕ್ರಮ, ಅನುಷ್ಠಾನ ಸಮಿತಿ ಸಭೆಯಲ್ಲಿ ಡಿಸಿ ರವೀಂದ್ರ ಎಚ್ಚರಿಕೆ

• **ಉದಯವಾಹಿನಿ ಚಿಕ್ಕಬಳ್ಳಾಪುರ**

ಜಿಲ್ಲೆಯಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆಯಲ್ಲೇ ನಾಮಫಲಕಗಳನ್ನು ಅಳವಡಿಸಲು ಜಿಲ್ಲಾಡಳಿತ ಸೂಚಿಸಿದ್ದು, ಇದಕ್ಕೆ ಜ.7ರವರೆಗೆ ಗಡುವು ನೀಡಿದೆ. ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕನ್ನಡ ಅನುಷ್ಠಾನ ಸಮಿತಿ ಸಭೆಯಲ್ಲಿ ನಾಡು ನುಡಿ ಬೆಳವಣಿಗೆ, ವಿವಿಧ ಕ್ಷೇತ್ರಗಳಲ್ಲಿ ಕನ್ನಡ ಬಳಕೆ ಕಡ್ಡಾಯಗೊಳಿಸುವ ಬಗ್ಗೆ ಚರ್ಚಿಸಲಾಯಿತು.

ಜಿಲ್ಲೆಯ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲಾ ವ್ಯಾಪಾರ ಮಳಿಗೆಗಳು, ಸಂಸ್ಥೆಗಳು, ಖಾಸಗಿ ಶಾಲಾ ಕಾಲೇಜುಗಳ ನಾಮಫಲಕಗಳು ಕಡ್ಡಾಯವಾಗಿ ಶೇ.60 ಕನ್ನಡದಲ್ಲೇ ಇರಬೇಕು.

ಇದುವರೆಗೂ ನಿಯಮ ಪಾಲಿಸದವರು ಜ. 7 ರೊಳಗೆ ಧೋರಣೆ ಬದಲಾಯಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಎಚ್ಚರಿಕೆ ನೀಡಿದ್ದಾರೆ.

> **ಗ್ರಾ.ಪಂ ವ್ಯಾಪ್ತಿಯಲ್ಲಿ ಪಿಡಿಒ, ನಗರಸಭೆ ಮತ್ತು ಪುರಸಭೆ ವ್ಯಾಪ್ತಿಯಲ್ಲಿ ಪೌರಾಯುಕ್ತರು ಹಾಗೂ ಮುಖ್ಯಾಧಿಕಾರಿಗಳು ಕನ್ನಡ ಅನುಷ್ಠಾನ ಸಮಿತಿ ಜಾರಿ ಅಧಿಕಾರಿಗಳಾಗಿದ್ದು, ಕಾಲಕಾಲಕ್ಕೆ ನಿಯಮಪಾಲನೆ ಬಗ್ಗೆ ಪರಿಶೀಲಿಸಬೇಕು. ಇದರ ಬಗ್ಗೆ ತಾಲ್ಲೂಕು ಮಟ್ಟದ ಕನ್ನಡ ಅನುಷ್ಠಾನ ಸಮಿತಿ ಸಭೆ ಕರೆದು ಚರ್ಚಿಸಬೇಕು. ಹಾಗೆಯೇ ಜಿಲ್ಲಾಮಟ್ಟದ ಕನ್ನಡ ಅನುಷ್ಠಾನ ಸಮಿತಿಗೆ ವರದಿ ಸಲ್ಲಿಸಬೇಕು**
> -ಡಿಸಿ ರವೀಂದ್ರ

**ಅಧಿಕಾರಿಗಳಿಗೆ ಸೂಚನೆ:** ಹೊಸದಾಗಿ ಅಂಗಡಿ, ಮಳಿಗೆಗಳನ್ನು ತೆರೆಯುವವರು ಕನ್ನಡ ಪ್ರಧಾನವಾಗಿ ಕಾಣಿಸುವಂತೆ ನಾಮಫಲಕ ಅಳವಡಿಸಿದ್ದರೆ ಮಾತ್ರ ಪರವಾನಗಿ ನೀಡಲು ಸಂಬಂಧಪಟ್ಟ ಇಲಾಖೆಗೆ ಸೂಚಿಸಲಾಯಿತು.



ಉದಯವಾಹಿನಿ ಚಿತ್ರ

### ನಿಖರ ಮಾಹಿತಿ ನೀಡಬೇಕು

**ಸರ್ಕಾರಿ ಇಲಾಖೆಯ ಎಲ್ಲಾ ಕಚೇರಿಗಳ ವೆಬ್‌ಸೈಟ್‌ನಲ್ಲಿ ಕನ್ನಡ ಭಾಷೆಯಲ್ಲೂ ಮಾಹಿತಿ ಸಿಗಬೇಕು. ಜಿಲ್ಲೆಯ ಎಲ್ಲಾ ಕೈಗಾರಿಕೆಗಳಲ್ಲಿ ಎಷ್ಟು ಕಾರ್ಮಿಕರಿದ್ದಾರೆ, ಈ ಪೈಕಿ ಸ್ಥಳೀಯರು ಮತ್ತು ಕನ್ನಡಿಗರ ಸಂಖ್ಯೆ ಎಷ್ಟಿದೆ ಎಂಬ ನಿಖರ ವಾಹಿತಿ ನೀಡಬೇಕು ಎಂದರು.**

ಜಿಪಂ ಸಿಇಒ ಪ್ರಕಾಶ್ ಜಿ.ಟಿ ನಿಟ್ಟಾಲಿ, ಅಪರ ಜಿಲ್ಲಾಧಿಕಾರಿ ಎನ್. ಆ ಅರೋಗ್ಯ ಭಾಸ್ಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ರವಿಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್.ಎಸ್. ಮಹೇಶ್ ಕುಮಾರ್, ಜಿಪಂ ಯೋಜನಾಧಿಕಾರಿ ಈಶ್ವರಪ್ಪ, ಜಿಲ್ಲಾ ಕಸಾಪ ಅಧ್ಯಕ್ಷ ಕೋಡಿರಂಗಪ್ಪ ಮತ್ತಿತರರು ಇದ್ದರು.

**ವಿವಿಧ ಕ್ಷೇತ್ರಗಳಲ್ಲಿ ಕನ್ನಡ ಬಳಕೆ ಕಡ್ಡಾಯ**

ಅನ್ಯಭಾಷೆಯ ನಾಮ ಫಲಕಗಳನ್ನು ಕಡ್ಡಾಯವಾಗಿ ತೆರವುಗೊಳಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ಎಲ್ಲಾ ವಿದ್ಯಾಸಂಸ್ಥೆಗಳ ದೈನಂದಿನ ಚಟುವಟಿಕೆಯಲ್ಲಿ ಕನ್ನಡ ಬಳಕೆ, ನಿಯಮಿತವಾಗಿ ಕನ್ನಡ ಅನುಷ್ಠಾನ ಪರಿಶೀಲನಾ ಸಮಿತಿ ಸಭೆಗಳ ಆಯೋಜನೆ, ಮಕ್ಕಳ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ ನಿಯಂತ್ರಣಕ್ಕಾಗಿ ಸರ್ಕಾರಿ ಇಲಾಖೆಗಳಲ್ಲಿ 'ಲೋಕಲ್ ಕಂಪ್ಲೆಂಟ್ ಕಮಿಟಿ' ಹಾಗೂ 'ಇಂಟರ್ನಲ್ ಕಂಪ್ಲೆಂಟ್ ಕಮಿಟಿ' ರಚಿಸುವ ಬಗ್ಗೆಯೂ ಚರ್ಚಿಸಲಾಯಿತು.

ವಾಣಿಜ್ಯ, ಕೈಗಾರಿಕೆಗಳು ಮತ್ತು ವ್ಯಾಪಾರ ಸಂಸ್ಥೆಗಳು, ಆಸ್ಪತ್ರೆಗಳು ಮತ್ತು ಹೋಟೆಲ್‌ಗಳು ಸೇರಿ ಪ್ರತಿಯೊಂದು ವಹಿವಾಟು ಕೇಂದ್ರಗಳ ಹೆಸರಿನ ನಾಮಫಲಕಗಳಲ್ಲಿ ಶೇ. 60 ರಷ್ಟು ಕನ್ನಡದಲ್ಲಿರಬೇಕು.

ಇಲ್ಲದಿದ್ದಲ್ಲಿ ಮೊದಲ ಬಾರಿ ನಿಯಮ ಉಲ್ಲಂಘಿಸಿದವರಿಗೆ 5 ಸಾವಿರ ರೂ., ಎರಡನೇ ಬಾರಿಗೆ 10 ಸಾವಿರ ರೂ., ಮೂರನೇ ಬಾರಿಗೆ 20 ಸಾವಿರ ರೂ. ದಂಡ ವಿಧಿಸುವ ಜತೆಗೆ ಪರವಾನಗಿ ರದ್ದುಗೊಳಿಸಲಾಗುತ್ತದೆ ಎಂದು ಜಿಲ್ಲಾಡಳಿತ ಎಚ್ಚರಿಸಿದೆ.

# ಧಾರ್ಮಿಕ, ಸಾಮಾಜಿಕ ಮೌಲ್ಯ ರಕ್ಷಣೆಗೆ ಕರೆ

• **ಉದಯವಾಹಿನಿ, ತುಮಕೂರು**

ವೈಚಾರಿಕತೆಯ ಬಿರುಗಾಳಿಯಲ್ಲಿ ಧಾರ್ಮಿಕ, ಸಾಮಾಜಿಕ ಮೌಲ್ಯಗಳು ನಾಶವಾಗಬಾರದು.

ಅರಿತು, ಬೆರೆತು ಬಾಳುವುದೇ ಜೀವನ ಶ್ರೇಷ್ಠತೆಗೆ ಮೂಲ' ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು. ನಗರದ ವಿಶಾಲಾಕ್ಷಮ್ಮ ಸದಾಶಿವಯ್ಯ ಸಭಾಭವನದಲ್ಲಿ ಧನುರ್ಮಾಸದ ಇಷ್ಟಲಿಂಗ ಮಹಾಪೂಜೆ ಅಂಗವಾಗಿ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಜಗದ್ಗುರು ರೇಣುಕಾಚಾರ್ಯರು ವೀರಶೈವ ಸಂವಿಧಾನದಲ್ಲಿ ಕಾಯಕ ಜೀವನದಿಂದ ಬರುವ ಹಣದಲ್ಲಿ ದಾಸೋಹ ಮಾಡುವ ಉತ್ಕೃಷ್ಟ ವಿಚಾರಗಳನ್ನು ಬೋಧಿಸಿದ್ದಾರೆ.

ಅದರಂತೆ ನಾವೆಲ್ಲರೂ ನಡೆಯಬೇಕು ಎಂದು ಸಲಹೆ ಮಾಡಿದರು. ಭರವಸೆ ಎಂಬುದು ಬದುಕಿನ ಜೀವಜಲ ಅದನ್ನು ಬತ್ತಲು ಬಿಡಬಾರದು. ಬುದ್ಧಿವಂತಿಕೆ, ಪರಿಶ್ರಮ ನಮ್ಮನ್ನು ಎತ್ತರಕ್ಕೆ ಕರೆದುಕೊಂಡು ಹೋಗುತ್ತದೆ. ಆದರೆ ಗುಣ, ನಡವಳಿಕೆ ಕೊನೆಯವರೆಗೂ ಕಾಪಾಡುತ್ತದೆ. ಜೀವನದಲ್ಲಿ ಹಣದ ಕೊರತೆಯಿದ್ದರೂ ಗುಣದ



ಉದಯವಾಹಿನಿ ಚಿತ್ರ

ಕೊರತೆ ಇರಬಾರದು ಎಂದು ಅಭಿಪ್ರಾಯಪಟ್ಟರು.

ಬದುಕು ಬದಲಾಗಬೇಕಾದರೆ ಬದುಕುವ ದಾರಿ ಬದಲಾಗಬೇಕು. ಎಲ್ಲಾ ಇದ್ದಾಗ ನಮ್ಮವರು ಎನ್ನುತ್ತಾರೆ. ಏನು ಇಲ್ಲದಿದ್ದಾಗ ನೀನು ಯಾರು ಎನ್ನುತ್ತಾರೆ. ಗೆದ್ದ ವ್ಯಕ್ತಿಗೆ ಚಪ್ಪಾಳೆ ಸಿಗುತ್ತದೆ. ಬಿದ್ದ ವ್ಯಕ್ತಿಯನ್ನು ಕೈ ಹಿಡಿದು ಮೇಲೆತ್ತಿದವರು ದೊಡ್ಡವರಾಗುತ್ತಾರೆ ಎಂದು ತಿಳಿಸಿದರು.

ಎಡೆಯೂರು ರೇಣುಕ ಶಿವಾಚಾರ್ಯ ಸ್ವಾಮೀಜಿ, ಶ್ರಮದ ಬದುಕು ಸಂಪತ್ತಿನ ಸಂವರ್ಧನೆಗೆ ಮೂಲ. ವೀರಶೈವ ಜ್ಞಾನ ಸಂಪತ್ತು ಅಪಾರ. ಅದನ್ನು ಅರಿತು ಆದರ್ಶ ಬದುಕು ಕಟ್ಟಿಕೊಳ್ಳಬೇಕು' ಎಂದು ಹೇಳಿದರು. ಸಿದ್ದರಬೆಟ್ಟದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ, ದ್ವೇಷ, ಅಸೂಯೆ ಮರೆತು ಸಾಮರಸ್ಯದಿಂದ ಬದುಕಲು ಗುರುವಿನ ಮಾರ್ಗದರ್ಶನ ಅವಶ್ಯಕ' ಎಂದು ನುಡಿದರು.

# ವೈಎಸ್ ಜಗನ್‌ಮೋಹನರೆಡ್ಡಿ ನೋಡಲು ನೂಕುನುಗ್ಗಲು

• **ಉದಯವಾಹಿನಿ, ಬಾಗೇಪಲ್ಲಿ**

ಪಟ್ಟಣದ ಹೊರವಲಯದ ರಾಷ್ಟ್ರೀಯ ಹೆದ್ದಾರಿ ರಸ್ತೆ 44ರ ಟೋಲ್ ಫ್ಲಾಜಾದಲ್ಲಿ ಶುಕ್ರವಾರ ಕಾರಿನ ಮೂಲಕ ಬಂದ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ವೈ.ಎಸ್. ಜಗನ್ಮೋಹನ್ ರೆಡ್ಡಿ ಅವರನ್ನು ನೋಡಲು ಅಭಿಮಾನಿಗಳು ಮುಗಿಬಿದ್ದರು. ಟೋಲ್ ಫ್ಲಾಜಾ ಮೂಲಕ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಅವರು ಪ್ರಯಾಣ ಬೆಳೆಸಿದ್ದರು. ಜಗನ್‌ಮೋಹನರೆಡ್ಡಿ, ಅಭಿಯಾನಗಳತ್ತ ಕೈಮುಗಿದು ನಮಸ್ಕರಿಸಿದರು.

ಹೂಮಾಲೆ, ಹಸ್ತಲಾಘವ ನೀಡಲು ಮುಂದಾದಾಗ ಕೆಲಕಾಲ ನೂಕುನುಗ್ಗಲು ಉಂಟಾಯಿತು. ಆಂಧ್ರಪ್ರದೇಶದ ಹಾಗೂ ರಾಜ್ಯದ ಪೊಲೀಸರು ಸ್ಥಳದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಿದ್ದರು.



ಉದಯವಾಹಿನಿ ಚಿತ್ರ

# ನಂಗಲಿಗೆ ಒಲಿಯುವುದೇ ಪ.ಪಂಚಾಯಿತಿ ಭಾಗ್ಯ?

• **ಉದಯವಾಹಿನಿ, ಮುಳಬಾಗಿಲು**

ಮುಳಬಾಗಿಲು ನಂತರ ಅತಿಹೆಚ್ಚು ಜನಸಂಖ್ಯೆ, ವ್ಯಾಪಾರ ವಹಿವಾಟು, ಜನ ಸಂದಣಿ, ವಸತಿ ಮತ್ತು ಬಹುತೇಕ ಸರ್ಕಾರಿ ಕಚೇರಿ ಮತ್ತು ಹತ್ತು ಸಾವಿರಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದ ನಂಗಲಿಗೆ ಈವರೆಗೆ ಪಟ್ಟಣ ಪಂಚಾಯಿತಿ ಭಾಗ್ಯ ಮಾತ್ರ ಒಲಿದುಬಂದಿಲ್ಲ. ಪುರಸಭೆಯಾಗಿದ್ದ ಮುಳಬಾಗಿಲು ನಗರವು ಮೂರು ವರ್ಷಗಳ ಹಿಂದೆ ನಗರಸಭೆಯಾಗಿ ಮೇಲ್ದರ್ಜೆಗೇರಿದೆ.

ಆದರೆ, ತಾಲ್ಲೂಕಿನಲ್ಲಿ ಪುರಸಭೆ ಅಥವಾ ಪಟ್ಟಣ ಪಂಚಾಯಿತಿಯೇ ಇಲ್ಲ. ಹೀಗಾಗಿ, ಈ ಹಿಂದೆ ಮುಳಬಾಗಿಲು ಶಾಸಕರಾಗಿದ್ದ ಕೊತ್ತೂರು ಜಿ. ಮಂಜುನಾಥ್ ಹಾಗೂ ಎಚ್. ನಾಗೇಶ್ ಅವರು ನಂಗಲಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸಲು ಸಂಬಂಧಿಸಿದ ಇಲಾಖೆಗೆ ಮನವಿ ಸಲ್ಲಿಸಲಾಗುವುದು ಎಂದು ಭರವಸೆ ನೀಡಿದ್ದರು.

ಆದರೆ, ಈ ಭರವಸೆಯು ಭರವಸೆಯಾಗಿಯೇ ಉಳಿದಿದೆ. ಮತ್ತೊಂದೆಡೆ ನಂಗಲಿಗೆ ಪಟ್ಟಣ ಪಂಚಾಯಿತಿ ಸ್ಥಾನಮಾನ ನೀಡಬೇಕು



ಉದಯವಾಹಿನಿ ಚಿತ್ರ

ಎಂಬ ಮನವಿ ಅಥವಾ ಅರ್ಜಿ ಸಲ್ಲಿಕೆಯಾಗಿಲ್ಲ ಎಂದು ಜಿಲ್ಲಾಧಿಕಾರಿಗಳ ಕಚೇರಿ ತಿಳಿಸಿದೆ. ಹೀಗಾಗಿ, ಪಟ್ಟಣ ಪಂಚಾಯಿತಿಯಾಗಲಿದೆ ಎಂಬ ಭರವಸೆಯಲ್ಲಿದ್ದ ನಂಗಲಿ ಜನರಿಗೆ ನಿರಾಶೆಯಾಗಿದೆ.

ಕಾನೂನು ಪ್ರಕಾರ ಸಾಮಾನ್ಯವಾಗಿ ಯಾವುದೇ ಪಂಚಾಯಿತಿ ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಲು ಆ ಭಾಗದಲ್ಲಿ 10–15 ಸಾವಿರ ಜನಸಂಖ್ಯೆ ಹೊಂದಿರಬೇಕು.

ನಂಗಲಿಯಲ್ಲಿ ಮಲ್ಲೆಕುಪ್ಪ, ಮುದಿಗೆರೆ, ಎನ್.ಕುರುಬರಹಳ್ಳಿ, ಎನ್.ಕೊತ್ತೂರು, ಎನ್.ವೆಂಕಟಾಪುರ, ಎನ್. ಗಡೂರು ಮತ್ತಿತ್ತರ ಸುತ್ತಮುತ್ತಲಿನ ಗ್ರಾಮಗಳನ್ನು ನಂಗಲಿ ವ್ಯಾಪ್ತಿಗೆ ಸೇರಿಕೊಂಡರೆ 15 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯಾಗಲಿದೆ.

### ಹೊಸ ವರ್ಷ ಆಚರಿಸಲು ಬಂಡೀಪುರ ಹೋಗುವ ಪ್ಲಾನ್ ಇದ್ಯಾ?

# ಹಾಗೇನಾದರೂ ಇದ್ದರೆ ಈಗಲೇ ಕೈಬಿಡುವುದು ಒಳಿತು



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಚಾಮರಾಜನಗರ**

2024ಕ್ಕೆ ಬಾಯ್, 2025ಕ್ಕೆ ಹಾಯ್... ಹಾಯ್ ಎನ್ನುವ ಸಮಯ ಸನ್ನಿಹಿತ ಹೀಗಿರುವಾಗ ಹೊಸ ವರ್ಷಾಚರಣೆಗೆ ತಮ್ಮ ಕುಟುಂಬದೊಂದಿಗೆ ತೆರಳಲು ಹಲವರು ಈಗಾಗಲೇ ಸಕಲ ತಯಾರಿಗಳನ್ನು ಮಾಡಿಕೊಂಡಿದ್ದಾರೆ. ಬಸ್, ಟ್ರೈನ್ ಟಿಕೆಟ್‌ನಿಂದ ಹಿಡಿದು ಯಾವ ದಿನ ಅಲ್ಲಿರಬೇಕು, ಎಲ್ಲಿಂದ ಎಲ್ಲಿಗೆ ಪ್ರಯಾಣಿಸಬೇಕು ಎಂಬುದನ್ನು ಬಹಳ ಅಚ್ಚುಕಟ್ಟಾಗಿ ರೂಪಿಸಿದ್ದಾರೆ. ಸದ್ಯ ವರ್ಷದ ಮೊದಲ ದಿನವನ್ನು ಆಚರಿಸಲು ನೀವೇನಾದರೂ ಬಂಡೀಪುರದತ್ತ ಪ್ಲಾನ್ ಮಾಡುತ್ತಿದ್ದರೆ ಈಗಲೇ ಕೈಬಿಡುವುದು ಒಳಿತು.

ವರ್ಷಾಂತ್ಯ ಹಿನ್ನೆಲೆ ಪ್ರವಾಸಿಗರಿಂದ ತುಂಬಿ ತುಳುಕುತ್ತಿರುವ ಪ್ರಸಿದ್ಧ ಹುಲಿ ಸಂರಕ್ಷಿತ ಅರಣ್ಯ ಪ್ರದೇಶವಾಗಿರುವ ಬಂಡೀಪುರದಲ್ಲಿ ವಾಸ್ತವ್ಯ ಹೂಡಿ, ಹೊಸ ವರ್ಷಾಚರಣೆ ಮಾಡಬೇಕೆಂದು ಪ್ಲಾನ್ ಮಾಡಿಕೊಂಡಿರುವವರಿಗೆ ಡಿ.31 ಮತ್ತು ಜ.1ರಂದು ಅರಣ್ಯ ಇಲಾಖೆ ವಸತಿ ಗೃಹಗಳು ಲಭ್ಯವಿರುವುದಿಲ್ಲ. ಈ ಮಾಹಿತಿ ಪ್ರವಾಸಿಗರ ಗಮನಕ್ಕೆ ತರಲು ಬಂಡೀಪುರ ಅರಣ್ಯ ಇಲಾಖೆ ಇಚ್ಛಿಸಿದೆ. ಹೊಸ ವರ್ಷಾಚರಣೆ ಸಂದರ್ಭದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ಹೊರರಾಜ್ಯಗಳಿಂದಲೂ ಬರುವ ಪ್ರವಾಸಿಗರ ಮೋಜು-ಮಸ್ತಿಗೆ ಅವಕಾಶ ಕೊಡಬಾರದೆಂಬ ಉದ್ದೇಶದಿಂದ ಅರಣ್ಯ ಇಲಾಖೆಗೆ ಸೇರಿದ ವಸತಿಗೃಹಗಳು, ಕಾಟೇಜ್‌ಗಳಲ್ಲಿ ಪ್ರತ್ಯೇಕವಾಗಿ ಈ ಎರಡು ದಿನ ವಾಸ್ತವ್ಯಕ್ಕೆ ಅವಕಾಶವಿರುವುದಿಲ್ಲ.

> **ಪ್ರತಿ ವರ್ಷವೂ ಹೊಸ ವರ್ಷ ಆಚರಣೆ ಸಂದರ್ಭದಲ್ಲಿ ಮೋಜು-ಮಸ್ತಿ ಮಾಡಲೆಂದು ರಾಜ್ಯದ ವಿವಿಧ ಭಾಗಗಳಿಂದ ಬಂಡೀಪುರಕ್ಕೆ ಆಗಮಿಸುವ ಪ್ರವಾಸಿಗರಿಂದ ವನ್ಯಜೀವಿಗಳ ಸಹಜ ಜೀವನಕ್ಕೆ ಧಕ್ಕೆಯಾಗುತ್ತಿದ್ದ ಹಿನ್ನೆಲೆಯಲ್ಲಿ ಕಳೆದ ಏಳು ವರ್ಷಗಳಿಂದ ಅರಣ್ಯ ಇಲಾಖೆ ತನ್ನ ಅತಿಥಿಗೃಹಗಳನ್ನು ಬಾಡಿಗೆಗೆ ಕೊಡುವುದು ನಿರ್ಬಂಧಿಸುತ್ತ ಬಂದಿದೆ. ಅದರಂತೆಯೇ ಈ ಬಾರಿಯು ಸಹ ಅರಣ್ಯ ಇಲಾಖೆಯ ವಸತಿ ಗೃಹಗಳ ಬುಕಿಂಗ್ ಬ್ಲಾಕ್ ಮಾಡಿದೆ.**

# ನಕಾರಾತ್ಮಕ ಚಿಂತನೆ ದೂರ ಮಾಡಿ

• **ಉದಯವಾಹಿನಿ, ಚನ್ನಪಟ್ಟಣ**

ವಿದ್ಯಾರ್ಥಿಗಳು ನಕಾರಾತ್ಮಕ ವಿಚಾರಗಳಿಂದ ದೂರ ಇರಬೇಕು. ಸಕಾರಾತ್ಮಕ ಚಿಂತನೆ ಮೈಗೂಡಿಸಿಕೊಂಡು ಶ್ರದ್ಧೆ, ಧೈರ್ಯ, ಆತ್ಮವಿಶ್ವಾಸದಿಂದ ವಿದ್ಯಾಭ್ಯಾಸದಲ್ಲಿ ತೊಡಗಬೇಕು ಎಂದು ಮನೋವೈದ್ಯಕೀಯ ಸಾಮಾಜಿಕ ಕಾರ್ಯಕರ್ತೆ ಪದ್ಮರೇಖಾ ಸಲಹೆ ನೀಡಿದರು.

ನಗರದ ಹೊರವಲಯ ಮಲ್ಲಯ್ಯನದೊಡ್ಡಿ ಗ್ಲೋಬಲ್ ವಿದ್ಯಾಸಂಸ್ಥೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಂಗಳವಾರ ಏರ್ಪಡಿಸಿದ್ದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ವಿಶೇಷ ಪ್ರೇರಣಾ ಮತ್ತು ಮಾನಸಿಕ ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಏಳರಿಂದ ಹತ್ತನೇ ತರಗತಿವರೆಗೆ ಓದಿದ ವಿದ್ಯಾರ್ಥಿಗಳಿಗೆ ಮಾನಸಿಕ ಅರಿವು ಮತ್ತು ಪ್ರೇರಣಾ ಕಾರ್ಯಕ್ರಮ ನಡೆಸುವುದು ಅತ್ಯವಶ್ಯ ಎಂದರು.

ವಿದ್ಯಾಸಂಸ್ಥೆ ಕಾರ್ಯದರ್ಶಿ ಅಲ್ಲಾ ಬಕ್ಸ್ ಅನ್ವರ್ ಘೋರಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುವ ಉದ್ದೇಶದಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕಿ ಖೈಸರ್ ಸಲೀಂ, ಪ್ರಾಂಶುಪಾಲ ಎಂ.ಡಿ.ವೇದಾನಂದ, ಆಡಳಿತಾಧಿಕಾರಿ ಆರ್.ವಿ.ವೆಂಕಟಸ್ವಾಮಿ, ಶಿಕ್ಷಕಿ ನವೀದಾ ಬಾನು, ಶಿಕ್ಷಕರು ಭಾಗವಹಿಸಿದ್ದರು.

# ತಿಂಗಳಲ್ಲಿ ನಾಲ್ಕನೇ ಬಾರಿ ವೈದ್ಯರ ಮೇಲೆಹಲ್ಲೆ ಕೊಡಗಿನಲ್ಲಿ ಸೇವೆ ಸ್ಥಗಿತದ ಖಡಕ್ ಎಚ್ಚರಿಕೆ

• **ಉದಯವಾಹಿನಿ, ಮಡಿಕೇರಿ**

ಕೊಡಗಿನಲ್ಲಿ ಕರ್ತವ್ಯ ನಿರತ ವೈದ್ಯಾಧಿಕಾರಿ ಮೇಲೆ ಹಲ್ಲೆ ಪ್ರಕರಣಗಳು ಹೆಚ್ಚಾಗುತ್ತಿದ್ದು ಕಾನೂನನ್ನು ಕೈಗೆತ್ತಿಕೊಳ್ಳುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಂಡು ಮುಂದೆ ಇಂತಹ ಪ್ರಕರಣ ನಡೆಯದಂತೆ ಎಚ್ಚರ ವಹಿಸದಿದ್ದಲ್ಲಿ ಜಿಲ್ಲೆಯಾದ್ಯಂತ ವೈದ್ಯಕೀಯ ಸೇವೆಯನ್ನು ಸ್ಥಗಿತಗೊಳಿಸುವ ಎಚ್ಚರಿಕೆಯನ್ನು ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘವು ನೀಡಿದೆ.

**ನಿಂದಿಸಿ ಕರ್ತವ್ಯಕ್ಕೆ ಅಡ್ಡಿ**

ಇಷ್ಟಕ್ಕೂ ಕೊಡಗಿನಲ್ಲಿ ಆಗಿದ್ದೇನು? ಅಂದರೆ ಡಿ.25ರಂದು ಮಧ್ಯಾಹ್ನ 1.50ರ ಸಮಯದಲ್ಲಿ ವಿರಾಜಪೇಟೆ ತಾಲ್ಲೂಕಿನ ಬಾಳಲೆಯ ಪ್ರಾ.ಆ.ಕೇಂದ್ರಕ್ಕೆ ಹುಲಿ ದಾಳಿಗೊಳಗಾದ ರಾಜನ್ ಎಂಬುವರನ್ನು ಅವರ ಪತ್ನಿ ಲತಾ ಹಾಗೂ ಸ್ಥಳೀಯ ಗ್ರಾಮ ಪಂಚಾಯತ್ ಸದಸ್ಯರ ಮಗ ಕರೆದುಕೊಂಡು ಬಂದಿದ್ದರು. ಈ ವೇಳೆ ವೈದ್ಯರಾದ ಡಾ.ಆಕಾಶ್ ಗೌಡ ಅವರು 1.55ಕ್ಕೆ ಆಸ್ಪತ್ರೆಗೆ ಬಂದು ರೋಗಿಯನ್ನು ತಪಾಸಣೆ ಮಾಡಿದ್ದಾರೆ. ಈ ವೇಳೆ ಸ್ಥಳೀಯ ವ್ಯಕ್ತಿಯೊಬ್ಬ ಅದನ್ನು ಮೊಬೈಲ್‌ನಲ್ಲಿ ವಿಡಿಯೋ ಚಿತ್ರೀಕರಣ ಮಾಡುತ್ತಿದ್ದನಂತೆ.

ಈತ ಇಷ್ಟಕ್ಕೆ ಸುಮ್ಮನಾಗದೆ, ದೂರವಾಣಿ ಕರೆಗಳನ್ನು ಮಾಡುತ್ತಾ ಪದೇ, ಪದೇ ವೈದ್ಯರ ಕರ್ತವ್ಯಕ್ಕೆ ಅಡ್ಡಿಪಡಿಸುತ್ತಿದ್ದನಂತೆ ಇದರಿಂದ ಕರ್ತವ್ಯಕ್ಕೆ ಅಡಚಣೆ ಆಗುತ್ತಿದ್ದರಿಂದ ವೈದ್ಯರು ರೋಗಿಗೆ ಚಿಕಿತ್ಸೆ ನೀಡುವಾಗ ವಿಡೀಯೋ ಚಿತ್ರೀಕರಣ ಮಾಡುವ ಹಾಗಿಲ್ಲ ಹಾಗೂ ಫೋನ್ನಲ್ಲಿ ಮಾತನಾಡುತ್ತಿದ್ದರೆ ಚಿಕಿತ್ಸೆ ನೀಡಲು ತೊಂದರೆಯಾಗುತ್ತದೆ.

ಆದ್ದರಿಂದ ರೋಗಿಯನ್ನು ತಪಾಸಣೆ ನಡೆಸಿದ ನಂತರ ಮಾತನಾಡುವುದಾಗಿ ಹೇಳಿದ್ದಾರೆ. ವೈದ್ಯರ ಮಾತಿನಿಂದ ಕೋಪಗೊಂಡ ಆ ವ್ಯಕ್ತಿ ತನ್ನ ಸ್ನೇಹಿತರಿಗೆ ಕರೆ ಮಾಡಿ ಕೆಲವು ಸಾರ್ವಜನಿಕರನ್ನು ಕರೆಯಿಸಿ ಕೊಠಡಿಯ ಬಾಗಿಲುಗಳನ್ನು ಬಡಿದು ಅವಾಚ್ಯ ಶಬ್ದಗಳಿಂದ ನಿಂದಿಸಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾನೆ.

• **ಉದಯವಾಹಿನಿ ಸಿದ್ದಾಪುರ**

# ಬಹುಬೆಳೆಯಲ್ಲಿ ಯಶಸ್ಸು ಕಂಡ ಅಧ್ಯಾಪಕ

ಉನ್ನತ ಶಿಕ್ಷಣ ಪಡೆದವರು ಒಳ್ಳೆಯ ಉದ್ಯೋಗಗಳನ್ನರಸಿ ಹೋಗುತ್ತಿರುವುದರಿಂದ ಇಂದಿನ ಯುವ ಸಮೂಹ ಕೃಷಿಯಿಂದ ವಿಮುಖಗೊಳ್ಳುತ್ತಿದೆ. ಆದರೆ ಉದ್ಯೋಗದಲ್ಲಿದ್ದರೂ ಕೃಷಿಯನ್ನು ಬಿಡದೇ ಮಾದರಿಯಾಗಿದ್ದಾರೆ ತಾಲ್ಲೂಕಿನ ಕಾಶೀಗದ್ದೆಯ ನಿವಾಸಿ ಪ್ರಶಾಂತ ಹೆಗಡೆ.

ಸೊರಬದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ವಿಷಯದ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವ ಅವರು, ಕೃಷಿ ಮತ್ತು ಹೈನುಗಾರಿಕೆಯಲ್ಲಿಯೂ ಸೈ ಎನಿಸಿಕೊಂಡಿದ್ದಾರೆ.

'ಚಿಕ್ಕಂದಿನಿಂದ ಕೃಷಿ ಕಾರ್ಯಗಳನ್ನು ಮಾಡುತ್ತಾ ಬೆಳೆದಿದ್ದರಿಂದ ಕೃಷಿಯನ್ನು ಮುಂದುವರೆಸುವ ಆಸಕ್ತಿ ಬೆಳೆಯಿತು. ಸ್ನಾತಕೋತ್ತರ ಪದವಿ ಪಡೆದ ನಂತರ ಹಲವಾರು ಅವಕಾಶಗಳು ಇದ್ದರೂ ಕೃಷಿ ಕಾರ್ಯ ಮುಂದುವರೆಸುವ ಇಚ್ಛೆಯಿಂದ ಊರಿಗೆ ಮರಳಿದೆ. ಈಗ ಸರ್ಕಾರಿ ಪದವಿ ಕಾಲೇಜಿನಲ್ಲಿ ಅತಿಥಿ



ಉದಯವಾಹಿನಿ ಚಿತ್ರ

ಉಪನ್ಯಾಸಕನಾಗಿ ಕಾರ್ಯ ನಿರ್ವಹಿಸುತ್ತಾ ಕೃಷಿಯನ್ನೂ ಮುಂದುವರೆಸುತ್ತಿದ್ದೇನೆ. ಬೆಳಿಗ್ಗೆ ಕಾಲೇಜಿಗೆ ತೆರಳುವ ಮುನ್ನ, ಮತ್ತು ಸಂಜೆ ಕಾಲೇಜು ಅವಧಿಯ ನಂತರ ಕೃಷಿ ಕೆಲಸದಲ್ಲಿ ಪಾಲ್ಗೊಳ್ಳುತ್ತೇನೆ' ಎನ್ನುತ್ತಾರೆ ಪ್ರಶಾಂತ ಹೆಗಡೆ. 'ಪಿತ್ರಾರ್ಜಿತವಾಗಿ ಬಂದ ಒಂದು ಎಕರೆಯಷ್ಟು ಅಡಿಕೆ ತೋಟದ ಜೊತೆಗೆ ಎರಡು ಎಕರೆಯಷ್ಟು ಹೊಸ ಅಡಿಕೆ ತೋಟವನ್ನು ನಿರ್ಮಿಸಿದ್ದೇನೆ. ಅಡಿಕೆಯ ಜೊತೆಗೆ ಬಾಳ, ಕಾಳುಮೆಣಸು, ಲವಂಗ, ಕಾಫಿ, ಜಾಯಿಕಾಯಿ, ಶುಂಠಿ ಉಪಬೆಳೆಗಳಾಗಿ ಆದಾಯ ನೀಡುತ್ತಿವೆ' ಎಂದರು. '3 ಎಮ್ಮೆ ಮತ್ತು 2 ಹಸುಗಳನ್ನು ಸಾಕುತ್ತಿದ್ದು, ದಿನಕ್ಕೆ ಸುಮಾರು 8–10 ಲೀ. ನಷ್ಟು ಹಾಲನ್ನು ಡೇರಿಗೆ ನೀಡುತ್ತೇವೆ.

> **ಒಂದು ಎಕರೆಯಷ್ಟು ಪ್ರದೇಶದ ಗದ್ದೆಯಲ್ಲಿ ಮಳೆಗಾಲದಲ್ಲಿ ಭತ್ತವನ್ನು ಬೆಳೆದರೆ, ಬೇಸಿಗೆಯಲ್ಲಿ ಮಂಗಳೂರು ಸವತೆ ಬೆಳೆದು ಅದರಿಂದಲೂ ಸ್ವಲ್ಪ ಆದಾಯ ಪಡೆಯುತ್ತಿದ್ದೇನೆ. ಜಾನುವಾರುಗಳ ಮೇವಿಗಾಗಿ ಬೇಸಿಗೆಯಲ್ಲಿ ಬವಡೆ, ಜೋಳ, ಸೋಣಬು ಬೆಳೆದು ಮೇವಿನ ಕೊರತೆ ನೀಗಿಸುವ ಪ್ರಯತ್ನ ಮಾಡಿದ್ದೇನೆ' ಎಂದು ತಿಳಿಸಿದರು.**

# ಡಿಜಿಟಲ್ ಅರೆಸ್ಟ್, ಎಚ್ಚರವಿರಲಿ: ವೆಂಕಟೇಶ್

• **ಉದಯವಾಹಿನಿ, ಹಾರೋಹಳ್ಳಿ**

ಇತ್ತೀಚಿಗೆ ಸೈಬರ್ ಅಪರಾಧ ಹೆಚ್ಚುತ್ತಿದೆ. ತಂತ್ರಜ್ಞಾನ ಬೆಳವಣಿಗೆಯಾದಂತೆ ಅದೇ ತಂತ್ರಜ್ಞಾನ ಬಳಸಿ ಖದೀಮರು ಜನರನ್ನು ಹೆದರಿಸಿ, ಮರುಳು ಮಾಡಿ ಹಣ ದೋಚಿತ್ತಿದ್ದಾರೆ ವಿದ್ಯಾವಂತರೇ ಹೆಚ್ಚು ವಂಚಕರ ಜಾಲದಲ್ಲಿ ಸಿಲುಕುತ್ತಿರುವುದು ವಿಷಾದಕರ ಎಂದು ಕಗ್ಗಲೀಪುರ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ವೆಂಕಟೇಶ್ ಹೇಳಿದರು. ಕಗ್ಗಲೀಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಆಯೋಜಿಸಿದ್ದ ಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ವಂಚಕರು ತಮ್ಮ ವರಸೆ ಬದಲಿಸಿ, ಪೊಲೀಸರ ಹೆಸರಿನಲ್ಲಿಯೂ ಜನರಿಗೆ ಮೋಸ ಮಾಡುತ್ತಿದ್ದಾರೆ. ನಿಮ್ಮ ಹೆಸರಿನ ಪಾರ್ಸಲ್‌ನಲ್ಲಿ ಮಾದಕ ವಸ್ತು, ನಕಲಿ ಸಿಮ್ ಮತ್ತು ಪಾಸ್‌ಪೋರ್ಟ್ ಇತ್ಯಾದಿ ಅಪರಾಧ ಅರ್ಹ ವಸ್ತುಗಳಿಗೆ ಎಂದು ಹೆದರಿಸಿ, ಹಣ ಸೂಲಿಗೆ ಮಾಡುತ್ತಿದ್ದಾರೆ. ಇದನ್ನು 'ಡಿಜಿಟಲ್ ಅರೆಸ್ಟ್' ಎಂದು ಹೇಳಲಾಗುತ್ತಿದೆ. ಪೊಲೀಸರ ಹೆಸರಲ್ಲಿ ಕರೆ ಮತ್ತು ವಿಡಿಯೋ ಕರೆ ಬಂದರೆ ನಿರ್ಲಕ್ಷಿಸಿ ಎಂದು ಸಲಹೆ ನೀಡಿದರು. ಮಕ್ಕಳು ಮಾದಕ ವಸ್ತುಗಳ ಬಗ್ಗೆ ಸಾಕಷ್ಟು ಜಾಗೃತಿ ವಹಿಸಬೇಕು. ಯಾರಾದರೂ ಅಂತಹ ವಸ್ತುಗಳನ್ನು ನೀಡುವುದು ಕಂಡು ಬಂದರೆ ತಕ್ಷಣ ನಿಮ್ಮ ಶಿಕ್ಷಕರು ಮತ್ತು ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಅಪರಾಧ ತಡೆಗೆ ಕೇವಲ ಪೊಲೀಸರಷ್ಟೇ ಅಲ್ಲ ಸಾರ್ವಜನಿಕರ ಸಹಕಾರವೂ ಅಗತ್ಯ ಎಂದರು.

# ಇನ್ಸೂರೆನ್ಸ್ ಹಣಕ್ಕಾಗಿ ಅಪ್ಪನನ್ನೇ ಕೊಂದ ಮಗ: ಸಿಕ್ಕಿಬಿದ್ದಿದ್ದು ಹೇಗೆ?

## ತಂದೆ ಮತ್ತು ಅಣ್ಣನ ಹೆಸರಿನಲ್ಲಿ ಇನ್ಸೂರೆನ್ಸ್ ಮಾಡಿಸಿ ಅದನ್ನು ವಾಮಮಾರ್ಗದಲ್ಲಿ ಪಡೆಯುವ ಸಲುವಾಗಿ ಹೆತ್ತ ಅಪ್ಪನಿಗೆ ಮುಹೂರ್ತ

• **ಉದಯವಾಹಿನಿ ಪಿರಿಯಾಪಟ್ಟಣ**

ಇನ್ಸೂರೆನ್ಸ್ ಹಣಕ್ಕಾಗಿ ಮಗನೊಬ್ಬ ಮಾಡಿದ ಸಂಚಿಗೆ ಎರಡು ಜೀವ ಬಲಿಯಾದ ಘಟನೆ ಪಿರಿಯಾಪಟ್ಟಣ ತಾಲ್ಲೂಕಿನ ಕೊಪ್ಪ ಗ್ರಾಮದ ಗೆರೋಸಿ ಕಾಲೋನಿಯಲ್ಲಿ ನಡೆದಿದೆ. ಈ ಕೃತ್ಯದ ಹಿಂದಿನ ಮಸಲತ್ತು ಅರಿತರೆ ಲೋಕದಲ್ಲಿ ಇಂತಹವರು ಇರುತ್ತಾರಾ? ಎಂಬ ಪ್ರಶ್ನೆಯೊಂದು ಮೂಡದಿರದು. ಇಷ್ಟಕ್ಕೂ ನಡೆದ ಘಟನೆ ಏನು ಎಂಬುದನ್ನು ನೋಡುತ್ತಾ ಹೋದರೆ ವ್ಯಕ್ತಿಯೊಬ್ಬನ ಪಾಪ ಕೃತ್ಯ ಬೆಳಕಿಗೆ ಬರುತ್ತದೆ. ಪಿರಿಯಾಪಟ್ಟಣ ತಾಲ್ಲೂಕಿನ ಕೊಪ್ಪ ಗ್ರಾಮದ ಗೆರೋಸಿ ಕಾಲೋನಿ ನಿವಾಸಿ ಪಾಂಡು ಎಂಬಾತನೇ ತಂದೆಯನ್ನು ಹತ್ಯೆಗೈದ ಪಾಪಿ ಮಗ.

**ಪಾಪ ಕೃತ್ಯ ಬೆಳಕಿಗೆ**

ಈತ ತಂದೆ ಮತ್ತು ಅಣ್ಣ ಧರ್ಮನ ಹೆಸರಿನಲ್ಲಿ ಇನ್ಸೂರೆನ್ಸ್ ಮಾಡಿಸಿ ಅದನ್ನು ವಾಮಮಾರ್ಗದಲ್ಲಿ ಪಡೆಯುವ ಸಲುವಾಗಿ ಹೆತ್ತ ಅಪ್ಪನಿಗೆ ಮುಹೂರ್ತವಿಟ್ಟಿದ್ದಾನೆ. ಈ ನಡುವೆ ಅಪ್ಪ ಸತ್ತ ವಿಚಾರ ತಿಳಿಯುತ್ತಿದ್ದಂತೆಯೇ ಹಿರಿಮಗ ಧರ್ಮ ಬೇಸರಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಇಲ್ಲಿ ಎರಡು ಜೀವಹೋಗಿದ್ದು ಅದಕ್ಕೆ ಕ್ರಿಮಿನಲ್ ಮೈಂಡ್ ಪಾಂಡು ಕಾರಣನಾಗಿದ್ದಾನೆ.

ಹಂತಕ ಪಾಂಡುಗೆ ಒಮ್ಮೆಲೆ ಹಣ ಮಾಡುವ ಬಯಕೆ ಬಂದಿದೆ. ಕಷ್ಟಪಟ್ಟು ದುಡಿದು ಒಮ್ಮೆಲೆ ಲಕ್ಷಾಂತರ ರೂಪಾಯಿ ಸಂಪಾದಿಸುವುದು ಕಷ್ಟವಾಗಿರುವ ಕಾರಣ ಸುಲಭವಾಗಿ ಹಣ ಸಂಪಾದಿಸುವ ಮೋಸದ ಮಾರ್ಗ ಹುಡುಕುತ್ತಿದ್ದಾಗ ಅವನಿಗೆ ಬಂದ ಆಲೋಚನೆಯೇ ವಿಕೃತವಾಗಿತ್ತು. ಬಹುಶಃ ಯಾವ ಮಕ್ಕಳಿಗೂ ಇಂತಹ ಆಲೋಚನೆ ಬರಲು ಸಾಧ್ಯವಿಲ್ಲ.

ಆದರೆ ಪಾಪಿ ಪಾಂಡುಗೆ ಬಂದಿದ್ದ ಆಲೋಚನೆ ಮಾತ್ರ ಭಿನ್ನವಾಗಿತ್ತು. ಅದು ಏನೆಂದರೆ ತಂದೆ ಮತ್ತು ಅಣ್ಣನಿಗೆ ಇನ್ಸೂರೆನ್ಸ್ ಮಾಡಿಸುವುದಾಗಿತ್ತು.



ಉದಯವಾಹಿನಿ ಚಿತ್ರ

> **ಈ ಸುದ್ದಿಯನ್ನು ಕೇಳಿದ ಊರಿನ ಮಂದಿ ಹಿಡಿಶಾಪ ಹಾಕುತ್ತಿದ್ದಾರೆ. ಲೋಕದಲ್ಲಿ ಹಣಕ್ಕಾಗಿ ಏನು ಬೇಕಾದರೂ ಮಾಡಬಹುದು ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ.**

ಇನ್ಸೂರೆನ್ಸ್ ಮಾಡಿಸಿ ಒಂದಷ್ಟು ಕಂತು ಕಟ್ಟಿದ ಬಳಿಕ ತಂದೆಯನ್ನು ಮುಗಿಸಿ ಅಪಘಾತದ ನಾಟಕವಾಡಿದರೆ ಅದರಿಂದ ಒಂದಕ್ಕೆ ಎರಡರಷ್ಟು ಹಣ ಬರುತ್ತದೆ ಎನ್ನುವುದು ಅವನ ಉದ್ದೇಶವಾಗಿತ್ತು.

### ಪ್ರಕರಣ ದಾಖಲು

**ಪೊಲೀಸರ ವಿಚಾರಣೆ ವೇಳೆ ನನ್ನ ತಂದೆ ಹೆಸರಿನಲ್ಲಿ ಇನ್ಸೂರೆನ್ಸ್ ಮಾಡಿಸಿದ್ದು ಅಪಘಾತದಲ್ಲಿ ಸಾವನಪ್ಪಿದ್ರೆ ಡಬಲ್ ಹಣ ಸಿಗುವ ಆಸೆಯಲ್ಲಿ ಈ ಕೃತ್ಯ ಮಾಡಿದ್ದಾಗಿ ಒಪ್ಪಿಕೊಂಡಿದ್ದಾನೆ. ಆರೋಪಿಯನ್ನು ವಶಪಡಿಸಿಕೊಂಡಿರುವ ಬೈಲುಕುಪ್ಪೆ ಪೊಲೀಸರು ಆರೋಪಿಯ ವಿರುದ್ಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.**

ಆದರೆ ತಂದೆಗೆ ಇದ್ಯಾವುದೂ ಗೊತ್ತೇ ಇರಲಿಲ್ಲ. ಇನ್ಸೂರೆನ್ಸ್ ಮಾಡಿಸಿದ ಪಾಂಡು ಅಪ್ಪನ ಮುಗಿಸಲು ಸಮಯ ಸಾಧಿಸುತ್ತಿದ್ದನು. ಈ ನಡುವೆ ತಂದೆಯನ್ನು ಟಿಬೇಟಿಯನ್ ಕ್ಯಾಂಪಿನಲ್ಲಿ ಕೆಲಸ ಇದೆ ಹೋಗು ಎಂದು ಕಳುಹಿಸಿ ಅವರನ್ನು ಹಿಂಬದಿಯಿಂದ ಹಿಂಬಾಲಿಸಿ ಸಮಯ ಸಾಧಿಸಿ ಯಾರು ಇಲ್ಲದ ವೇಳೆ ದೊಣ್ಣೆಯಿಂದ ತಲೆಗೆ ಹೊಡೆದು ಅಪಘಾತವೆಂಬಂತೆ ಬಿಂಬಿಸಿ ಬಿ.ಎಂ. ರಸ್ತೆಯ ಮಂಚ ದೇವನಹಳ್ಳಿ ಬಳಿ ಶವವನ್ನು ಎಸೆದಿದ್ದನು.

ಇದಾದ ಬಳಿಕ ಬೈಲುಕುಪ್ಪೆ ಪೊಲೀಸರಿಗೆ ನನ್ನ ಅಪ್ಪನಿಗೆ ಅಪರಿಚಿತ ವಾಹನ ಡಿಕ್ಕಿಯಾಗಿ ಸಾವನಪ್ಪಿರುವುದಾಗಿ ಮಾಹಿತಿ ನೀಡಿದ್ದನು. ಆದರೆ ಘಟನೆಗೆ ಸಂಬಂಧಿಸಿದಂತೆ ತನಿಖೆ ನಡೆಸಿದ ಸಬ್ ಇನ್ಸ್‌ಪೆಕ್ಟರ್ ಅಜಯ್ ಕುಮಾರ್ ಮತ್ತು ತಂಡಕ್ಕೆ ಪಾಂಡುವಿನ ಹೇಳಿಕೆ ಮತ್ತು ನಡವಳಿಕೆ ಅನುಮಾನ ಮೂಡಿಸಿತ್ತು.

ಹೀಗಾಗಿ ಪಾಂಡುವನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ಮಾಡಿರುವ ಸತ್ಯವನ್ನು ಒಪ್ಪಿಕೊಂಡಿದ್ದಾನೆ. ಈ ನಡುವೆ ತಂದೆ ಸಾವನ್ನಪ್ಪಿರುವ ವಿಚಾರ ತಿಳಿದು ಮತ್ತೊಬ್ಬ ಮಗ ಧರ್ಮ (ಹಂತಕನ ಅಣ್ಣ) ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

## ಮಿನಿ ನ್ಯೂಸ್

### ಪುಟ್‌ಪಾತ್ ಒತ್ತುವರಿ ತೆರವು

• **ಉದಯವಾಹಿನಿ, ಚಿಂತಾಮಣಿ**

ನಗರದಲ್ಲಿ ಪಾದಾಚಾರಿ ಮಾರ್ಗದ ಒತ್ತುವರಿ ತೆರವುಗೊಳಿಸುವ ಕಾರ್ಯಾಚಾರಣೆ ಮೂರನೇ ದಿನವಾದ ಮುಂದುವರಿಯಿತು.

ಮುಖ್ಯ ರಸ್ತೆ ಮತ್ತು ಪಾದಾಚಾರಿ ರಸ್ತೆಗಳ ಒತ್ತುವರಿಯಿಂದ ನಗರದಲ್ಲಿ ಅಪಘಾತಗಳು ಹೆಚ್ಚು ನಡೆಯುತ್ತಿದ್ದು, ನಾಗರಿಕರು ನಗರಸಭೆ ಮತ್ತು ಪೊಲೀಸ್ ಇಲಾಖೆಯ ವಿರುದ್ಧ ಅಸಮಧಾನ ವ್ಯಕ್ತಪಡಿಸಿದ್ದರು. ಬೆಂಗಳೂರು ಜೋಡಿ ರಸ್ತೆಯಿಂದ ನ್ಯಾಯಾಲಯ ರಸ್ತೆ, ಗಜಾನನ ವೃತ್ತದಿಂದ ನ್ಯಾಯಾಲಯದವರೆಗೆ ಒತ್ತುವರಿ ತೆರವು ಕಾರ್ಯ ಯಾವುದೇ ಅಡೆತಡೆ ಇಲ್ಲದಂತೆ ನಡೆಯಿತು. ಈ ರಸ್ತೆಯಲ್ಲಿ ಸರ್ಕಾರಿ ಪ್ರಥಮದರ್ಜೆ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರ, ಸರ್ಕಾರಿ ಮಹಿಳಾ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್, ವಿಶ್ವೇಶ್ವರಯ್ಯ ಎಂಜನಿಯರಿಂಗ್ ಕಾಲೇಜು, ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಮತ್ತಿತರ ಸಂಸ್ಥೆಗಳ ಸಾವಿರಾರು ವಿದ್ಯಾರ್ಥಿಗಳು ಹಾಗೂ ವಾಹನಗಳು ಸಂಚರಿಸುತ್ತವೆ.

ಒತ್ತುವರಿಯಿಂದ ಸಂಚಾರಕ್ಕೆ ತೊಂದರೆಯಾಗಿ ಅಪಘಾತಗಳು ಸಂಭವಿಸುತ್ತಿದ್ದು, ಒತ್ತುವರಿಯನ್ನು ತೆರವುಗೊಳಿಸಬೇಕು ಎಂದು ಅನೇಕ ಬಾರಿ ಸಾರ್ವಜನಿಕರು ಒತ್ತಾಯಿಸಿದ್ದರು. ಪೌರಾಯುಕ್ತರು ಹಾಗೂ ಸಿಬ್ಬಂದಿ ಎರಡು ಜೆಸಿಬಿ ಯಂತ್ರಗಳೊಂದಿಗೆ ಕಾರ್ಯಾಚರಣೆ ನಡೆಸಿದರು. ಬಹುತೇಕ ಅಂಗಡಿಗಳ ಮಾಲೀಕರು ಸ್ವಯಂಪ್ರೇರಿತರಾಗಿ ತೆರವುಗೊಳಿಸಿದ್ದರು. ಉಳಿದ ಅಂಗಡಿಗಳ ಮುಂದಿನ ಒತ್ತುವರಿಯನ್ನು ತೆರವುಗೊಳಿಸಿ ಸುಗಮಸಂಚಾರಕ್ಕೆ ಅನುವು ಮಾಡಿಕೊಟ್ಟರು.



ಉದಯವಾಹಿನಿ ಚಿತ್ರ

### ಕೆ.ಎಂ.ಎಫ್ ಹಾಲಿನ ಪುಡಿ ಅಕ್ರಮ ದಾಸ್ತಾನು: ಓರ್ವನ ಬಂಧನ

• **ಉದಯವಾಹಿನಿ ಕೊಳ್ಳೇಗಾಲ**

ಸರಕಾರಿ ಶಾಲೆಯಲ್ಲಿ ಮಕ್ಕಳಿಗೆ ನೀಡುವ ಕೆ.ಎಂ.ಎಫ್ ನ ಹಾಲಿನ ಪುಡಿಯನ್ನು ಅಕ್ರಮವಾಗಿ ದಾಸ್ತಾನು ಮಾಡಿದ್ದ ಪೆಟ್ಟಿಗೆ ಅಂಗಡಿಯ ಮೇಲೆ ನಗರ ಪೊಲೀಸರು ಶುಕ್ರವಾರ ದಾಳಿ ನಡೆಸಿ ಓರ್ವ ನನ್ನು ಬಂಧಿಸಿದ್ದಾರೆ. ಈದ್ಯಾ ಮೊಹಲ್ಲಾ ನಿವಾಸಿ ನಯಾಜ್ ಪಾಷ (25) ಬಂಧಿತ ಆರೋಪಿಯಾದ್ದು, ಅಕ್ರಮವಾಗಿ ದಾಸ್ತಾನು ಮಾಡಿದ್ದ 90 ಕೆಜಿ ಹಾಲಿನ ಪುಡಿ ವಶಪಡಿಸಿಕೊಂಡಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಮುಂದಿನ ತನಿಖೆ ಕೈಗೊಂಡಿದ್ದಾರೆ.



ಉದಯವಾಹಿನಿ ಚಿತ್ರ

### ಮಾದಕ ವಸ್ತು ಪತ್ತೆಯಲ್ಲಿ ಕಾಪರ್‌ಗೆ ಚಿನ್ನ, ಅಪರಾಧ ಪತ್ತೆಯಲ್ಲಿ ಬ್ರೂನೊಗೆ ಕಂಚು

• **ಉದಯವಾಹಿನಿ ಮಡಿಕೇರಿ**

ಅಪರಾಧ ಪ್ರಕರಣಗಳ ಪತ್ತೆಯಲ್ಲಿ ಪೊಲೀಸ್ ಇಲಾಖೆಗೆ ಹೆಚ್ಚು ಪರಿಣಾಮಕಾರಿಯಾಗಿ ಸಹಾಯ ಮಾಡಬಲ್ಲ ವಿಭಾಗಗಳಲ್ಲಿ ಶ್ವಾನದಳವೂ ಒಂದು. ಕ್ಲಿಷ್ಟಕರ ಪ್ರಕರಣಗಳನ್ನು ಸುಲಭವಾಗಿ ಬೇಧಿಸಲು ಕೊಡಗು ಜಿಲ್ಲೆಯ ದಕ್ಷ ಪೊಲೀಸ್ ಅಧಿಕಾರಿಗಳಿಗೆ ಶ್ವಾನದಳದ ಕಾಪರ್ ಹಾಗೂ ಬ್ರ್ಯೂನೊ ಶ್ವಾನಗಳು ಹೆಚ್ಚು ಸಹಕಾರಿಯಾಗಿವೆ.

ಮಾದಕ ವಸ್ತುಗಳ ಅಪರಾಧ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಕಾಪರ್ ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದ್ದು, ಪೊಲೀಸ್ ಇಲಾಖೆಯಿಂದ ಚಿನ್ನದ ಪದಕವನ್ನು ಮುಡಿಗೇರಿಸಿಕೊಂಡಿದೆ. ಅಪರಾಧ ಪತ್ತೆಯಲ್ಲಿ ಬ್ರ್ಯೂನೊ ಶ್ವಾನ ರಾಜ್ಯದಲ್ಲಿಯೇ ಅತ್ಯುತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸಿ ಕಂಚಿನ ಪದಕಕ್ಕೆ ಭಾಜನವಾಗಿದೆ.

ಕೊಡಗು ಜಿಲ್ಲಾ ಪೊಲೀಸ್ ನ ಜಿಲ್ಲಾ ಮಟ್ಟದ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಅವರು ಎರಡು ಶ್ವಾನಗಳಿಗೆ ಪದಕ ಮತ್ತು ಪ್ರಶಂಸನಾ ಪತ್ರ ಪ್ರದಾನ ಮಾಡಿದರು. ಸ್ವತ: ಕಾಪರ್ ಹಾಗೂ ಬ್ರೂನೊ ಪದಕ ಪಡೆದುಕೊಳ್ಳುವ ಮೂಲಕ ನೆರೆದಿದ್ದವರ ಚಪ್ಪಾಳೆ ಗಿಟ್ಟಿಸಿಕೊಂಡವು. ಮುಂದಿನ ವರ್ಷ ಫೆಬ್ರವರಿ ತಿಂಗಳಿನಲ್ಲಿ ಜಾರ್ಖಂಡ್ ರಾಜ್ಯದ ರಾಂಚಿಯಲ್ಲಿ ನಡೆಯುವ ಆಲ್ ಇಂಡಿಯಾ ಪೊಲೀಸ್ ಮೀಟ್‌ನಲ್ಲಿ ಕಾಪರ್ ಪಾಲ್ಗೊಳ್ಳುತ್ತಿರುವುದು ವಿಶೇಷ.

ಜಿಲ್ಲಾ ಸಶಸ್ತ್ರ ದಳದ ಸಹಾಯಕ ಪೊಲೀಸ್ ನಿರೀಕ್ಷಕ ಜಿತೇಂದ್ರ ಅವರ ಉಸ್ತುವಾರಿಯಲ್ಲಿ ಕಾಪರ್ ಹಾಗೂ ಬ್ರೂನೊ ಶ್ವಾನಗಳನ್ನು ಪೊಲೀಸ್ ಸಿಬ್ಬಂದಿಗಳಾದ ಮನಮೋಹನ್ ಬಿ.ಪಿ, ಸಿದ್ದನಗೌಡ ಪಾಟೀಲ್, ವಿಜಯ ಹಾಗೂ ಪ್ರದೀಪ್ ಕುರುವತ್ತಿ ನಿರ್ವಹಿಸುತ್ತಿದ್ದಾರೆ.

### ಕಳ್ಳತನಕ್ಕೆ ಮಹಿಳೆಯರನ್ನೇ ಟಾರ್ಗೆಟ್ ಮಾಡುತ್ತಿದ್ದ ಗ್ಯಾಂಗ್ ಕಡೆಗೂ ಅರೆಸ್ಟ್

• **ಉದಯವಾಹಿನಿ ಚಿಕ್ಕಬಳ್ಳಾಪುರ**

ಕಳೆದ ಕೆಲವು ತಿಂಗಳುಗಳಿಂದ ಕಳ್ಳಿಯರ ಗ್ಯಾಂಗ್ ಬಂಧನಕ್ಕೆ ಬಲೆ ಬೀಸಿದ್ದ ಪೊಲೀಸರಿಗೆ ಚಳ್ಳೆ ಹಣ್ಣು ತಿನಿಸುತ್ತಿದ್ದ ಮಹಿಳೆಯರನ್ನು ಬಂಧಿಸುವಲ್ಲಿ ಕಡೆಗೂ ಖಾಕಿ ಪಡೆ ಯಶಸ್ವಿಯಾಗಿದೆ. ಮಹಿಳಾ ಕಳ್ಳಿಯರನ್ನು ಬಂಧಿಸಿದ ಪೊಲೀಸರು, ಅವರು ಕದ್ದ ಮಾಲುಗಳನ್ನು ವಶಕ್ಕೆ ಪಡೆದಿದ್ದಾರೆ. ರಾಜಕೀಯ ಕ್ರೀಡೆ ಐಷಾರಾಮಿ ಜೀವನ ಮಾಡುವ ಆಸೆಯಿಂದ ಕಳ್ಳತನದ ಹಿಂದೆ ಬಿದ್ದ ಈ ಕಳ್ಳಿಯರ ಗ್ಯಾಂಗ್, ತಮ್ಮ ಕೈಚಳಕ ತೋರಲು ಮಹಿಳೆಯರನ್ನೇ ಟಾರ್ಗೆಟ್ ಮಾಡುತ್ತಿದ್ದರು. ಗೌರಿಬಿದನೂರು ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಸಿಸಿಟಿವಿ ದೃಶ್ಯಾವಳಿಗಳನ್ನು ಆಧರಿಸಿ ಮತ್ತು ಇತರೆ ಸಾಕ್ಷ್ಯಗಳನ್ನು ಸಂಗ್ರಹಿಸಿ, ಪೊಲೀಸರು ಖದೀಮರ ಗುರುತು ಪತ್ತೆಹಚ್ಚಿದ್ದಾರೆ.

ಸೇಡಂನ ರೇಖಾ ಬಾಯಿ ಕೋಂ ಲೇಟ್ ಶೇಖರ್ 58 ವರ್ಷ, ರೋಜಾ ಕೋಂ ಶ್ರೀನಾಥ್ 27 ವರ್ಷ, ಕರೀನಾ ಕೋಂ ಧನ್ ಪಾಟೀಲ್ 25 ವರ್ಷ ಎಂದು ಗುರುತಿಸಲಾಗಿದೆ. ತುಮಕೂರು, ಹೊಳೆನರಸೀಪುರ, ಹಲಸೂರು, ರಾಮನಗರ ವ್ಯಾಪ್ತಿಯಲ್ಲೂ ಕಳ್ಳಿಯರ ಕೈಚಳಕ ನಡೆದಿದೆ. ಸರಣಿ ಸರಗಳ್ಳತನ ಮಾಡಿರುವ ಆರೋಪಿಗಳು, ಸರಗಳ್ಳತನ, ಪಿಕ್ ಪ್ಯಾಕೇಟ್ ಮಾಡುವುದು, ಬಸ್ಸು ನಿಲ್ದಾಣದಲ್ಲಿ ಜನನಿಬಿಡ ಪ್ರದೇಶಗಳಲ್ಲಿ, ನೂಕುನುಗ್ಗಲು ಜಾಗದಲ್ಲಿ ಕಳ್ಳತನ ಮಾಡುವುದೇ ಪ್ರವೃತ್ತಿ ಮಾಡಿಕೊಂಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಊರಿನಿಂದ ಊರಿಗೆ ಹೋಗಿ ನಿರಂತರ ಕಳ್ಳತನದಲ್ಲಿ ತೊಡಗಿದ್ದ ಈ ಮಹಿಳೆಯರು, ಶೋಕಿ ಜೀವನಕ್ಕಾಗಿ ಕಳ್ಳತನ ಮಾಡುತ್ತಿರುವುದಾಗಿ ಹೇಳಿಕೊಂಡಿದ್ದಾರೆ.

## ಅಂತರಾಳದಿಂದ.. EDITORIAL

# ಚುನಾವಣಾ ಆಯೋಗ ಎಂಬ ಹಲ್ಲು ಕಿತ್ತ ಹಾವು

ಹತ್ತು ವರ್ಷಗಳ ಹಿಂದೆ ಕೇಂದ್ರದ ಅಧಿಕಾರ ಸೂತ್ರ ಹಿಡಿದ ನರೇಂದ್ರ ಮೋದಿ ಅವರ ನೇತೃತ್ವದ ಸರಕಾರ ಒಂದೆಡೆ ಜನರಿಗೆ ಸುಳ್ಳು ಹೇಳುತ್ತ ಹಾಗೂ ಜಾತಿ ಮತದ ಹೆಸರಿನಲ್ಲಿ ದ್ವೇಷ ಮತ್ತು ವಿಭಜನೆಯ ವಿಷ ಬೀಜ ಬಿತ್ತುತ್ತಾ ಬಂದಿರುವುದು ಎಲ್ಲರಿಗೂ ಗೊತ್ತಿದೆ. ಅದರ ಜೊತೆ ಜೊತೆಗೆ ಸ್ವಾಯತ್ತ ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತ ಏಕ ಚಕ್ರಾಧಿಪತ್ಯದ ಗುರಿ ಸಾಧಿಸಲು ಹೊರಟಿದೆ ಚುನಾವಣಾ ಆಯೋಗವಂತೂ ಸರಕಾರದ ಕಣ್ಣಸನ್ನೆಯಂತೆ ಕಾರ್ಯನಿರ್ವಹಿಸುತ್ತಿದೆ. ಈಗ ಇದು ಸಾಲದೆಂಬಂತೆ ಚುನಾವಣೆಗೆ ಸಂಬಂಧಿಸಿದ ಕೆಲವು ನಿಯಮಾವಳಿಗಳನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿದೆ. ಪ್ರತಿಪಕ್ಷಗಳ ಜೊತೆಗೆ ಸಮಾಲೋಚನೆ ಮಾಡದೆ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಸಂದೇಹಾಸ್ಪದ ಬದಲಾವಣೆಗಳನ್ನು ಮಾಡಿದೆ. ನರೇಂದ್ರ ಮೋದಿಯವರ ಬಿಜೆಪಿ ಸರಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಚುನಾವಣಾ ಆಯೋಗದಲ್ಲಿ ಕೈಯಾಡಿಸುತ್ತಲೇ ಇದೆ. ಮುಖ್ಯ ಚುನಾವಣಾ ಆಯುಕ್ತರನ್ನು ನೇಮಕ ಮಾಡುವ ಪ್ರಕ್ರಿಯೆ ಮೇಲೆ ಸರಕಾರ ಸಂಪೂರ್ಣ ಹಿಡಿತ ಸಾಧಿಸಿದೆ. ಈವರೆಗೆ ಮುಖ್ಯ ಚುನಾವಣಾ ಆಯುಕ್ತರ ನೇಮಕದಲ್ಲಿ ಸರಕಾರ ನೇರವಾಗಿ ಹಸ್ತಕ್ಷೇಪ ಮಾಡುವಂತಿರಲಿಲ್ಲ. ಪ್ರಧಾನಿ ನೇತೃತ್ವದಲ್ಲಿ ಮೂವರನ್ನು ಒಳಗೊಂಡ ಒಂದು ಆಯ್ಕೆ ಸಮಿತಿಯನ್ನು ರಚಿಸಲಾಗುತ್ತಿತ್ತು. ಈ ಆಯ್ಕೆ ಸಮಿತಿಯಲ್ಲಿ ಪ್ರಧಾನ ಮಂತ್ರಿ, ಲೋಕಸಭೆಯ ಪ್ರತಿಪಕ್ಷ ನಾಯಕ, ಸುಪ್ರೀಂ ಕೋರ್ಟಿನ ನ್ಯಾಯಾಧೀಶರು ಇರಬೇಕೆಂದು ಹೇಳಲಾಗಿತ್ತು. ಹೀಗಾಗಿ ಚುನಾವಣಾ ಆಯೋಗದ ಆಯುಕ್ತರನ್ನು ನೇಮಕ ಮಾಡುವ ಅಧಿಕಾರ ಶಾಸಕಾಂಗ ತನ್ನಲ್ಲೇ ಉಳಿಸಿಕೊಂಡಂತಾಗಿದೆ. ಈ ತಂತ್ರದಿಂದ ತಿದ್ದುಪಡಿಗೆ ಇನ್ನೂ ಒಂದು ಕಾರಣವಿದೆ. ಹರ್ಯಾಣ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದ ಸಿಸಿಟಿವಿ ಕ್ಯಾಮರಾದ ದೃಶ್ಯಾವಳಿಗಳು ಸೇರಿದಂತೆ ಎಲ್ಲಾ ದಾಖಲೆಗಳನ್ನು ತಕರಾರು ಅರ್ಜಿಯನ್ನು ಸಲ್ಲಿಸಿರುವ ಮುಹಮ್ಮದ್ ಅವರಿಗೆ ನೀಡುವಂತೆ ಪಂಜಾಬ್ ಮತ್ತು ಹರ್ಯಾಣ ಹೈಕೋರ್ಟ್ ಇತ್ತೀಚೆಗೆ ಆದೇಶ ನೀಡಿತ್ತು. ಆ ಆದೇಶದ ನಂತರ ಈ ನಿಯಮಾವಳಿಗಳಿಗೆ ತಿದ್ದುಪಡಿ ತಂದಿರುವುದು ಗಮನಾರ್ಹ ಸಂಗತಿಯಾಗಿದೆ. ತಿದ್ದುಪಡಿಯಾದ ನಿಯಮಾವಳಿಗಳ ಪ್ರಕಾರ ಕೋರ್ಟ್ ಆದೇಶದಂತೆ ಮುಹಮ್ಮದ್ ಅವರಿಗೆ ಸದರಿ ದಾಖಲೆಗಳು ಸಿಗುವುದಿಲ್ಲ. ಹರ್ಯಾಣ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕೆಲವು ಆಕ್ಷೇಪಗಳು ಬಂದಿದ್ದವು. ಅವುಗಳ ಹಿನ್ನೆಲೆಯಲ್ಲಿ ನಿಯಮಾವಳಿ ತಿದ್ದುಪಡಿ ತರಲಾಗಿದೆ. ಅದೇನೇ ಇರಲಿ ನಿಯಮಾವಳಿಗಳಿಗೆ ಯಾವುದೇ ತಿದ್ದುಪಡಿ ತರುವ ಮೊದಲು ಪ್ರತಿಪಕ್ಷ ನಾಯಕರೊಂದಿಗೆ ಸಮಾಲೋಚನೆ ಮಾಡಬೇಕಿತ್ತು. ಈ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ಚುನಾವಣಾ ಆಯೋಗ ಮತ್ತು ಸರಕಾರಗಳು ವಿಫಲಗೊಂಡಿವೆ. ಇದ್ದರಿಂದ ಪ್ರತಿಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ ಇಷ್ಟೆಲ್ಲ ಮಾಡಿಯೂ ಈ ಸರಕಾರಕ್ಕೆ ಸಮಾಧಾನವಿಲ್ಲ. ಇದೀಗ ಚುನಾವಣೆಯ ಕುರಿತ ಕೆಲವು ನಿಯಮಾವಳಿಗಳನ್ನು ಬದಲಾಯಿಸಲು ಸರಕಾರ ಮುಂದಾಗಿದೆ. ಸಿಸಿಟಿವಿ ಕ್ಯಾಮರಾ ದೃಶ್ಯಗಳು ಹಾಗೂ ಅಭ್ಯರ್ಥಿಗಳ ವಿಡಿಯೋ ಚಿತ್ರೀಕರಣದ ದೃಶ್ಯಗಳ ಸಾರ್ವಜನಿಕ ಪರಿಶೀಲನೆಗೆ ಇರುವ ಅವಕಾಶಕ್ಕೆ ತಡೆ ಒಡ್ಡುವುದು ಮತ್ತು ವೆಬ್ ಕಾಸ್ಟಿಂಗ್ ದೃಶ್ಯಾವಳಿಗಳನ್ನು ಪಡೆಯಲು ಜನರಿಗೆ ಅವಕಾಶ ನಿರಾಕರಿಸುವುದು ಈ ನಿಯಮಾವಳಿಗಳನ್ನು ಬದಲಾಯಿಸುವ ಉದ್ದೇಶವಾಗಿದೆ. ಆದರೆ ಈ ಬದಲಾವಣೆ ಚುನಾವಣೆ ಪಾರದರ್ಶಕತೆಯ ನಿಯಮಾವಳಿಗೆ ವ್ಯತಿರಿಕ್ತವಾಗಿದೆ. ಈಗ ಚುನಾವಣಾ ಆಯೋಗದ ಸಲಹೆಯ ಮೇರೆಗೆ ಈ ತಿದ್ದುಪಡಿ ಮಾಡಲಾಗಿದೆ ಎಂದು ಸರಕಾರ ಹಾರಿಕೆಯ ಉತ್ತರ ನೀಡುತ್ತಿದೆ. ಮತಗಟ್ಟೆಯಲ್ಲಿ ಕಾಪಾಡಬೇಕಾದ ಗೌಪ್ಯತೆಯನ್ನು ಕೃತಕ ಬುದ್ಧಿಮತ್ತೆಯನ್ನು ಬಳಸಿ ಉಲ್ಲಂಘನೆ ಮಾಡುವ ಸಾಧ್ಯತೆಯನ್ನು ತಪ್ಪಿಸುವುದಕ್ಕಾಗಿ ಈ ತಿದ್ದುಪಡಿ ಮಾಡಲಾಗಿದೆ ಎಂದು ಸರಕಾರ ಹೇಳುತ್ತಿದೆ. ಇದರಿಂದಾಗಿ ಚುನಾವಣೆಗೆ ಸಂಬಂಧಿಸಿದ ಕೆಲವು ದಾಖಲೆಗಳು ಮತದಾರರಿಗೆ ಲಭ್ಯವಾಗುವುದಕ್ಕೆ ಅಡ್ಡಿಯಾಗಿದೆ. ಚುನಾವಣಾ ನಿಯಮಾವಳಿಗೆ ತಂದಿರುವ ಈ ತಿದ್ದುಪಡಿಗಳಿಂದಾಗಿ ಸಂಸದೀಯ ಪ್ರಜಾಪ್ರಭುತ್ವದ ತಳಹದಿಯಾದ ಪಕ್ಷ ವ್ಯವಸ್ಥೆಗೆ ತೀವ್ರ ನಷ್ಟ ಉಂಟಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಚುನಾವಣಾ ಆಯೋಗದ ಬಗ್ಗೆ ಜನರಲ್ಲಿ ಅಪನಂಬಿಕೆ ಉಂಟಾಗುತ್ತದೆ. ಪ್ರಜಾಪ್ರಭುತ್ವ ಸುರಕ್ಷಿತವಾಗಿ ಇರಬೇಕೆಂದರೆ ಯಾವುದೇ ಪ್ರಕ್ರಿಯೆಗಳು ಪಾರದರ್ಶಕವಾಗಿರಬೇಕು ಒಮ್ಮೆ ಅಪನಂಬಿಕೆ ಉಂಟಾದರೆ ಮುಂದೆ ಜನಸಾಮಾನ್ಯರಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯ ಬಗ್ಗೆ ನಂಬಿಕೆ ಹೊರಟು ಹೋಗುತ್ತದೆ ಎಂಬುದನ್ನು ಅಧಿಕಾರದಲ್ಲಿರುವವರು ಅರ್ಥ ಮಾಡಿಕೊಳ್ಳಬೇಕು. ಸರಕಾರ ಮತ್ತು ಚುನಾವಣಾ ಆಯೋಗ ನೀಡಿರುವ ಸ್ಪಷ್ಟೀಕರಣ ನಿಜಕ್ಕೂ ಸಮರ್ಪಕವಾಗಿಲ್ಲ.ಸರಕಾರ ಮತ್ತು ಚುನಾವಣಾ ಆಯೋಗ ಮಾಡಿರುವ ಈ ತಿದ್ದುಪಡಿಯಿಂದಾಗಿ ಇನ್ನಷ್ಟು ಪ್ರಶ್ನೆಗಳು ಉದ್ಭವವಾಗುತ್ತವೆ. ಮತಗಟ್ಟೆಗಳಲ್ಲಿ ಸ್ಥಾಪಿಸುವ ಸಿಸಿಟಿವಿ ಕ್ಯಾಮರಾಗಳು ಮತಗಟ್ಟೆಗಳ ಅಧಿಕಾರಿಗಳನ್ನು ಮಾತ್ರ ತೋರಿಸುತ್ತವೆ. ಮತದಾರರನ್ನು ತೋರಿಸುವುದಿಲ್ಲ. ಮತದಾರರು ಮತದಾನ ಮಾಡುವ ದೃಶ್ಯಗಳು ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗುವುದಿಲ್ಲ. ಹೀಗಾಗಿ ಗೌಪ್ಯ ಮತದಾನದ ನಿಯಮಗಳು ಉಲ್ಲಂಘನೆಯಾಗಬಹುದು ಎಂಬ ಆತಂಕಕ್ಕೆ ಅರ್ಥವಿಲ್ಲ ಎಂದರೆ ಅತಿಶಯೋಕ್ತಿಯಲ್ಲ. ಮತಗಟ್ಟೆಗಳ ಹೊರಗೆ ಮತದಾರರೇ ಕ್ಯಾಮರಾಗಳನ್ನು ಬಳಸುತ್ತಾರೆ. ಹೊರಗಿನ ಕ್ಯಾಮರಾ ಬಳಕೆಗೆ ಯಾವುದೇ ನಿರ್ಬಂಧ ಇಲ್ಲ, ಹಾಗೆ ನೋಡಿದರೆ ವಿಡಿಯೋಗಳು ಉಪಯುಕ್ತವಾಗಿವೆ. ಕೆಲವು ತಿಂಗಳ ಹಿಂದೆ ಚಂಡೀಗಢ ಮೇಯರ್ ಹುದ್ದೆಗೆ ನಡೆದ ನಡೆದ ಚುನಾವಣೆಯ ಮತದಾನದಲ್ಲಿ ಚುನಾವಣಾಧಿಕಾರಿಯು ಮತಪತ್ರಗಳನ್ನು ತಿರುಚಿದ ದೃಶ್ಯಗಳು ವಿಡಿಯೋದಲ್ಲಿ ದಾಖಲಾಗಿದ್ದವು. ಜಮ್ಮು-ಕಾಶ್ಮೀರ ಹಾಗೂ ನಕ್ಸಲ್ ಪ್ರಭಾವಿತ ಪ್ರದೇಶಗಳಲ್ಲಿ ಸಮಸ್ಯೆ ಇದೆ ಎಂಬ ನೆಪ ಮಾಡಿ ಇತರ ಪ್ರದೇಶಗಳಲ್ಲಿ ಜನಸಾಮಾನ್ಯರ ಹಕ್ಕುಗಳನ್ನು ಹತ್ತಿಕ್ಕುವುದು, ನಿರಾಕರಿಸುವುದು ಸರಿಯಲ್ಲ.ಈಗಾಗಲೇ ಮೋದಿ ಸರಕಾರ ಒಂದು ದೇಶ, ಒಂದೇ ಚುನಾವಣೆ ವಿಧೇಯಕ ತರುವ ಮೂಲಕ ಸಾಕಷ್ಟು ಗೊಂದಲ ಮೂಡಿಸಿದೆ.

**ಹೀಗಾಗಿ ಸದರಿ ಆಯ್ಕೆಯ ಪಾರದರ್ಶಕತೆಯನ್ನು ಯಾರೂ ಪ್ರಶ್ನಿಸುವಂತಿರಲಿಲ್ಲ, ಕಾರ್ಯಾಂಗ ಮತ್ತು ಶಾಸಕಾಂಗ ದಾರಿ ತಪ್ಪಿದಾಗ ಮಾರ್ಗದರ್ಶಿಯಾಗಿ ಕೆಲಸ ಮಾಡುವ ನ್ಯಾಯಾಂಗದ ಅತ್ಯುತ್ತಮ ವ್ಯಕ್ತಿಯೊಬ್ಬರು ಈ ಸಮಿತಿಯಲ್ಲಿ ಇರುವುದರಿಂದ ಚುನಾವಣಾ ಆಯೋಗದ ಮುಖ್ಯ ಆಯುಕ್ತರ ನೇಮಕದ ಪಾರದರ್ಶಕತೆ ಬಗ್ಗೆ ಯಾರೂ ಸಂದೇಹ ಪಡುತ್ತಿರಲಿಲ್ಲ. ಆದರೆ ಮೋದಿ ಸರಕಾರ ಸುಪ್ರೀಂ ಕೋರ್ಟಿನ ನ್ಯಾಯಾಧೀಶರನ್ನು ಹೊರಗಿಟ್ಟು ಅವರ ಬದಲಿಗೆ ಪ್ರಧಾನಿ ನೇಮಕ ಮಾಡುವ ಸಂಪುಟ ದರ್ಜೆಯ ಸಚಿವರೊಬ್ಬರನ್ನು ಸೇರ್ಪಡೆ ಮಾಡಿದೆ.**



# ಭೂಮಿತಾಯಿ ಕಾಮಧೇನು ಕಲ್ಪವೃಕ್ಷ

ಸಂಶೋಧನೆ ಮಾಡುವ ಅಗತ್ಯ



**ಕಲಾ ಸಾಹಿತ್ಯ**
**ಕೃಷ್ಣಪ್ಪ**
**ಲೇಖಕರು ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು**

• **ಉದಯವಾಹಿನಿ, ವಿಶೇಷ**

ಗಾಳಿ,ನೀರು,ಆಹಾರ ನೀಡುವ ಈ ಭೂಮಿ ತಾಯಿಗೆ ಸಾವು ಇಲ್ಲ,ಅಂತ್ಯ ಇಲ್ಲ,ವಿನಾಶ ಇಲ್ಲದ ಸೃಷ್ಟಿಯ ನಿರ್ಮಿತ ಈ ಭೂಮಿತಾಯಿ ಈ ತಾಯಿ ಸದಾ ನಿತ್ಯಹರಿದ್ವರ್ಣ, ಕಲ್ಪವೃಕ್ಷ,ಕಾಮಧೇನು. ಆದರೆ ಸ್ವರ್ಗದಂತಿರುವ ಭೂಮಿ ತಾಯಿಯನ್ನು ಕಾಪಾಡದೇ ಮನುಷ್ಯ ಫಲವತ್ತಾದ ಪವಿತ್ರ ಭೂಮಿಯನ್ನು ಅಪವಿತ್ರ ಮಾಡಿ ಕಲುಷಿತ ಮಾಡುತ್ತಾನೆ. ಆದರೂ ಸಹ ಮನುಷ್ಯನಿಗೆ ಕ್ಷಮಿಸಿ ಫಲ ನೀಡುತ್ತಾನೆ. ಪ್ರಕೃತಿಯ ಕೊಡುಗೆಗಳು ಪಂಚಭೂತಗಳಾದ ಭೂಮಿ, ಆಕಾಶ, ಗಾಳಿ, ನೀರು, ಬೆಂಕಿ ಒಳಗೊಂಡ ಜಗತ್ತು ಸೃಷ್ಟಿಗೊಂಡಿತು. ಈ ಬಗ್ಗೆ ಯಾರೂ ಕೂಡ ಸಂಶೋಧನೆ ಮಾಡುವ ಅಗತ್ಯ ಇಲ್ಲ.ಸಂಶೋಧನೆ ಮಾಡಿದ್ದೇನೆಂದು ಎದೆತಟ್ಟುಕೊಳ್ಳುವುದರಲ್ಲಿ ಅರ್ಥವಿಲ್ಲ. ಇವೆಲ್ಲಾ ಪ್ರಕೃತಿಯ ಕೊಡುಗೆ ಇವುಗಳ ಮಾಲೀಕರು ಯಾರೂ ಇಲ್ಲ ಹಾಗೂ ಹುಟ್ಟು ಸಾವು ಎರಡೂ ಕೂಡ ಇಲ್ಲ. ಇವುಗಳು ಯಾವುದೇ ಜಾತಿ,ಧರ್ಮ,ಭಾಷೆ, ಪಂಗಡ,ಪಕ್ಷಕ್ಕೆ ಸೀಮಿತವಾಗದೇ ಯಾವುದೇ ತಾರತಮ್ಯ,ಅಸಮಾನತೆ, ಕೀಳರಿಮೆ ಇಲ್ಲ. ಆದರೆ ದುರಾಸೆ, ದುರಾಭಿಮಾನ ಇರುವ ಮನುಷ್ಯ ಮಾತ್ರ ಪಂಚಭೂತ ಒಳಗೊಂಡ ಪ್ರಕೃತಿಗೆ ಸೆಡ್ಡು ಒಡೆದು ಸೆಟೆದು ನಿಂತಿದ್ದಾನೆ ಎಂತಹ ವಿಪರ್ಯಾಸ. ಜಗತ್ತಿನ ಭೂಮಂಡಲದಲ್ಲಿ ಬದುಕುತ್ತಿರುವ ಇರುವೆ ಒಂಭತ್ತು ಕೋಟಿ ಜೀವರಾಶಿಗಳು ಭೂಮಿಯಲ್ಲಿ ಬೆಳೆದಿರುವ, ಬೆಳೆಯುತ್ತಿರುವ, ಬೆಳೆಯುವ ಆಹಾರದಿಂದ ಬದುಕುತ್ತಿವೆ, ಬದುಕುತ್ತಾಯಿವೆ. ಭೂಮಿಯಲ್ಲಿ ಬೆಳೆಯುವ ಆಹಾರ ಧಾನ್ಯಗಳಿಂದ, ಗಿಡ ಸಸ್ಯಗಳು, ಹಣ್ಣು ಕಾಯಿಗಳಿಂದ ಮನುಷ್ಯನ ಆರೋಗ್ಯ ನಿಂತಿದೆ.

ಆದರೆ ಯಾವ ಯಾವ ಕಾಲಕ್ಕೆ ತಕ್ಕಂತೆ ಏನೇನು ಆಹಾರ ಸೇವನೆ ಮಾಡಿಕೊಳ್ಳಬೇಕೆಂಬ ಅರಿವಿನಲ್ಲಿ ವಿಫಲನಾಗಿ ರೋಗಕ್ಕೆ ತುತ್ತಾಗುತ್ತಾನೆ.

ಯಾವುದೇ ರೋಗ ಉಲ್ಬಳಿಸಿದಾಗ ಅದಕ್ಕೆ ರೋಗ ನಿರೋಧಕ ಶಕ್ತಿ, ಪರಿಹಾರ ನೂರಕ್ಕೆ ನೂರರಷ್ಟು ಭೂಮಿಯಲ್ಲಿ ಬೆಳೆಯುವ ಆಹಾರ ಧಾನ್ಯಗಳು ಹಾಗೂ ಔಷಧಿ ಗುಣ ಇರುವ ಸಸ್ಯಗಳು ಅವುಗಳೇ ನಿಜವಾದ ದಿವ್ಯ ಔಷಧಗಳು.

ಉಳಿದ ಇಂಗ್ಲಿಷ್ ಮೆಡಿಸನಗಳು ರೋಗ ಉಲ್ಬಣಿಸುವ ಔಷಧಿಗಳು.ಕೆಲವೊಂದು ಹೊರತುಪಡಿಸಿ ತಾತ್ಕಾಲಿಕ ಉಪಶಮನವಾದರೂ ಶಾಶ್ವತ ಪರಿಹಾರ ಸಿಗುವುದಿಲ್ಲ. ಒಟ್ಟಾರೆ ಭೂಮಿಯ ಮೇಲೆ ಬದುಕುತ್ತಿರುವ ಎಲ್ಲಾ ಜೀವಸಂಕುಲಗಳಿಗೆ ಭೂಮಿಯ ಮೇಲೆ ಬೆಳೆಯುವ ಆಹಾರಗಳೇ ಆಧಾರ ಅವುಗಳೇ ರೋಗ ನಿರೋಧಕ ಶಕ್ತಿ ಇರುವ ಬೆಳೆಗಳು ಹಾಗೂ ಗಾಳಿ,ನೀರು,ಆಹಾರ ನೀಡುವ ಭೂಮಿ ಇಲ್ಲದೇ ನಾವಿಲ್ಲ.

ಅದೇ ರೀತಿ ಒಂದು ವೇಳೆ ಅನಾರೋಗ್ಯಕ್ಕೆ ತುತ್ತಾದರೆ ಅವುಗಳೇ ಅಂದರೆ ರೋಗನಿರೋಧಕ ಶಕ್ತಿ ಇರುವ ಬೆಳೆಗಳೇ ಆಧಾರ ಎಂಬುದಾಗಿ ನಾವುಗಳು ಸಾಬೀತು ಮಾಡಬಹುದು ಆದರೆ ಅದನ್ನು ವೈಜ್ಞಾನಿಕವಾಗಿ ಸಂಶೋಧನೆ ಮಾಡಿ ಪತ್ತೆ ಮಾಡುವುದರಲ್ಲಿ ವಿಫಲ ಮತ್ತು ವೈಫಲ್ಯವನ್ನು ಕಂಡಿವೆ.



**ಸಾಮಾಜಿಕ ಕಳಕಳಿ**
**ಹೆಚ್.ಎಸ್.ಪ್ರತಿಮಾ ಹಾಸನ್**
**ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ**

## ದಿನಕ್ಕೊಂದು ಮುಕ್ತಕ -63

• **ಉದಯವಾಹಿನಿ, ವಿಶೇಷ**

**ಸಮ್ಮತಿಯ ನೀಡುತಲೆ ಮದುವೆಯನು ಆಗುವರು**
**ತಮ್ಮೆದುರು ಬರುವವರು ಶುಭ ನುಡಿಯಲು**
**ಹುಮ್ಮಸಿನ ಜೀವನವ ಮಾಡುತಲಿ ನಡೆದಿರಲು**
**ನಮ್ಮನ್ನು ಹರಸುತಿರಿ ಲಕ್ಷ್ಮಿದೇವಿ....**



**ಭಾವಾರ್ಥ:** ಹೊಸದಾಗಿ ಮದುವೆಯಾದ ಜೋಡಿಗಳು ಸಮ್ಮತಿಯನ್ನು ಪಡೆದು ಗುರು ಹಿರಿಯರ ಆಶೀರ್ವಾದ ಪಡೆದು ಮದುವೆಯಾಗುತ್ತಾರೆ. ವಿವಾಹವಾದ ಹೊಸತರಲ್ಲಿ ಪ್ರತಿಯೊಬ್ಬರೂ ಅವರ ಜೀವನಕ್ಕೆ ಶುಭ ಕೋರುತ್ತಾರೆ. ಹೊಸತನದ ಜೀವನಕ್ಕೆ ಕಾಲಿಟ್ಟ ನಂತರದಲ್ಲಿ ಹಲವಾರು ಕನಸುಗಳನ್ನು ಕಂಡು ಮುಂದುವರಿಯುತ್ತಿರುತ್ತಾರೆ. ಅವರಲ್ಲಿ ಹೊಸತನದ ಹುಮ್ಮಸ್ಸಿರುತ್ತದೆ. ಬಹಳಷ್ಟು ಸಾಧನೆ ಮಾಡಬೇಕೆಂಬ ಯೋಜನೆಗಳು ಇರುತ್ತವೆ. ಅದಕ್ಕಾಗಿ ಎಲ್ಲರೊಂದಿಗೆ ಆಶೀರ್ವಾದವನ್ನು ಪಡೆಯುತ್ತಾ ಜೀವನದಲ್ಲಿ ಮುಂದುವರೆಯುತ್ತಾರೆ.

# 'ಕಲ್ಲಂಗಡಿ ಅಧಿಕ ಲಾಭ ಕೊಡುವ ಬೆಳೆ'

• **ಉದಯವಾಹಿನಿ, ಬೆಂಗಳೂರು**

ಕಲ್ಲಂಗಡಿ ಬೆಳೆಯ ಸುಧಾರಿತ ಬೇಸಾಯ ಕ್ರಮಗಳ ಕುರಿತು ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದಿಂದ ಜಿಲ್ಲೆಯ ರೈತರಿಗೆ ಅಗತ್ಯ ಸಲಹೆಗಳನ್ನು ನೀಡಲಾಗಿದೆ. ಜಿಲ್ಲೆಗೆ ಕಲ್ಲಂಗಡಿ ಒಂದು ಮುಖ್ಯವಾದ ಕುಂಬಳ ಜಾತಿ ಅತ್ಯಂತ ಲಾಭದಾಯಕ ಅಲ್ಪಾವಧಿ ಬೆಳೆಯಾಗಿದೆ. ಇತ್ತೀಚೆಗೆ ಕಲ್ಲಂಗಡಿಯನ್ನು ವರ್ಷಪೂರ್ತಿ ಬೆಳೆಯಲಾಗುತ್ತಿದ್ದು, ಹಲವಾರು ಕಂಪನಿಗಳು ಬೀಜೋತ್ಪಾದನೆಯಲ್ಲಿ ತೊಡಗಿಸಿಕೊಂಡಿವೆ. ಕಲ್ಲಂಗಡಿ ಒಂದು ಚಳಿಗಾಲದ ಬೆಳೆಯಾಗಿದ್ದು, ಅಕ್ಟೋಬರ್‌ನಿಂದ ಜನವರಿವರೆಗೂ ಉತ್ತಮ ಇಳುವರಿ ಪಡೆಯಬಹುದು.

ಶ್ರೀ ಗವಿಸಿದ್ದೇಶ್ವರ ಜಾತ್ರೆಗೆ ಹಣ್ಣುಗಳು ಬರುವಂತೆ ಯೋಜನೆ ಹಾಕಿಕೊಂಡಲ್ಲಿ ರೈತರಿಗೆ ಹೆಚ್ಚಿನ ಲಾಭ ದೊರೆಯುತ್ತದೆ. ಕಲ್ಲಂಗಡಿಯನ್ನು ಸಾಮಾನ್ಯವಾಗಿ ಮಸಾರಿ ಮತ್ತು ಮರಳು ಮಿಶ್ರಿತ ಕಪ್ಪು ಮಣ್ಣು ಮತ್ತು ನೀರು ಬಸಿದು ಹೋಗುವ ಮಣ್ಣು ಮತ್ತು ಕೆರೆ ಹಾಗೂ ನದಿ ತೀರ ಪ್ರದೇಶಗಳಲ್ಲಿ ಉತ್ತಮವಾಗಿ ಬೆಳೆಯಬಹುದು. ಮಣ್ಣಿನ ರಸ ಸಾರ 6ರಿಂದ 7, ಉಷ್ಣಾಂಶ 15 ಡಿ.ಸೆ. ಯಿಂದ 40 ಡಿ.ಸೆ., ಆದ್ರತೆ ಶೇ. 60 ರಿಂದ 70 ಮತ್ತು ಮಳೆಯ ಪ್ರಮಾಣ 200 ಮಿ.ಮಿ. ಯಿಂದ 650 ಮಿ.ಮಿ., ಹೆಚ್ಚು ಉಷ್ಣ ಹಾಗೂ ಬಿಸಿಲು ಇರುವ ವಾತಾವರಣ ಸೂಕ್ತವಾಗಿದೆ. ಕಲ್ಲಂಗಡಿಯಲ್ಲಿ ಮುಖ್ಯವಾಗಿ ನಾಮಧಾರಿತ ತಳಿಗಳು, ಕಪ್ಪು ಬಣ್ಣದ ಕೆಂಪು ಮತ್ತು ಕಡು ಕೆಂಪು ತಿರುಳು ಹೊಂದಿರುವ ತಳಿಗಳು.

ಅಲ್ಲದೇ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಿಂದ ಅರ್ಕಾ ಮಾಣಿಕ್ ಮತ್ತು ಅರ್ಕಾ ಮುತ್ತು ಎನ್ನುವ ತಳಿಗಳು ಇವೆ. ಇದಲ್ಲದೇ ಅನೇಕ ಖಾಸಗಿ ಕಂಪನಿಗಳ ಸಂಕರಣ ತಳಿಗಳು ಮಾರುಕಟ್ಟೆಯಲ್ಲಿ ಲಭ್ಯ ಇವೆ. ಕಲ್ಲಂಗಡಿ ಬೆಳೆಯನ್ನು 2.5 ಮೀ ರಿಂದ 3 ಮೀ, 1 ಮೀ ಅಂತರದಲ್ಲಿ ಏರು ಮಡಿ ಮಾಡಿ ಪ್ಲಾಸ್ಟಿಕ್ ಹೊದಿಕೆ ಹಾಕಿ ಬೆಳೆಯುವುದು ಆಧುನಿಕ ಪದ್ಧತಿಯಾಗಿದೆ. ಇದರಿಂದ ಕೀಟ ಮತ್ತು ರೋಗಗಳ ಪರಿಣಾಮಕಾರಿ ನಿಯಂತ್ರಣ ಮಾಡಬಹುದು.

ಎಕರೆಗೆ ಬೇಕಾಗುವ ಬೀಜಗಳ ಪ್ರಮಾಣ ಸಂಕರಣ ತಳಿಗಳಾದಲ್ಲಿ 300 ರಿಂದ 400 ಗ್ರಾಂ ಮತ್ತು ಇತರೆ ತಳಿಗಳಾದಲ್ಲಿ 750 ಗ್ರಾಂ. ಆದಷ್ಟು ಕೊಟ್ಟಿಗೆ ಮತ್ತು ಸಾವಯವ ಗೊಬ್ಬರ ಅಲ್ಲದೇ ಎರೆಹುಳು ಗೊಬ್ಬರಗಳನ್ನು ಜೈವಿಕ ಗೊಬ್ಬರಗಳಾದ ಟ್ರೈಕೊಡರ್ಮ, ಸೂಡೊಮೋನಾಸ್ ಮತ್ತು ವ್ಯಾಮ್‌ನೊಂದಿಗೆ ಸಮೃದ್ಧಿಗೊಳಿಸಿ ಬಳಸುವುದರಿಂದ ರೋಗ ಮತ್ತು ಕೀಟದ ಬಾಧೆ ತಡೆಗಟ್ಟಬಹುದು ಎಂದಿದ್ದಾರೆ.

**ರೈತರಿಗೆ ಅಗತ್ಯ ಸಲಹೆ**



**ಪ್ರತಿ ಎಕರೆಗೆ 1 ಕ್ವಿಂಟಾಲ್ ಬೇವಿನ ಹಿಂಡಿ ಬೆರೆಸುವುದು ಸೂಕ್ತ. ಬಿತ್ತನೆ ಮಾಡಿದ 20 ರಿಂದ 30 ದಿನಗಳೊಳಗೆ ಕುಡಿ. ಚಿವುಟುವದರಿಂದ ಹೆಚ್ಚಿನ ಇಲುಕುಗಳು ಬಿಟ್ಟು ಇಳುವರಿ ಹೆಚ್ಚಾಗುವುದು ಅಲ್ಲದೇ ಕೀಟಗಳ ಬಾಧೆ ತಡೆಗಟ್ಟಬಹುದು. ಬಳ್ಳಿಗೆ 7ರಿಂದ 8 ಗಿಣ್ಣುಗಳ ಬಿಡುವ ಹೂವುಗಳು ಫಲಪ್ರದವಾಗಿರುತ್ತವೆ. 11 ಗಿಣ್ಣಿನ ನಂತರ ಬರುವ ಹೆಣ್ಣು ಹೂವುಗಳನ್ನು ತೆಗೆಯುವುದು ಸೂಕ್ತವಾಗಿವೆ. ಹೆಚ್ಚಿನ ಮಾಹಿತಿಗೆ ಕೊಪ್ಪಳ ಕೃಷಿ ವಿಸ್ತರಣಾ ಕೇಂದ್ರದ ವಿಸ್ತರಣಾ ಮುಂದಾಳು ಡಾ। ಎಂ.ವಿ.ರವಿ ಮೊ.9480247745 ಮತ್ತು ಸಹಾಯಕ ಪ್ರಾಧ್ಯಾಪಕ ವಾಮನಮೂರ್ತಿ ಮೊ.ನಂ. 8217696837 ಅವರನ್ನು ಸಂಪರ್ಕಿಸಬಹುದು.**

# ಮೈಕ್ರೋಪ್ಲಾಸ್ಟಿಕ್ ಬಿಡುಗಡೆ, ಕಾಲಾನಂತರದಲ್ಲಿ ಹಾನಿಕಾರಕ: ಅಧ್ಯಯನ

• **ಉದಯವಾಹಿನಿ, ಬೆಂಗಳೂರು**



ಉದಯವಾಹಿನಿ ಚಿತ್ರ

**ಚಹಾ ಚೀಲಗಳು ಶತಕೋಟಿ ಹಾನಿಕಾರಕ**

ನಮ್ಮಲ್ಲಿ ಅನೇಕರಿಗೆ ಚಹಾ ಚೀಲವನ್ನು ಹಬೆಯಲ್ಲಿ ಕಪ್ ನೀರಿನಲ್ಲಿ ಮುಳುಗಿಸುವುದು ಕೇವಲ ದಿನಚರಿಗಿಂತ ಹೆಚ್ಚಿನದಾಗಿದೆ, ಇದು ಇಂದ್ರಿಯಗಳನ್ನು ಜಾಗೃತಗೊಳಿಸುವ ಮತ್ತು ಪ್ರಕಾಶಮಾನವಾದ ಟಿಪ್ಪಣಿಯೊಂದಿಗೆ ದಿನವನ್ನು ಪ್ರಾರಂಭಿಸಲು ಸಹಾಯ ಮಾಡುವ ಸಾಂತ್ವನದಾಯಕ ಆಚರಣೆಯಾಗಿದೆ.

ಆದಾಗ್ಯೂ, ಆಘಾತಕಾರಿ ಬಹಿರಂಗಪಡಿಸುವಿಕೆಯಲ್ಲಿ ಇತ್ತೀಚಿನ ಅಧ್ಯಯನವು ಪಾಲಿಮರ್ ಆಧಾರಿತ ಚಹಾ ಚೀಲಗಳು ನಿಮ್ಮ ಕಪ್ ಶತಕೋಟಿ ನ್ಯಾನೊಪ್ಲಾಸ್ಮಿಕ್ಕಳು, ಮೈಕ್ರೋಪ್ಲಾಸ್ಟಿಕಗಳನ್ನು ಬಿಡುಗಡೆ ಮಾಡಬಹುದು ಎಂದು ಕಂಡುಹಿಡಿದಿದೆ. ಇದು ರಕ್ತ ಪ್ರವಾಹವನ್ನು ಪ್ರವೇಶಿಸಬಹುದು. ದೇಹದಾದ್ಯಂತ ಹರಡಬಹುದು ಮತ್ತು ನಿಮ್ಮ ಕರುಳಿನ ಕೋಶಗಳಿಂದ ಹೀರಲ್ಪಡಬಹುದು ಎಂಬುದಾಗಿ ಅಧ್ಯಯನ ತಿಳಿಸಿದೆ. ಸಣ್ಣ ಮೈಕ್ರೋಪ್ಲಾಸ್ಟಿಕ್ಕಳು ಮತ್ತು ನ್ಯಾನೊಪ್ಲಾಸ್ಟಿಕ್ಕಳು ನಾವು ಉಸಿರಾಡುವ ಗಾಳಿಯಲ್ಲಿ ಅಡಗಿರಬಹುದು ಮತ್ತು ಮೆದುಳು, ಹೃದಯ, ಮೂತ್ರಪಿಂಡ ಅಥವಾ ವೃಷಣಗಳು ಸೇರಿದಂತೆ ಮಾನವ ದೇಹದ ಊಹಿಸಲಾಗದ ಭಾಗಗಳಿಗೆ ದಾರಿ ಕಂಡುಕೊಳ್ಳುತ್ತವೆ ಎಂದು ಈ ಹಿಂದೆ ನಡೆಸಿದ ಅನೇಕ ಅಧ್ಯಯನಗಳು ಸಾಬೀತುಪಡಿಸಿವೆ. ಯುಎಬಿ ಡಿಪಾರ್ಟ್‌ಮೆಂಟ್ ಆಫ್ ಜೆನೆಟಿಕ್ಸ್ ಅಂಡ್ ಮೈಕ್ರೋಬಯಾಲಜಿಯ ಮುಟಜೆನೆಸಿಸ್ ಗ್ರೂಪ್ನ ಇತ್ತೀಚಿನ ಅಧ್ಯಯನವು ಪಾಲಿಮರ್ ಆಧಾರಿತ ಚಹಾ ಚೀಲಗಳು ಕುದಿಯುವ ಪ್ರಕ್ರಿಯೆಯಲ್ಲಿ ಬಿಸಿ ನೀರಿನೊಂದಿಗೆ ಸಂವಹನ ನಡೆಸಿದಾಗ ಮೈಕ್ರೋಪ್ಲಾಸ್ಟಿಕ್ಸ್ ಮತ್ತು ನ್ಯಾನೊಪ್ಲಾಸ್ಟಿಕಗಳನ್ನು (ಎಂಎನ್ಪಿಎಲ್) ಹೇಗೆ ಬಿಡುಗಡೆ ಮಾಡುತ್ತವೆ ಎಂಬುದನ್ನು ತೋರಿಸುತ್ತದೆ. ಇದು ಅನೇಕ ಚಹಾ ಪ್ರಿಯರನ್ನು ತೊಂದರೆಗೊಳಿಸಬಹುದು. ಬಾರ್ಸಿಲೋನಾದ ಸ್ವಾಯತ್ತ ವಿಶ್ವವಿದ್ಯಾಲಯವು ನಡೆಸಿದ ಮತ್ತು ಕೆಮೋಸ್ಪಿಯರ್ ಜರ್ನಲ್‌ನಲ್ಲಿ ಪ್ರಕಟವಾದ ಹೊಸ ಅಧ್ಯಯನವು ಮೊದಲ ಬಾರಿಗೆ ಈ ಸಣ್ಣ ಕಣಗಳನ್ನು ಮಾನವ ಕರುಳಿನ ಕೋಶಗಳು ಹೀರಿಕೊಳ್ಳಬಹುದು ಮತ್ತು ದೇಹದ ಅನೇಕ ಭಾಗಗಳಿಗೆ ಹರಡಬಹುದು ಎಂದು ಕಂಡುಹಿಡಿದಿದೆ. ಈ ಅಧ್ಯಯನದಲ್ಲಿ ಪಾಲಿಮರ್ಗಳಾದ ನೈಲಾನ್ 6, ಪಾಲಿಪ್ರೊಪಿಲೀನ್ ಮತ್ತು ಸೆಲ್ಯುಲೋಸ್ನಿಂದ ತಯಾರಿಸಿದ ಚಹಾ ಚೀಲಗಳನ್ನು ಬಳಸಲಾಗಿದೆ. ಚಹಾವನ್ನು ತಯಾರಿಸಲು ಪಾಲಿಪ್ರೊಪಿಲೀನ್ ಅನ್ನು ಬಳಸಿದಾಗ, ಅದು ಪ್ರತಿ ಮಿಲಿಲೀಟರ್ಗೆ ಸರಿಸುಮಾರು 1.2 ಬಿಲಿಯನ್ ಕಣಗಳನ್ನು ಬಿಡುಗಡೆ ಮಾಡಿತು. ಸರಾಸರಿ ಗಾತ್ರ 136.7 ನ್ಯಾನೊಮೀಟರ್. ಸೆಲ್ಯುಲೋಸ್ ವಿಷಯದಲ್ಲಿ ಪ್ರತಿ ಮಿಲಿಲೀಟರ್ಗೆ ಸುಮಾರು 135 ಮಿಲಿಯನ್ ಕಣಗಳು ಬಿಡುಗಡೆಯಾಗುತ್ತವೆ. ಸರಾಸರಿ 244 . -6 3 18.18 ಮಿಲಿಯನ್ ಕಣಗಳನ್ನು ಬಿಡುಗಡೆ ಮಾಡಿತು. ಸರಾಸರಿ ಗಾತ್ರ 138.4 ನ್ಯಾನೊಮೀಟರ್. ನಾವು ಈ ಮಾಲಿನ್ಯ ಕಾರಕಗಳನ್ನು ಅತ್ಯಾಧುನಿಕ ತಂತ್ರಗಳೊಂದಿಗೆ ನವೀನವಾಗಿ ನಿರೂಪಿಸುವಲ್ಲಿ ಯಶಸ್ವಿಯಾಗಿದ್ದೇವೆ. ಇದು ಮಾನವ ಆರೋಗ್ಯದ ಮೇಲೆ ಅವುಗಳ ಸಂಭಾವ್ಯ ಪರಿಣಾಮಗಳ ಬಗ್ಗೆ ಸಂಶೋಧನೆಯನ್ನು ಮುನ್ನಡೆಸಲು ಬಹಳ ಮುಖ್ಯವಾದ ಸಾಧನವಾಗಿದೆ ಎಂದು ಯುಎಬಿ ಸಂಶೋಧಕ ಆಲ್ಬಾ ಗಾರ್ಸಿಯಾ ವಿವರಿಸಿದರು. ಲೋಳೆಯನ್ನು ಉತ್ಪಾದಿಸುವ ಕರುಳಿನ ಕೋಶಗಳೊಂದಿಗೆ ಅವು ಹೇಗೆ ಸಂವಹನ ನಡೆಸಬಹುದು ಎಂಬುದನ್ನು ಪರೀಕ್ಷಿಸಲು ವಿಜ್ಞಾನಿಗಳು ಸೂಕ್ಷ್ಮ ಕಣಗಳನ್ನು ಕಲೆಹಾಕಿದರು ಮತ್ತು ಅವುಗಳನ್ನು ಮಾನವ ಕರುಳಿನಿಂದ ವಿವಿಧ ಕೋಶಗಳಿಗೆ ಒಡ್ಡಿದರು. ಸೂಕ್ಷ್ಮ,ನ್ಯಾನೊಪ್ಲಾಸ್ಟಿಕಗಳನ್ನು ರಕ್ತಪ್ರವಾಹ, ದೇಹದ ಇತರ ಭಾಗಗಳಿಗೆ ಸಾಗಿಸುವ ಮೊದಲು ದೇಹಕ್ಕೆ ಹೀರಿಕೊಳ್ಳುವಲ್ಲಿ ಜೀರ್ಣಕಾರಿ ಲೋಳೆ ಪ್ರಮುಖ ಪಾತ್ರ ವಹಿಸಬಹುದು ಎಂದು ಇದು ತೋರಿಸಿದೆ. ಆಹಾರ ಅಥವಾ ಪಾನೀಯ ಪ್ಯಾಕೇಜಿಂಗ್‌ಗೆ ನಿರಂತರವಾಗಿ ಒಡ್ಡಿಕೊಳ್ಳುವ ಜನರು ಕಾಲಾನಂತರದಲ್ಲಿ ಸಂಚಿತ ಅಪಾಯಗಳನ್ನು ಎದುರಿಸಬಹುದು.

**24 ಗಂಟೆಗಳ ನಂತರ, ಕರುಳಿನಲ್ಲಿ ಲೋಳೆಯನ್ನು ಉತ್ಪಾದಿಸುವ ನಿರ್ದಿಷ್ಟ ರೀತಿಯ ಜೀರ್ಣಾಂಗ ಕೋಶವು ಗಣನೀಯ ಪ್ರಮಾಣದ ಸೂಕ್ಷ್ಮ ಮತ್ತು ನ್ಯಾನೊಪ್ಲಾಸ್ಟಿಕಗಳನ್ನು ಹೀರಿಕೊಂಡಿತು. ಪ್ಲಾಸ್ಟಿಕ್‌ಗಳು ಈ ಕೆಲವು ಜೀವಕೋಶಗಳ ನ್ಯೂಕ್ಲಿಯಸ್ ಅನ್ನು ಸಹ ಪ್ರವೇಶಿಸಿದ್ದವು, ಅಲ್ಲಿ ಆನುವಂಶಿಕ ವಸ್ತುವಿದೆ. ಇದು ವಿಶೇಷವಾಗಿ ಆತಂಕಕಾರಿಯಾಗಿದೆ ಏಕೆಂದರೆ ಮೈಕ್ರೋಪ್ಲಾಸ್ಟಿಕ್ಸ್ ಆನುವಂಶಿಕ ಪ್ರಕ್ರಿಯೆಗಳ ಮೇಲೆ ಗಮನಾರ್ಹವಾಗಿ ಪರಿಣಾಮ ಬೀರಬಹುದು. ಕಾಲಾನಂತರದಲ್ಲಿ ಹಾನಿಕಾರಕ ಫಲಿತಾಂಶಗಳನ್ನು ಉಂಟುಮಾಡಬಹುದು.**



# ರಾಮಾಯಣ

**ಶುನ 1 ಶೇಫನು ದೀರ್ಘಾಯುಷ್ಯವನ್ನು ಪಡೆದುದು**

• ಹಿಂದಿನ ಸಂಚಿಕೆಯಿಂದ **60 ನೆಯ ಅಧ್ಯಾಯ**

ಆ ಸಮಯದಲ್ಲಿ ಶುನಕ್ಕೇಫನು ವಿಶ್ವಾಮಿತ್ರಮುನಿಯು ಉಪದೇಶಮಾಡಿದ ಮಂತ್ರಗಳಿಂದ ಯಜ್ಞಾಧಿದೇವತೆಗಳನ್ನು ಸ್ತೋತ್ರಮಾಡಲು ಅವರು ಆತನು ಮಾಡಿದ ಸ್ತೋತ್ರದಿಂದ ಸಂತುಷ್ಟರಾದರು. ಆಗ ದೇವೇಂದ್ರನು ಶುನಃಶೇಫನಿಗೆ ದೀರ್ಘಾಯುಷ್ಯ ವನ್ನು ಕೊಟ್ಟು ಅಂಬರೀಷರಾಜನಿಗೆ ಕೃಪೆಯಿಂದ ಸಾಂಗವಾದ ನರಮೇಧಯಾಗಫಲವನ್ನು ಕೊಟ್ಟು ಯಾಗ ಸಮಾಪ್ತಿಯನ್ನು ಮಾಡಿಸಿದನು ಆ ಬಳಿಕ ಧರ್ಮಾತ್ಮನಾದ ವಿಶ್ವಾಮಿತ್ರಮುನೀಶ್ವರನು ಆರ್ಕಪುಷ್ಕರಣಿ ಚಂದ್ರಪುಷ್ಕರಣಿ ವದ್ಧಿಪುಷ್ಕರಣಿ ಎಂಬ ಆ ಮೂರು ಪುಷ್ಕರಣಿಗಳ ತೀರಗಳಲ್ಲಿ ಸಾವಿರ ವರುಷಗಳು ತಪಸ್ಸನ್ನು ಮಾಡಿದನು.

## ಮೇನಕೆಯಿಂದ ವಿಶ್ವಾಮಿತ್ರನ ತಪೋಭಂಗ

ಈ ಪ್ರಕಾರದಲ್ಲಿ ಪುಷ್ಕರಣಿಗಳ ತೀರಗಳಲ್ಲಿ ತಪಸ್ಸನ್ನು ಮಾಡುತ್ತಿದ್ದ ವಿಶ್ವಾಮಿತ್ರ ಮುನೀಶ್ವರನಿಗೆ ಸಾವಿರ ವರುಷಗಳು ಕಳೆಯಲು ಬ್ರಹ್ಮದೇವನೇ ಮೊದಲಾದ ಸಮಸ್ತ ದೇವತೆಗಳೂ ತಪಸ್ಸಿನ ಫಲವನ್ನು ಕೊಡುವುದಕ್ಕಾಗಿ ಪ್ರಸನ್ನರಾದರು ಆಗ ಬ್ರಹ್ಮದೇವನು ಆ ಮುನೀಶ್ವರನನ್ನು ನೋಡಿ ವಿಶ್ವಾಮಿತ್ರ, ನೀನು ಮಾಡಿದ ತಪಸ್ಸುಗಳಿಂದ ನೀನು ಋಷಿಯಾಗು' ಎಂದು ನುಡಿದು ಬ್ರಹ್ಮಲೋಕಕ್ಕೆ ತೆರಳಿದನು. ಆ ಮೇಲೆ ವಿಶ್ವಾಮಿತ್ರನು ತನ್ನ ಮನಸ್ಸಿನಲ್ಲಿ 'ನಾನು ಎಷ್ಟು ತಪಸ್ಸು ಮಾಡಿದರೂ ಬ್ರಹ್ಮದೇವನು ಸಾಮಾನ್ಯ ಋಷಿಯಾಗಲೆಂದು ನುಡಿದನಲ್ಲದೆ ಬ್ರಹ್ಮ ಋಷಿ ಯಾಗಲೆಂದು ವರವನ್ನು ಕೊಡಲಿಲ್ಲ. ಆದಕಾರಣ ಇನ್ನೂ ವಿಶೇಷವಾಗಿ ತಪಸ್ಸು ಮಾಡುವೆನು ಎಂದು ಚಿಂತಿಸಿ ಪುಷ್ಕರಣೀ ತೀರದಲ್ಲಿ ಮತ್ತೆಯೂ ತಪಸ್ಸನ್ನು ಮಾಡುತ್ತಿದ್ದನು. ಆಗ ದೇವೇಂದ್ರನು ಆತನ ತಪಸ್ಸಿಗೆ ವಿಘ್ನವನ್ನು ಮಾಡಬೇಕೆಂದೆಣಿಸಿ ಮೇನಕೆಯನ್ನು ಕಳುಹಿಸಿದನು. ಆ ಅಪ್ಸರಃ ಸ್ತ್ರೀಯು ಆ ಕೊಳದಲ್ಲಿ ಸ್ನಾನವನ್ನು ಮಾಡುವುದಕ್ಕೆ ಯತ್ನ ಮಾಡುತ್ತಿರಲು ತಪಸ್ಸನ್ನು ಮಾಡಿಕೊಂಡಿದ್ದ ವಿಶ್ವಾಮಿತ್ರಮುನೀಶ್ವರನು ಮೇಘ ಮಂಡಲದಲ್ಲಿರುವ ಮಿಂಚಿನಹಾಗೆ ತನುಕಾಂತಿಯುಳ್ಳ ಮೇನಕೆಯನ್ನು ಕಂಡು ಮನ್ಮಥನಿಗೊಳಗಾಗಿ ಅವಳನ್ನು ನೋಡಿ 'ಸುಂದರಿ ಮೇನಕ್ಕೆ, ನೀನು ಬಂದದ್ದು ಸಂತೋಷಕರ. ನಾನು ಮದನಬಾಣಗಳಿಗೆ ಒಳಗಾದೆನು. ನನ್ನನ್ನು ನೀನು ಅನುಗ್ರಹಿಸಬೇಕು' ಎಂದು ಹೇಳಿ ಒಡಂಬಡಿಸಿದನು ಆ ಮೇನಕೆಯು ಹಾಗೆಯೇ ಆಗಲೆಂದು ವಿಶ್ವಾಮಿತ್ರನನ್ನು ಸೇರಲು ಆತನ ತಪಸ್ಸಿಗೆ ವಿಘ್ನವಾಯಿತು. ಆ ಅಪ್ಸರಃ ಸ್ತ್ರೀಯು ವಿಶ್ವಾಮಿತ್ರಮುನೀಶ್ವರನ ಆಶ್ರಮದಲ್ಲಿ ಆತನೊಡನೆ ಕ್ರೀಡಿಸಿಕೊಂಡು ಹತ್ತು ವರುಷ ಗಳನ್ನು ಕಳೆಯಲು ವಿಶ್ವಾಮಿತ್ರಮುನೀಶ್ವರನು ಲಜ್ಜೆಯಿಂದ ಚಿಂತಾಕ್ರಾಂತನಾದನು, ಆತನು ದುಃಖಪಡುತ್ತ ತನ್ನ ಮನಸ್ಸಿನಲ್ಲಿ ನನಗೆ ಈ ವ್ಯಾಮೋಹವು ಹುಟ್ಟಿ ತಪಸ್ಸು ಕ್ಷಯವಾದದ್ದು ದೇವತೆಗಳಿಂದಲೇ ಸರಿ.

**ಮುಂದುವರಿಯುವುದು...**

# ಭಾರತೀಯರು 'ವೀಸಾ' ಇಲ್ಲದೇ ಸುತ್ತಬಹುದಾದ ಈ 12 ದೇಶಗಳಿವು!

• **ಉದಯವಾಹಿನಿ, ಬೆಂಗಳೂರು**



ಹೊಸ ವರ್ಷಕ್ಕೆ ದಿನಗಣನೆ ಶುರುವಾಗಿದ್ದು. ಭಾರತೀಯ ಪ್ರಯಾಣಿಕರಿಗೆ ವೀಸಾ-ಮುಕ್ತ ವಾಸ್ತವ್ಯ ಲಭ್ಯವಿದೆ. ಕೆಲವು ದೇಶಗಳು ಯಾವುದೇ ವೀಸಾ ಇಲ್ಲದೆ ಕೆಲವು ದಿನಗಳವರೆಗೆ ಪ್ರಯಾಣಿಸಬಹುದು. ಕಡಲತೀರಗಳು, ಸುಂದರ ದೃಶ್ಯಾವಳಿಗಳು, ಪರ್ವತಗಳು... ಹೀಗೆ ಹಲವು ಬಗೆಯ ಸೌಂದರ್ಯವನ್ನು ಇಲ್ಲಿ ಆನಂದಿಸಬಹುದು. ಹೊಸ ವರ್ಷವನ್ನು ಆನಂದಿಸಲು ಹೆಚ್ಚಿನ ಭಾರತೀಯರು ವೀಸಾ ಇಲ್ಲದೆ ಯಾವ ದೇಶಗಳಿಗೆ ಭೇಟಿ ನೀಡುತ್ತಾರೆ ಎಂಬುದನ್ನು ನೋಡೋಣ.

**ಥೈಲ್ಯಾಂಡ್:** ಕೇವಲ ಒಂದು ಸಣ್ಣ ವಿಮಾನದ ದೂರದಲ್ಲಿ ಥೈಲ್ಯಾಂಡ್ ತನ್ನ ಬೆರಗುಗೊಳಿಸುವ ಕಡಲ ತೀರಗಳು, ಉತ್ಸಾಹಭರಿತ ರಾತ್ರಿಜೀವನ, ರುಚಿಕರವಾದ ಬೀದಿ ಆಹಾರದೊಂದಿಗೆ ಪ್ರಯಾಣಿಕರ ಕನಸಾಗಿದೆ. ಭಾರತೀಯ ಪಾಸ್‌ಪೋರ್ಟ್ ಹೊಂದಿರುವವರು 60 ದಿನಗಳವರೆಗೆ ವೀಸಾ-ಮುಕ್ತ ಪ್ರವೇಶವನ್ನು ಆನಂದಿಸಬಹುದು.

**ಭೂತಾನ್** : ಶಾಂತಿ ಮತ್ತು ಸಂತೋಷದ ನಾಡು, ಅಲ್ಲಿ ಪ್ರಕೃತಿಯು ಆಧ್ಯಾತ್ಮಿಕತೆಯನ್ನು ಸಂಧಿಸುತ್ತದೆ. ಪ್ರಶಾಂತವಾದ ಮಠಗಳು, ಉಸಿರುಕಟ್ಟುವ ಪರ್ವತ ವೀಕ್ಷಣೆಗಳೊಂದಿಗೆ, ಭಾರತೀಯ ನಾಗರಿಕರು 14 ದಿನಗಳವರೆಗೆ ವೀಸಾ-ಮುಕ್ತವಾಗಿ ಭೇಟಿ ನೀಡಬಹುದು-ಈ ಹೊಸ ವರ್ಷದಲ್ಲಿ ಶಾಂತಿಯನ್ನ ಬಯಸುವವರಿಗೆ ಸೂಕ್ತವಾಗಿದೆ.

**ನೇಪಾಳ:** ನಮ್ಮ ಆಧ್ಯಾತ್ಮಿಕ ನೆರೆಯ ನೇಪಾಳವು ಭಾರತೀಯರಿಗೆ ವೀಸಾ ಮುಕ್ತ ಪ್ರವೇಶವನ್ನ ನೀಡುತ್ತದೆ. ಹಿಮಾಲಯವನ್ನ ಆನಂದಿಸಬಹುದು. ಇದು ಪ್ರವಾಸಿಗರಿಗೆ ಪರಿ ಪೂರ್ಣ ತಾಣವಾಗಿದೆ.

**ಮಾರಿಷಸ್:** ಉಷ್ಣವಲಯದವಿಹಾರಕ್ಕೆ ಸಿದ್ಧರಿದ್ದೀರಾ ಮಾರಿಷಸ್ ಒಂದು ಸುಂದರವಾದ ದ್ವೀಪ ಸ್ವರ್ಗವಾಗಿದೆ. ಇಲ್ಲಿ ಭಾರತೀಯ ಪ್ರವಾಸಿಗರು 90 ದಿನಗಳ ವೀಸಾ ಮುಕ್ತ ವಾಸ್ತವ್ಯವನ್ನ ಆನಂದಿಸುತ್ತಾರೆ. ಹವಳದ ಬಂಡೆಗಳನ್ನ ಇಲ್ಲಿ ಅನ್ವೇಷಿಸಬಹುದು.

**ಮಲೇಷಿಯಾ** : ಆಧುನಿಕ ಸ್ಕೈಲೈನ್‌ಗಳು, ದಟ್ಟವಾದ ಮಳೆಕಾಡುಗಳ ಸಂಯೋಜನೆ, ಮಲೇಷ್ಯಾ 1 ಆಕರ್ಷಕ ತಾಣವಾಗಿದೆ. ಭಾರತೀಯ ಪಾಸ್‌ಪೋರ್ಟ್ ಹೊಂದಿರುವವರು 30 ದಿನಗಳವರೆಗೆ ವೀಸಾ-ಮುಕ್ತ ಪ್ರವೇಶದೊಂದಿಗೆ ಗಲಭೆಯ ನಗರಗಳು, ಪ್ರಾಚೀನ ಕಡಲತೀರಗಳನ್ನ ಅನ್ವೇಷಿಸಬಹುದು. ನಗರ ಪ್ರೇಮಿಗಳು ಮತ್ತು ಪ್ರಕೃತಿ ಉತ್ಸಾಹಿಗಳಿಗೆ ಉತ್ತಮ ಸ್ಥಳ. **ಇರಾನ್** : ಇರಾನ್ ಶ್ರೀಮಂತ ಇತಿಹಾಸವನ್ನ ಹೊಂದಿದೆ. ಭಾರತೀಯರು ವೀಸಾ ಇಲ್ಲದೆ ಗರಿಷ್ಠ 15 ದಿನಗಳ ಕಾಲ ಇಲ್ಲಿ ತಂಗಬಹುದು. ಹೊಸ ವರ್ಷವನ್ನು ಕಳೆಯಲು ಬಯಸುವವರಿಗೆ ಇದು ಉತ್ತಮ ಅವಕಾಶವಾಗಿದೆ. ಅಂಗೋಲಾ ಅಂಗೋಲಾ ರೋಮಾಂಚಕ ಸಂಸ್ಕೃತಿ, ಬೆರಗುಗೊಳಿಸುವ ಭೂದೃಶ್ಯಗಳನ್ನು ನೀಡುತ್ತದೆ.

ಭಾರತೀಯ ನಾಗರಿಕರು 30 ದಿನಗಳವರೆಗೆ ವೀಸಾ-ಮುಕ್ತವಾಗಿ ಭೇಟಿ ನೀಡಬಹುದು. ವಾರ್ಷಿಕವಾಗಿ 90 ದಿನಗಳು. ಡೊಮಿನಿಕಾ ಹಸಿರು ದೃಶ್ಯಾವಳಿಗಳು, ಪ್ರಾಚೀನ ಕಡಲತೀರಗಳು ಇಲ್ಲಿ ಪ್ರವಾಸಿಗರನ್ನು ಕಾಯುತ್ತಿವೆ. ನೀವು ಸಹ ಭೇಟಿ ನೀಡಲು ಬಯಸಿದರೆ ನೀವು ವೀಸಾ ಇಲ್ಲದೆ 180 ದಿನಗಳವರೆಗೆ ಭೇಟಿ ನೀಡಬಹುದು. ವಿಶ್ರಾಂತಿ ಪಡೆಯಲು ಮತ್ತು ಪ್ರಕೃತಿಯೊಂದಿಗೆ ಮರುಸಂಪರ್ಕಿಸಲು ಡೊಮಿನಿಕಾ ಸೂಕ್ತ ಸ್ಥಳವಾಗಿದೆ. **ಸೀಶೆಲ್ಸ್:** ಇದನ್ನು ಸ್ವರ್ಗ ಎಂದು ಕರೆಯಲಾಗುತ್ತದೆ. ಸೀಶೆಲ್ಸ್ ಬೀಚ್ ಪ್ರಿಯರಿಗೆ ಮತ್ತು ಪ್ರಕೃತಿ ಅನ್ವೇಷಕರಿಗೆ ಸೂಕ್ತವಾದ ತಾಣವಾಗಿದೆ. 30 ದಿನಗಳವರೆಗೆ ವೀಸಾ-ಮುಕ್ತ ಆನಂದವನ್ನ ಆನಂದಿಸಿ. ಅದರ ಸ್ಫಟಿಕ- ಸ್ಪಷ್ಟ ನೀರಿನಿಂದ, ಸುಂದರ ವಾದ ದ್ವೀಪಗಳನ್ನ ಅನ್ವೇಷಿಸಬಹುದು. **ಹಾಂಗ್ ಕಾಂಗ್** : ನಗರ ಜೀವನ, ರಮಣೀಯ ಸೌಂದರ್ಯದ ಡೈನಾಮಿಕ್ ಮಿಶ್ರಣವಾದ ಹಾಂಗ್ ಕಾಂಗ್ ಆನ್ ಲೈನ್‌ನಲ್ಲಿ 14 ದಿನಗಳ ವೀಸಾ-ಮುಕ್ತ ವಾಸ್ತವ್ಯವನ್ನು ಪೂರ್ವ-ಆಗಮನ ನೋಂದಣಿಯೊಂದಿಗೆ ನೀಡುತ್ತದೆ.

**ಕರ್ಝಾಕಿಸ್ತಾನ್**

**ವಿಶಾಲ ಸ್ಥಳಗಳು, ಆಧುನಿಕ ನಗರಗಳು, ಶ್ರೀಮಂತ ಕರ್ನಾಟಕ ಸಂಸ್ಕೃತಿ ಕರ್ಝಾಕಿಸ್ತಾನ್ ಉತ್ತಮ ಸ್ಥಳವಾಗಿದೆ. ಭಾರತೀಯ ಪಾಸ್ ಪೋರ್ಟ್ ಹೊಂದಿರುವವರು ಈ ಅನನ್ಯ ಮಧ್ಯ ಏಷ್ಯಾದ ರತ್ನವನ್ನ 14 ದಿನಗಳವರೆಗೆ ವೀಸಾ ಇಲ್ಲದೆ ಭೇಟಿ ಮಾಡಬಹುದು. 4 ತಿಂಗಳವರೆಗೆ ವೀಸಾ-ಮುಕ್ತ ಪ್ರವೇಶವನ್ನ ನೀಡುತ್ತದೆ. ಇಲ್ಲಿನ ಮರಳಿನ ಕಡಲತೀರಗಳಲ್ಲಿ ವಿಶ್ರಾಂತಿ ಪಡೆಯಿರಿ. ಈ ಹಸಿರು ದ್ವೀಪದ ಸ್ವರ್ಗವನ್ನ ಆನಂದಿಸಿ.**

# ಮಂತ್ರಾಲಯ ಶ್ರೀಗಳಿಂದ ಧನುರ್ಮಾಸ ಪೂಜೆ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ವಿಶೇಷ**

ಮಂತ್ರಾಲಯ ಶ್ರೀಗಳಿಂದ ಧನುರ್ಮಾಸ ಪೂಜೆ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಶ್ರೀಮನ್ ಮೂಲರಾಮಚಂದ್ರದೇವರ ಸಂಸ್ಥಾನ ಪೂಜೆ ಜಯನಗರ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ 'ಧನುರ್ಮಾಸ ದ್ವಾದಶಿ ಪ್ರಾತಃಕಾಲದ ವಿಶೇಷ ಪೂಜೆ, ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಅಮೃತ ಹಸ್ತದಿಂದ ನೆರವೇರಿತು ಹಾಗೂ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ಶ್ರೀಗಳು ತಮ್ಮ ಅಮೃತ ಹಸ್ತದಿಂದ ಮಹಾಮಂಗಳಾರತಿಯನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದೀಂದ್ರಾಚಾರ್ ಹಾಗೂ ಭಕ್ತರು ಶಿಷ್ಯರು ಪೂಜೆಯಲ್ಲಿ ಭಕ್ತಿಯಿಂದ ಭಾಗವಹಿಸಿದ್ದರು ಎಂದು ಪುರೋಹಿತರಾದ ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದರು, ಇದೇ ಸಂದರ್ಭದಲ್ಲಿ ನೂರಾರು ಭಕ್ತರು ಶ್ರೀಗಳಿಂದ ತೀರ್ಥ ಫಲ ಮಂತ್ರಾಕ್ಷತೆ ಪ್ರಸಾದ ಸ್ವೀಕರಿಸಿ ಶ್ರೀಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು

# ಬಲಿಷ್ಠರ ಮಳಿಗೆಗಳನ್ನು ಮುಟ್ಟದಿರುವುದಕ್ಕೆ ಕಾರಣವೇನು..?

## ಸಿಪಿಐಎಂಎಲ್ ಮಾಸ್ ಲೈನ್ ಕರ್ನಾಟಕ ರೈತ ಸಂಘ ಬಡವರ ಡಬ್ಬ ಅಂಗಡಿ, ಶೆಡ್ಡುಗಳನ್ನು ಮಾತ್ರ ತೆರವುಗೊಳಿಸಿ

• **ಉದಯವಾಹಿನಿ, ಸಿಂಧನೂರು**

ಕಳೆದ ಎರಡು ದಿನಗಳಿಂದ ನಗರ ಸಭೆ ಮತ್ತು ಕಂದಾಯ ಇಲಾಖೆ ಸೇರಿದಂತೆ ತಾಲ್ಲೂಕು ಆಡಳಿತ ಪುಟ್ಟಪಾತ ಜಾಗದ ಅಗಲಿಕರಣದ ಕಾರ್ಯವನ್ನು ಕೈಗೆತ್ತಿಕೊಂಡಿರುವುದು ಒಳ್ಳೆಯ ತೀರ್ಮಾನ. ಈ ಕಾರ್ಯವನ್ನು ಸಿಪಿಐ (ಎಂಎಲ್) ಮಾಸ್ ಲೈನ್ ಹಾಗೂ ಕರ್ನಾಟಕ ರೈತ ಸಂಘ ಬೆಂಬಲಿಸುತ್ತದೆ.

ಸರ್ಕಾರಿ ಆಸ್ಪತ್ರೆಯ ಮುಂದುಗಡೆಯ ರಸ್ತೆ ಪುಟ್ ಪಾತ ಡಬ್ಬ ಅಂಡಿಗಡಿಗಳು, ಗಂಗಾವತಿ ರಸ್ತೆ, ಬಸ್ ಸ್ಟಾಂಡ್, ತಾಲ್ಲೂಕು ಪಂಚಾಯಿತಿ, ರಾಯಚೂರ ರಸ್ತೆ, ಸುಕಾಲಪೇಟೆ ರಸ್ತೆ ಸೇರಿದಂತೆ ಹಲವಾರು ರಸ್ತೆಯನ್ನು ಅತಿಕ್ರಮಿಸಿದವರ ಅಂಗಡಿಗಳನ್ನು ತರುವು ಮಾಡಿದ್ದು ಶ್ಲಾಘನೀಯ.

ರಸ್ತೆಯ ತೆರುವು ಕಾರ್ಯಚರಣೆಯಿಂದ ಸಾರ್ವಜನಿಕರಿಗೆ ಹಾಗೂ ವಾಹನಗಳ ಸವಾರರ ಸುಗಮ ಓಡಾಟಕ್ಕೆ ಅನುಕೂಲವಾಗಿದೆ. ಈ ತೆರವು ಕಾರ್ಯಚರಣೆ ಮುಖ್ಯ ರಸ್ತೆಗೆ ಮಾತ್ರ ಸೀಮಿತಗೊಳ್ಳಬಾರದು. ಮುಖ್ಯ ರಸ್ತೆಯಿಂದ ಹೊಳ ಹೋಗುವ ಅನೇಕ ಹೊಳ ರಸ್ತೆಗಳು ಅತಿಕ್ರಮಣಗೊಂಡಿವೆ.

**ಆಡಳಿತ ಪ್ರಭಾವಿಗಳಿಗೆ ಮಣಿದಂತೆ ಕಾಣುತ್ತಿದೆ**

ಕೆಲವು ಪ್ರಭಾವಿಗಳು 5 ರಿಂದ 10 ಅಡಿಗಳವರಿಗೆ ರಸ್ತೆ ಅತಿಕ್ರಮಿಸಿ ಮೂರು ಮಹಡಿಯ ಕಟ್ಟಡಗಳನ್ನು ನಿರ್ಮಿಸಿದ್ದಾರೆ. ಈ ರಸ್ತೆಗಳಲ್ಲಿ ಬೈಕ್ ಗಳು ಕೂಡ ಓಡಾಡಲು ಸಾಧ್ಯವಾಗು ವಿಗುತ್ತಿಲ್ಲ.

ನಮ್ಮ ಸಂಘಟನೆ ವತಿಯಿಂದ 5 ವರ್ಷಗಳ ಹಿಂದೆ ಸರ್ಕಾರಕ್ಕೆ, ನಗರಭಿ ವೃದ್ಧಿ ಸಚಿವರಿಗೆ ಈ ಕುರಿತು ಮನವಿ ಕೊಟ್ಟಿದ್ದೇವೆ. ಈ ಪತ್ರಗಳನ್ನು ಆಧರಸಿ ವರದಿ ಕೊಡಲು ಜಿಲ್ಲಾಧಿಕಾರಿಗಳ ಮೂಲಕ ನಗರ ಸಭೆಗೆ ಪತ್ರಗಳು ಬಂದಿವೆ. ಆದರೆ ನಗರಸಭೆ ಈ ಕುರಿತು ಮೌನ ವಹಿಸಿದೆ.ಯಾಕೆ...? ಆದರೆ ಗುಬ್ಬಿ ಮೇಲೆ ಬ್ರಮ್ಮಾಸ್ತ್ರ ಎನ್ನುವಂತೆ, ಬಡ ವ್ಯಾಪಾರಿಗಳ ನಷ್ಟೆ ಗುರಿಯಾಗಿಸಿ, ರಸ್ತೆಯನ್ನು ಅತಿಕ್ರಮಿಸಿದ ದೊಡ್ಡ ರಾಜಕಾರಣಿಗಳ, ಜನ ಪ್ರತಿನಿಧಿಗಳ ತಂಟೆಗೆ ಹೋಗ ದಿರುವುದು ಸರಿಯಲ್ಲ.



**ರಸ್ತೆ ಬಿಟ್ಟು 150 ಅಡಿಗಳಿಂದ ದೂರ ವಿದ್ದ ಡಬ್ಬಿಗಳು, ಶಡ್ಡುಗಳು ಸರ್ಕಾರಿ ಜಾಗದಲಿವೆ ಎಂದು ಅವುಗಳನ್ನು ಕೂಡ ತೆರವು ಮಾಡಲಾಗಿದೆ. ಆದರೆ ಕೆಲವು ಬಲಿಷ್ಠರು ಎಕರೆ ಗಟ್ಲೆ ಸರ್ಕಾರಿ ಭೂಮಿ ಯನ್ನು ಅತಿಕ್ರಮಿಸಿ ಮೂರು ಮಹಡಿಯ ಕಟ್ಟಡಗಳನ್ನು ಕಟ್ಟಿದ್ದಾರೆ. ತಹಶೀಲ್ದಾರರು ಇತರೆ ಅಧಿಕಾರಿಗಳು ಈ ಕಟ್ಟಡಗಳನ್ನು ಮುಟ್ಟದೆ ಇರುವುದಕ್ಕೆ ಕಾರಣವೇನು.**

**ದುಬಾರಿ ಬಾಡಿಗೆ ವಸೂಲಿ**

**ರಾಯಚೂರ ರಸ್ತೆ, ಗಂಗಾವತಿ ಮತ್ತು ಕುಷ್ಟಗಿ ಈ ರಸ್ತೆಯ ಪಕ್ಕದಲ್ಲಿ, ಅನೇಕ ಪ್ರಭಾವಿಗಳು, ರಾಜಕಾರಣಿಗಳ ಬೆಂಬಲಿಗರು, ಸರ್ಕಾರಿ ಅಧಿಕಾರಿಗಳ ಏಜಂಟರು, ಲಂಚಕೋರರು, ಹತ್ತಾರು ಶಡ್ಡಗಳು, ಡಬ್ಬ ಅಂಗಡಿಗಳನ್ನು ಇಟ್ಟು ಬಡ ವ್ಯಾಪಾರಿಗಳಿಂದ ದುಬಾರಿ ಬಾಡಿಗೆ ವಸೂಲಿ ಮಾಡುತ್ತಿದ್ದರೆಂದು ಹೇಳಲಾಗುತ್ತಿದೆ. ಇಂತಹ ಅಂಗಡಿಗಳ ತೆರವು ಮಾಡಿದ್ದು ಒಳ್ಳೆಯದು.**

ರಾಯಚೂರ, ಗಂಗಾವತಿ ಮತ್ತು ಕುಷ್ಟಗಿ ರಸ್ತೆಯಲ್ಲಿ ಕೆಲವು ಮಳಿಗೆಗಳು ನಡು ರಸ್ತೆಯಿಂದ 45,50 ಅಡಿ ಅಂತರದೊಳಗಡೆ ಇವೆ. ಆದರೂ ಇವುಗಳನ್ನು ತೆರವು ಮಾಡದೆ ಆಗೆ ಬಿಟ್ಟಿರುವುದು ತಾಲ್ಲೂಕ ಆಡಳಿತ ಪ್ರಭಾವಿಗಳಿಗೆ ಮಣಿದಂತೆ ಕಾಣುತ್ತಿದೆ. ಈ ಕುರಿತು ತಹಶೀಲ್ದಾರರಿಗೆ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಗಮನಕ್ಕೆ ತರಲಾಗಿದೆ. ಆದರೂ ಕೂಡ ಬಲಿಷ್ಠರ ಮಹಡಿಗಳನ್ನು ತೆರವು ಮಾಡಿರುವುದಿಲ್ಲ.

ಸರ್ಕಾರ ಹಾಗೂ ಜಿಲ್ಲಾಧಿಕಾರಿ ಈ ಕೆಳ ಕಾಣಿಸಿದ ಹಕ್ಕೊತ್ತಯಗಳನ್ನು ಗಂಭಿರವಾಗಿ ಪರಿಗಣಿಸಿ, ಪುಟ್ಟ ವ್ಯಾಪಾರಿಗಳ ಬದುಕಿಗೆ ಅನು ಕೂಲ ಕಲ್ಪಿಸಬೇಕೆಂದು ಒತ್ತಾಯಿಸುತ್ತೇವೆ. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಸಿಪಿಐಎಂಎಲ್ ಮಾಸ್ ಲೈನ್, ಬಿ.ಎನ್. ಯರದಿಹಾಳ ಜಿಲ್ಲಾ ಕಾರ್ಯದರ್ಶಿ ಸಿಪಿಐಎಂಎಲ್ ಮಾಸ್ ಲೈನ್, ಚಿಟ್ಟಿಬಾಬು ಜಿಲ್ಲಾ ಕಾರ್ಯದರ್ಶಿ ಕರ್ನಾಟಕ ರೈತ ಸಂಘ ರಮೇಶ ಪಾಟೀಲ್ ಇದ್ದರು.

# ಮೆಗ್ಗಾನ್ ಆಸ್ಪತ್ರೆ: 15 ದಿನಗಳಿಂದ ಶೌಚಕ್ಕೂ ನೀರಿಲ್ಲ

• **ಉದಯವಾಹಿನಿ, ಶಿವಮೊಗ್ಗ**

ಮೆಹ್ರಾನ್ ಬೋಧನಾ ಆಸ್ಪತ್ರೆ, ಒಳಗೊಂಡ ಇಲ್ಲಿನ ಶಿವಮೊಗ್ಗ ಆರೋಗ್ಯ ವಿಜ್ಞಾನಗಳ ಸಂಸ್ಥೆಯ (ಸಿಮ್ಸ್) ಕ್ಯಾಂಪಸ್‌ನಲ್ಲಿ ತೀವ್ರ ನೀರಿನ ತೊಂದರೆ ಎದುರಾಗಿದೆ. 15 ದಿನಗಳಿಂದ ಸಮಸ್ಯೆ ಬಿಗಡಾಯಿಸಿದ್ದು, ಶಸ್ತ್ರ ಚಿಕಿತ್ಸೆ ಮುಂದೂಡುವ, ಲ್ಯಾಬ್‌ನಲ್ಲಿ ತಪಾಸಣೆಗೆ ರೋಗಿಗಳಿಗೆ ಹೊರಗೆ ಬರೆದುಕೊಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಿಮ್ಸ್ ಕ್ಯಾಂಪಸ್‌ನಲ್ಲಿನ ಮೆಗ್ಗಾನ್ ಬೋಧನಾ ಆಸ್ಪತ್ರೆಯಲ್ಲಿ ಮಾತ್ರ ಒಂದಷ್ಟು ನೀರಿನ ಪೂರೈಕೆ ಇದೆ. ಅಲ್ಲಿನ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ನರ್ಸಿಂಗ್ ಕಾಲೇಜು, ವಿದ್ಯಾರ್ಥಿಗಳ ವಸತಿ ನಿಲಯ, ವೈದ್ಯರ ವಸತಿ ಗೃಹ, ಕೇಂದ್ರೀಯ ಪ್ರಯೋಗಾಲಯಕ್ಕೆ ನೀರಿನ ಪೂರೈಕೆ ಆಗುತ್ತಿಲ್ಲ.

**ಶೌಚಕ್ಕೂ ನೀರಿಲ್ಲ:** ಮೆಗ್ಗಾನ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಈಗ ಶೌಚಕ್ಕೂ ನೀರಿಲ್ಲ. ಅಲ್ಲಿನ ಕೆಲವು ವಿಭಾಗಗಳಲ್ಲಿ ಶಸ್ತ್ರಚಿಕಿತ್ಸೆ ಮುಂದೂಡಲಾಗಿದೆ.

ಹೃದಯ ಹಾಗೂ ನರರೋಗ ಹೊರತುಪಡಿಸಿ ಬಹುತೇಕ ರೋಗ ತಪಾಸಣಾ ಕೊಠಡಿಗಳು ಬಂದ್ ಆಗಿರುವುದು ಪ್ರತಿನಿಧಿ ಆಸ್ಪತ್ರೆಗೆ ಭೇಟಿ ನೀಡಿದಾಗ ಕಂಡುಬಂತು. ಆಸ್ಪತ್ರೆಯ ಒಳಗೆ ಅಳವಡಿಸಿರುವ ಕುಡಿಯುವ ನೀರು ಶುದ್ಧೀಕರಣ ಯಂತ್ರ ಚಾಲನೆಯಲ್ಲಿದ್ದರೂ ನಲ್ಲಿ ತಿರುಗಿಸಿದರೆ ನೀರು ಮಾತ್ರ ಬರಲಿಲ್ಲ.



ಉದಯವಾಹಿನಿ ಚಿತ್ರ

**ಅದೇ ಕಟ್ಟಡದಲ್ಲಿರುವ ನರ್ಸಿಂಗ್ ಕಾಲೇಜಿಗೂ ನೀರು ಪೂರೈಕೆ ಆಗುತ್ತಿಲ್ಲ. ಎರಡು ವಾರಗಳಿಂದ ಶೌಚಕ್ಕೆ ಮೆಹ್ರಾನ್ ಬೋಧನಾ ಆಸ್ಪತ್ರೆಯ ವಾರ್ಡ್‌ಗಳಿಗೆ ತೆರಳುತ್ತಿದ್ದೇವೆ. ಕುಡಿಯಲು ಕ್ಯಾನ್‌ಗಳಲ್ಲಿ ನೀರು ತಂದುಕೊಡುತ್ತಿದ್ದಾರೆ' ಎಂದು ನರ್ಸಿಂಗ್ ವಿದ್ಯಾರ್ಥಿಗಳು ಹೇಳಿದರು.**

# ಹರಳೆಣ್ಣೆ ಕೊಟ್ಟೂರು ಬಸವಪ್ಪಸ್ಮರಣಾರ್ಥ ಸರ್ಕಾರಿ ಶಾಲೆಗಳಿಗೆ ಕೊಡುಗೆ

• **ಉದಯವಾಹಿನಿ, ದಾವಣಗೆರೆ**

ದಿ.ಹರಳಣ್ಣೆ ಕೊಟ್ಟೂರು ಬಸವಪ್ಪ ಅವರು ಈ ಹಿಂದೆ ಮಾಡಿದ್ದ ಸಮಾಜಮುಖಿ ಕೆಲಸಗಳನ್ನು ಅವರ ಕುಟುಂಬದವರೂ ಮುಂದುವರಿಸಿಕೊಂಡು ಹೋಗುತ್ತಿದ್ದು, ಜಿಲ್ಲೆಯ ಸರ್ಕಾರಿ ಶಾಲೆಗಳ ಕಾಯಕಲ್ಪಕ್ಕೆ ಕೈ ಜೋಡಿಸಿದ್ದಾರೆ.

ನಗರದ ಗಡಿಯಾರ ಕಂಬ ಸಮೀಪದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಶಾಂತಿ ಚಿತ್ರ ಮಂದಿರ ಸಮೀಪದ ಸರ್ಕಾರಿ ಬಾಲಕಿಯರ ಮಾದರಿ ಶಾಲೆ, ಕೆ.ಆರ್.ರಸ್ತೆ ಸಮೀಪದ ವಡ್ಡರಕೇರಿ ಶಾಲೆ, ದಾವಣಗೆರೆ ತಾಲ್ಲೂಕಿನ ಅಣಜಿ, ಬೋರ ಗೊಂಡನಹಳ್ಳಿ, ಗಂಗನಕಟ್ಟೆ, ಮಳಲಕೆರೆ, ಹೊ ನ್ನಾಳಿ ತಾಲ್ಲೂಕಿನ ಬನ್ನಿಕೋಡು ಗ್ರಾಮದ ಶಾಲೆ ಗಳಿಗೆ ಅಂದಾಜು 8.50 ಲಕ್ಷ ವೆಚ್ಚದಲ್ಲಿ ಒಟ್ಟು 93 ಡೆಸ್ಕ್‌ಗಳು, ಎರಡು ನೀರು ಶುದ್ದೀಕರಣ ಘಟಕ, ಸ್ಮಾರ್ಟ್ ಕ್ಲಾಸ್‌ಗೆ ಇಂಟರ‍್ಯಾಕ್ಟಿವ್ ಪ್ಯಾನಲ್, ವಿಜ್ಞಾನ ಪ್ರಯೋಗಾಲಯಕ್ಕೆ ಅಗತ್ಯ ಸಾಮಗ್ರಿಗಳನ್ನು ಕೊಡುಗೆಯಾಗಿ ನೀಡಿ ಕಾಳಜಿ ಮೆರೆದಿದ್ದಾರೆ.

'ನಮ್ಮ ತಂದೆ ಕೊಟ್ಟೂರು ಬಸವಪ್ಪನವರು ಬದುಕಿದ್ದಾಗ ಮಾಡಿದ ಸೇವೆಗಳು ಹಲವು. ಮಕ್ಕಳಾಗಿ ನಾವೂ ಏನಾದರೂ ಮಾಡಬೇಕೆಂದು ವಿದೇಶದಲ್ಲಿರುವ ನಮ್ಮ ಅಣ್ಣ ಡಾ.ಎಚ್.ಕೆ. ಮಂಜುನಾಥ ಹಾಗೂ ಅತ್ತಿಗೆ ಮೀರಾ ಅವರ ಸಲಹೆಯಂತೆ 5 ವರ್ಷಗಳ ಹಿಂದೆ ಟ್ರಸ್ಟ್ ಆರಂಭಿಸಿದೆವು.

ಆ ಮೂಲಕ ನೇತ್ರ ಉಚಿತ ತಪಾಸಣಾ ಶಿಬಿರ ಆಯೋಜನೆ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುತ್ತಾ ಬಂದವು. ಈ ಕೆಲಸವನ್ನು ಪ್ರಸ್ತುತ ಹಲವು ಸಂಘ–ಸಂಸ್ಥೆಗಳು ಮಾಡುತ್ತಿವೆ.



ಉದಯವಾಹಿನಿ ಚಿತ್ರ

**ನೆರವು ನೀಡಲು ಸ್ವಯಂ ಪ್ರೇರಿತವಾಗಿ ಮುಂದೆ ಬಂದ ಕೊಟ್ಟೂರು ಬಸವಪ್ಪ ಕುಟುಂಬದವರಿಗೆ ಮಳಲಕೆರೆ ಗ್ರಾಮದ ಎಸ್.ಎಚ್.ಪಿ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ಎಂ.ಆರ್.ಯೋಗೀಶ್ವರಯ್ಯ ಅವರು ಮೂಲಸೌಕರ್ಯ ವಂಚಿತ ಸರ್ಕಾರಿ ಶಾಲೆಗಳ ಮಾಹಿತಿ ನೀಡಿದ್ದರು. ಆ ಪೈಕಿ ಎಂಟು ಶಾಲೆಗಳಿಗೆ ಹರಳೆಣ್ಣೆ ಕೊಟ್ಟೂರು ಬಸವಪ್ಪ ಎಜುಕೇಷನ್ ಆಯಂಡ್ ಚಾರಿಟಬಲ್ ಟ್ರಸ್ಟ್ ಮೂಲಕ ಕುಟುಂಬದವರು ನೆರವು ನೀಡಿದ್ದಾರೆ.**

**ಮಾಡುವ ಕೆಲಸ ಭಿನ್ನವಾಗಿ ಇರಲೆಂದು ಪ್ರಸಕ್ತ ವರ್ಷದಿಂದ ಸರ್ಕಾರಿ ಶಾಲೆಗಳಿಗೆ ನೆರವು ನೀಡಲು ನಿರ್ಧರಿಸಿದೆವು. ಬಡಮಕ್ಕಳೂ ಸೌಲಭ್ಯಗಳ ಜತೆ ಗುಣಮಟ್ಟದ ಶಿಕ್ಷಣ ಪಡೆಯಲಿ ಎಂಬುದು ನಮ್ಮ ಆಶಯ**

**-ಎಚ್.ಕೆ.ಮಂಜುನಾಥ**
**ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ**

# ಅಗಲಿದ ಯೋಧನಿಗೆ ನಾಡಿನ ಅಶ್ರುತರ್ಪಣ

• **ಉದಯವಾಹಿನಿ, ಕುಂದಾಪುರ**

ಹುತಾತ್ಮ ಯೋಧ ಹವಾಲ್ದಾರ್ ಅನೂಪ್ ಪೂಜಾರಿ ಅವರ ಪಾರ್ಥಿವ ಶರೀರವನ್ನು ಬೀಜಾಡಿ ಗ್ರಾಮದ ಕೆರೆಮನೆಯಲ್ಲಿನ ಅನೂಪ್ ಅವರ ಮನೆಗೆ ತಂದಾಗ ನೆರೆದಿದ್ದ ಸಾವಿರಾರು ಮಂದಿಯ ಕಣ್ಣಾಲಿಗಳು ತೇವವಾದವು ಅನೂಪ್ ಪೂ ಜಾರಿ ಅಮರ್ ರಹೇ ಎನ್ನುವ ಘೋಷಣೆಗಳ ನಡುವೆ ಬಂಧುಗಳು ಅಂತಿಮ ವಿಧಿಯನ್ನು ಪೂರೈಸಿದರು. ತೆಕ್ಕಟ್ಟೆಯಲ್ಲಿ ಪಾರ್ಥಿವ ಶರೀರವನ್ನು ಕುಂದಾಪುರದ ಉಪವಿಭಾಗಾಧಿಕಾರಿ ಮಹೇಶ್ಚಂದ್ರ ಹಾಗೂ ತಹಶೀಲ್ದಾರ್ ಎಚ್.ಎಸ್. ಶೋಭಾಲಕ್ಷ್ಮಿ ಅವರು ಸ್ವೀಕರಿಸಿದರು.

ಅವರ ನೇತೃತ್ವದಲ್ಲಿ ಮೆರವಣಿಗೆಯಲ್ಲಿ ಪಾರ್ಥಿವ ಶರೀರವನ್ನು ಮನೆಗೆ ತರಲಾಯಿತು. ಬೀಜಾಡಿಯ ಪಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಪಾರ್ಥಿವ ಶರೀರವನ್ನು ತರುತ್ತಿದ್ದಂತೆ ಬೆಳಿಗ್ಗೆಯಿಂದಲೇ ಬಿಸಿಲಿನಲ್ಲೇ ಕಾಯುತ್ತಿದ್ದ ಸಾವಿರಾರು ಮಂದಿ ಸರತಿಯಲ್ಲಿ ಬಂದು ಹುತಾತ್ಮ ಯೋಧನ ಅಂತಿಮ ದರ್ಶನ ಪಡೆದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ, ಮಾಜಿ ಸಂಸದ ಕೆ.ಜಯಪ್ರಕಾಶ್ ಹೆಗ್ಡೆ, ಬೈಂದೂರು ಶಾಸಕ ಗುರುರಾಜ್ ಗಂಟಿಹೊಳೆ, ಮಾಜಿ ಶಾಸಕರಾದ ಕೆ.ಗೋಪಾಲ ಪೂಜಾರಿ, ರಘುಪತಿ ಭಟ್, ಹಿಂದೂ ಸಂಘಟನೆಯ ಮುಖಂಡ ಸತ್ಯಜಿತ್ ಸುರತ್ಕಲ್, ಮಾಜಿ ಸೈನಿಕರು, ವಿದ್ಯಾರ್ಥಿಗಳು ಸೇರಿದಂತೆ ಸಾವಿರಾರು ಮಂದಿ ಅಗಲಿದ ಯೋಧನಿಗೆ ಗೌರವ ವಂದನೆ ಸಲ್ಲಿಸಿದರು.

ಊರ ಮಗ ಹುತಾತ್ಮನಾಗಿದ್ದಾನೆ ಎನ್ನುವ ಸುದ್ದಿ ಬಂದ ಕ್ಷಣದಿಂದಲೇ ಮುಂದೇನು ಮಾಡಬೇಕು ಎನ್ನುವುದರ ಕುರಿತು ಪೂರ್ವ ಸಿದ್ಧತೆ ಮಾಡಿಕೊಂಡಿದ್ದ ಬೀಜಾಡಿ ಗ್ರಾಮದ ಜನರು ಗೌರವದ ವಿದಾಯ ಸಲ್ಲಿಸಿದರು.



ಉದಯವಾಹಿನಿ ಚಿತ್ರ

**ನೋವಾಗದಂತೆ ಎಚ್ಚರಿಕೆ**

**ಸರತಿ ಸಾಲುಗಳ ಮೇಲುಸ್ತುವಾರಿ ಅಂತಿಮ ದರ್ಶನದ ವ್ಯವಸ್ಥೆ, ಅಂತಿಮ ಸಂಸ್ಕಾರದ ಸಿದ್ಧತೆಗಳು ಸೇರಿದಂತೆ ಬಹುತೇಕ ಕಾರ್ಯಗಳ ಜವಾಬ್ದಾರಿಯನ್ನು ಸ್ವಯಂಪ್ರೇರಿತರಾಗಿಯೇ ವಹಿಸಿಕೊಂಡ ಸ್ಥಳೀಯ ಯುವಕರು, ಹುತಾತ್ಮ ಯೋಧನ ಅಂತಿಮ ದರ್ಶನಕ್ಕೆ ಬಂದ ಊರ ಹಾಗೂ ಪರವೂರ ದೇಶಭಕ್ತ ಜನರಿಗೆ ಸ್ವಲ್ಪವೂ ನೋವಾಗದಂತೆ ಎಚ್ಚರಿಕೆಯಿಂದ ಜವಾಬ್ದಾರಿಗಳನ್ನು ನಿರ್ವಹಿಸಿದರು.**

# ಪೋಕ್ಸ್ ಪ್ರಕರಣ: 1ನೇ ಅಪರಾಧಿಗೆ 35 ವರ್ಷ, 2ನೇ ಅಪರಾಧಿಗೆ 17 ವರ್ಷ 6 ತಿಂಗಳು ಸಜೆ

• **ಉದಯವಾಹಿನಿ, ಕಲಬುರಗಿ**

ಶೌಚಾಲಯಕ್ಕೆ ಹೋಗಿದ್ದ ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಅಪರಾಧಿಗಳಿಗೆ ಜೈಲು ಶಿಕ್ಷೆ ಹಾಗೂ ದಂಡ ವಿಧಿಸಿ ಕಲಬುರಗಿಯ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ (ಪೋಕ್ಸ್ ವಿಶೇಷ) ನ್ಯಾಯಾಲಯ ಆದೇಶಿಸಿದೆ.

ಪ್ರಕರಣದ 1ನೇ ಅಪರಾಧಿ, ಹುಣಸಿಹಡಗಿಲ ಗ್ರಾಮದ ಯುವಕ ಜಾನಿ ಅಲಿಯಾಸ್ ರೇವಣಸಿದ್ದ ಮಾಂಗಗೆ ನ್ಯಾಯಾಲಯವು 35 ವರ್ಷ ಜೈಲು ಹಾಗೂ 30 ಸಾವಿರ ದಂಡ ವಿಧಿಸಿದೆ. ಅತ್ಯಾಚಾರ ಕೃತ್ಯಕ್ಕೆ ಸಹಕರಿಸಿದಕ್ಕಾಗಿ ಪ್ರಕರಣದ 2ನೇ ಅಪರಾಧಿ, ಹತಗುಂದಾ ಗ್ರಾಮದ ಯುವಕ ಸಾಗರ ಹೊಗೆ 17 ವರ್ಷ 6 ತಿಂಗಳು ಜೈಲು, 10 ಸಾವಿರ ದಂಡಕ್ಕೆ ಗುರಿಯಾಗಿದ್ದಾನೆ.

2023ರ ಮಾರ್ಚ್ 18ರಂದು ಮಧ್ಯಾಹ್ನ ಬಾಲಕಿ ಶೌಚಾಲಯಕ್ಕೆ ಹೋಗಿದ್ದಳು. ಈ ವೇಳೆ ಜಾನಿ ಅಲಿಯಾಸ್ ರೇವಣಸಿದ್ದ ಹಾಗೂ ಸಾಗರ ಹೊಗೆ ಬಾಲಕಿಗೆ ಅವಾಚ್ಯ ಪದಗಳಿಂದ ನಿಂದಿಸಿ, ಕುತ್ತಿಗೆಗೆ ಚಾಕು ಇಟ್ಟು, ಜೀವಬೆದರಿಕೆ ಹಾಕಿದ್ದರು. ಬಳಿಕ ಜಾನಿ ಅಲಿಯಾಸ್ ರೇವಣಸಿದ್ದ ಅತ್ಯಾಚಾರ ಎಸಗಿದ್ದ. ಈ ಪ್ರಕರಣದ ತನಿಖೆ ನಡೆಸಿದ್ದ ಕಲಬುರಗಿ ಸಬ್‌ಅರ್ಬನ್ ಠಾಣೆಯ ಇನ್‌ಸ್ಪೆಕ್ಟರ್ ಸಮೀರ್ ಮುಲ್ಲಾ ಹಾಗೂ ಪಿಎಸ್‌ಐ ಬಸವರಾಜು ಅವರು ಆರೋಪಿಗಳ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಕೋರ್ಟ್‌ಗೆ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಕಲಬುರಗಿಯ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ (ಪೋಕ್ಸ್ ವಿಶೇಷ) ನ್ಯಾಯಾಲಯದ ನ್ಯಾಯಾಧೀಶ ಯಮನಪ್ಪ ಬಮ್ಮಣಗಿ, ಪೋಕ್ಸ್ ಹಾಗೂ ಪಿಐಸಿಯ ವಿವಿಧ ಕಲಂಗಳಡಿ ಅಪರಾಧಿಗಳಿಗೆ ಶಿಕ್ಷೆ ಹಾಗೂ ದಂಡ ವಿಧಿಸಿದ್ದಾರೆ.



**ಪ್ರಕರಣದ ನೊಂದ ಬಾಲಕಿಗೆ ಕಾನೂನು ಪ್ರಾಧಿಕಾರದಿಂದ 7 ಲಕ್ಷ ಪರಿಹಾರವನ್ನು 1 ತಿಂಗಳಲ್ಲಿ ನೀಡುವಂತೆಯೂ ಆದೇಶಿಸಿದ್ದಾರೆ.**

# ದೇವರ ಹೆಸರಿನಲ್ಲಿ ಪ್ರಾಣಿಬಲಿ, ಅನಿಷ್ಠ ಪದ್ಧತಿಗಳು ನಿಲ್ಲಬೇಕು

• **ಉದಯವಾಹಿನಿ, ಅಥಣಿ**

ತಾಲ್ಲೂಕಿನ ಕೊಕಟನೂರ ಯಲ್ಲಮ್ಮ ದೇವಿಯ ಜಾತ್ರೆಯಲ್ಲಿ ದೇವರ ಹೆಸರಿನಲ್ಲಿ ನಡೆಯುವ ಪ್ರಾಣಿ ವಧೆ ನಿಲ್ಲಬೇಕು. ಇದು ಶಿಕ್ಷಾರ್ಹ ಅಪರಾಧವಾಗಿದೆ ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಮತ್ತು ತಾಲ್ಲೂಕ ಆಡಳಿತ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಿಶ್ವ ಪ್ರಾಣಿ ಕಲ್ಯಾಣ ಸಂಘದ ದಯಾನಂದ ಸ್ವಾಮೀಜಿ ಒತ್ತಾಯಿಸಿದ್ದಾರೆ

ಅವರು ಅಥಣಿ ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಅಥಣಿ ತಾಲ್ಲೂಕಿನ ಕೊಕಟನೂರು ಅತಿ ಹೆಚ್ಚು ಪ್ರಾಣಿ ಬಲಿ ನಡೆಯುವ ಜಾತ್ರೆಯಾಗಿದ್ದು, ಕಳೆದ ನಾಲ್ಕೈದು ವರ್ಷಗಳಿಂದ ನಮ್ಮ ವಿಶ್ವ ಪ್ರಾಣಿ ಕಲ್ಯಾಣ ಮಂಡಳಿಯಿಂದ ಅಹಿಂಸಾ ಯಾತ್ರೆಯನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಮಹಾರಾಷ್ಟ್ರದಿಂದ ಲಕ್ಷಾಂತರ ಭಕ್ತರು ಈ ಜಾತ್ರೆಗೆ ಬರುವುದರಿಂದ ಜಾತ್ರಾ ಕಮಿಟಿಯವರು, ಗ್ರಾಮ ಪಂಚಾಯಿತಿ ಆಡ ಳಿತ, ತಾಲ್ಲೂಕ ಆಡಳಿತ ಮತ್ತು ಜಿಲ್ಲಾಡಳಿತ ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ಇಲ್ಲಿನ ಭಕ್ತಾದಿಗಳಿಗೆ ಅರಿವು ಮೂಡಿಸುವ ಮೂಲಕ ಪ್ರಾಣಿ ಬಲಿ ಮತ್ತು ಅನಿಷ್ಠ ಪದ್ಧತಿಗಳನ್ನು ತಡೆಗಟ್ಟಬೇಕು.





ಉದಯವಾಹಿನಿ ಚಿತ್ರ

ರಾಜ್ಯ ಹೈಕೋರ್ಟ್ ಆದೇಶದಂತೆ ಯಾವುದೇ ಧರ್ಮ ಮತ್ತು ದೇವರ ಹೆಸರಿನಲ್ಲಿ ಪ್ರಾಣಿಗಳನ್ನು ಮತ್ತು ಪ್ರಾಣಿಗಳ ಅಂಗಾಂಗಗಳನ್ನು ನೈವೇದ್ಯ ಮಾಡಿ ಹರಕೆ ತೀರಿಸುವುದು ಕಾನೂನು ಪ್ರಕಾರ ಅಪರಾಧವಾಗಿದೆ. ಆದರೆ ಕೊಕಟನೂರು ಎಲ್ಲಮ್ಮ ದೇವಿ ಜಾತ್ರೆಯಲ್ಲಿ ಕಾನೂನು ಬಾಹಿರವಾಗಿ ಪ್ರಾಣಿ ಬಲಿ ಮತ್ತು ಅನಿಷ್ಟ ಪದ್ದತಿಗಳು ಇನ್ನು ಬಹಿರಂಗವಾಗಿ ನಡೆಯುತ್ತಿವೆ. ಇದಕ್ಕೆ ಜಿಲ್ಲಾಡಳಿತ ಕಟ್ಟು ನಿಟ್ಟಿನ ಅಕ್ರಮಗಳನ್ನು ಕೈಕೊಳ್ಳಬೇಕು ಎಂದು ಅಗ್ರಹಿಸಿದರು.

**ದೇವಾಲಯಗಳು ವಧಾಲಯವಾಗಬಾರದು:** ವಿಶ್ವ ಪ್ರಾಣಿ ಕಲ್ಯಾಣ ಮಂಡಳಿಯು ಯಾವುದೇ ಜಾತಿ, ಧರ್ಮದ ವಿರೋಧಿಯಲ್ಲ, ಭಕ್ತರ ಧಾರ್ಮಿಕ ಭಾವನೆಗಳಿಗೆ, ಆಚರಣೆಗಳಿಗೆ ನಾವು ವಿರೋಧ ವ್ಯಕ್ತಪಡಿಸುತ್ತಿಲ್ಲ. ಧರ್ಮ ಮತ್ತು ದೇವರ ಹೆಸರಿನಲ್ಲಿ, ಮೂಢನಂಬಿಕೆ, ಅನಿಷ್ಟ ಪದ್ದತಿಗಳು ನಡೆಯುತ್ತಿರುವುದು ಜನರ ಅಜ್ಞಾನ ಮತ್ತು ಅಂಧಕಾರವಾಗಿದೆ. ನಾವು ಈ ಬಗ್ಗೆ ಜನರಲ್ಲಿ ಜನಜಾಗೃತಿ ಮೂಡಿಸುತ್ತಿದ್ದೇವೆ.

ದೇವಾಲಯಗಳು ವಧಾಲಯವಾಗದೆ ದಿವ್ಯಾಲಯಗಳಾಗಬೇಕು ಜ್ಞಾನಾಲಯಗಳಾಗಬೇಕು. ಜಾತ್ರೆಗಳು ಕಟುಕರ ಕೇರಿಯಾಗದೆ ಮದ್ಯ, ಮಾಂಸಗಳ ಮಾರಾಟ ಸ್ಥಳವಾಗದೆ, ಸದ್ಭಕ್ತಿ ಸತ್ಸಂಪ್ರದಾಯದ ಮೂಲಕ ಸಾತ್ವಿಕವಾಗಿ ಆಚರಿಸಬೇಕು. ನಾವು ಮಾಡುವ ಹೋರಾಟ ಯಾವುದೇ ಜಾತಿ ಮತ ಪಂತಗಳಿಗೆ ಸೀಮಿತವಾಗದೆ ಪ್ರಾಣಿ ದಯೆ ಮೂಲ ಉದ್ದೇಶ ಹೊಂದಿದೆ ಎಂದು ಹೇಳಿದರು

ಕೊಕಟನೂರು ಜಾತ್ರಾ ಪರಿಸರದಲ್ಲಿ ವಿಶ್ವ ಪ್ರಾಣಿ ಕಲ್ಯಾಣ ಮಂಡಳಿಯ ವತಿಯಿಂದ ಐದು ದಿನಗಳ ಕಾಲ ಅಹಿಂಸಾ ಪ್ರಾಣಿದಯಾ ಸಂದೇಶ ಯಾತ್ರೆ ಆರಂಭವಾಗಲಿದೆ. ತಾಲ್ಲೂಕ ಆಡಳಿತ, ವಿವಿಧ ಸಂಘ–ಸಂಸ್ಥೆಗಳು ಯಾತ್ರೆಗೆ ಕೈಜೋಡಿಸಬೇಕೆಂದು ಮನವಿ ಮಾಡಿದರು. ದೇಶದಲ್ಲಿ ಅಖಂಡವಾಗಿ ಮೂವತ್ತು ವರ್ಷಗಳಿಂದ ಈ ಹೋರಾಟ ಮಾಡಿಕೊಂಡು ಬರುತ್ತಿರುವ ನಾವುಗಳು ಕಕ್ಕೆರಿ ಭಿಷ್ಠಾದೇವಿ ಜಾತ್ರೆಯನ್ನು ಸಂಪೂರ್ಣ ಪ್ರಾಣಿ ಬಲಿ ಮುಕ್ತ ಮಾಡಿದ ಯಶಸ್ಸು ನಮ್ಮದಾಗಿದೆ. ದೇಶದಲ್ಲಿ ಅನೇಕ ಕಡೆಗಳಲ್ಲಿ ಪ್ರಾಣಿ ಬಲಿಯನ್ನು ತಡೆದಿದ್ದೇವೆ.

# ದೇಶದ ಸ್ವಾತಂತ್ರ್ಯಕ್ಕೆ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ ಉಧಾಮಸಿಂಗ್‌ರ ಕೊಡುಗೆ ಅನನ್ಯ

• **ಉದಯವಾಹಿನಿ, ಕಲಬುರಗಿ**

ಜಲಿಯನ ವಾಲಾಬಾಗ್ ಹತ್ಯಾಕಾಂಡ ಪ್ರತಿಕಾರಿ, ದೇಶದ ಸ್ವಾತಂತ್ರ್ಯವೇ ನನ್ನ ಗುರಿಯಾಗಿದ್ದು ಅದಕ್ಕಾಗಿ ಪ್ರಾಣ ತೆರಲು ಸಿದ್ದವೆಂದು ಬ್ರಿಟಿಷರ ವಿರುದ್ಧ ನಿರಂತರವಾಗಿ ಹೋರಾಟ ಮಾಡುವ ಮೂಲಕ ಹುತಾತ್ಮರಾದ ಉಧಾಮಸಿಂಗ್ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರರಾಗಿ ನಮ್ಮ ದೇಶದ ಸ್ವಾತಂತ್ರ್ಯಕ್ಕೆ ಅನನ್ಯವಾದ ಕೊಡುಗೆಯನ್ನು ನೀಡಿದ್ದಾರೆಂದು ಉಪನ್ಯಾಸಕ, ಚಿಂತಕ ಎಚ್.ಬಿ.ಪಾಟೀಲ ಹೇಳಿದರು. ನಗರದ ಆಳಂದ ರಸ್ತೆಯ ಖಾದ್ರಿ ಚೌಕ್‌ನಲ್ಲಿರುವ 'ಸಕ್ಸಸ್ ಕಂಪ್ಯೂಟರ ತರಬೇತಿ ಕೇಂದ್ರದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗದ ವತಿ ಯಿಂದ ಗುರುವಾರ ಜರುಗಿದ 'ಶಹೀದ್ ಉಧಾಮ ಸಿಂಗ್‌ರ 125ನೇ ಜನ್ಮದಿನಾಚರಣೆಯಲ್ಲಿ ಭಾವ ಚಿತ್ರಕ್ಕೆ ಪುಷ್ಪ ನಮನಗಳನ್ನು ಸಲ್ಲಿಸಿ ಅವರು ಮಾತನಾಡುತ್ತಿದ್ದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಅಸ್ಲಾಂ ಶೇಖ್, ಸಮಾಜ ಸೇವಕ ಶಿವಯೋಗೆಪ್ಪಾ ಎಸ್. ಬಿರಾದಾರ, ಶಿಕ್ಷಕಿಯರಾದ ಪ್ರಿಯಂಕಾ ಉಜಳಂಬಿ, ನಿಲೋಫರ್ ಶೇಖ್, ಪೂಜಾ ಜಮಾದಾರ, ಐಶ್ವರ್ಯ ಬಿರಾದಾರ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಉದಯವಾಹಿನಿ ಚಿತ್ರ

**ಬ್ರಿಟಿಷರ ವಿರುದ್ದ ನಿರಂತರ ಹೋರಾಟ**

**ಕ್ರಾಂತಿಕಾರಿಯಾಗಿ ನಿರಂತರವಾಗಿ ಹೋರಾಟ ಮಾಡಿದ ಉಧಾಮಸಿಂಗ್ ಸ್ವಾತಂತ್ರ್ಯಕಾಗಿ ವೀರಮರಣ ಹೊಂದಿದ್ದಾರೆ. ಅವರಲ್ಲಿರುವ ಅಪ್ಪಟವಾದ ದೇಶಭಕ್ತಿ ಎಲ್ಲಾ ಯುವಕರಿಗೆ ಮಾದರಿಯಾಗಿದೆ ಎಂದರು.**

# ಡಾ.ಸಿಂಗ್ ನಿಧನ ಹಿನ್ನೆಲೆಯಲ್ಲಿ ವಿಜಯಪುರ ಬಂದ್ ಮುಂದೂಡಿಕೆ

## ವಿಜಯಪುರ ಜಿಲ್ಲಾ ಬಂದನ್ನು ಡಿ.30ಕ್ಕೆ ಮುಂದೂಡಲಾಗಿದೆ: ಮಾಜಿ ಶಾಸಕ ರಾಜು ಆಲಗೂರ

• **ಉದಯವಾಹಿನಿ, ವಿಜಯಪುರ**

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಕುರಿತ ಕೇಂದ್ರ 4 ಗೃಹ ಸಚಿವ ಅಮಿತ್ ಶಾ ನೀಡಿರುವ ಅವಹೇಳನಕಾರಿ ಹೇಳಿಕೆ ಖಂಡಿಸಿ ಅಹಿಂದ, ದಲಿತ ಸಂಘಟನೆಗಳ ಒಕ್ಕೂಟ, ಡಾ.ಅಂಬೇಡ್ಕರ್ ವಿಚಾರವಾದಿಗಳ ಬಳಗದ ವತಿಯಿಂದ ಡಿ.28ರಂದು ಕರೆ ನೀಡಲಾಗಿದ್ದ ವಿಜಯಪುರ ಜಿಲ್ಲಾ ಬಂದನ್ನು ಡಿ.30ಕ್ಕೆ ಮುಂದೂಡಲಾಗಿದೆ ಎಂದು ಮಾಜಿ ಶಾಸಕ ರಾಜು ಆಲಗೂರ ತಿಳಿಸಿದರು.

ಬಂದ್ ವಿಚಾರವಾಗಿ ಶುಕ್ರವಾರ ವಿವಿಧ ಸಂಘ ಟನೆಗಳ ಮುಖಂಡರ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ವ್ಯಂಗ್ಯ, ಅಪಹಾಸ್ಯವಾಗಿ ಮಾತನಾಡಿದ್ದ ಅಮಿತ್ ಶಾ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಡಿ.28ರಂದು ಬಂದ್‌ಗೆ ಕರೆ ಕೊಡಲಾಗಿತ್ತು.

ಆದರೆ, ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ನಿಧನ ಹಿನ್ನೆಲೆಯಲ್ಲಿ ಬಂದ್ ಮುಂದೂಡಿಕೆ ಮಾಡಲಾಗಿದೆ. ಮುಖ್ಯವಾಗಿ ಶನಿವಾರವೇ ಅವರ ಅಂತ್ಯಸಂಸ್ಕಾರ ನೆರವೇರಲಿದೆ. ಆದ್ದರಿಂದ ಇಂತಹ ನೋವಿನ ಸಂದರ್ಭದಲ್ಲಿ ಬಂದ್ ಆಚರಣೆ ಸರಿಯಲ್ಲ ಎಂಬ ನಿರ್ಧಾರಕ್ಕೆ ಬರಲಾಗಿದೆ ಎಂದು ಹೇಳಿದರು.

ಡಿ.28ರ ಬಂದ್‌ಗೆ ರೈತ, ಕಾರ್ಮಿಕ, ಮಹಿಳಾ, ದಲಿತ, ಹಿಂದುಳಿದ ವರ್ಗ, ಅಂಬೇಡ್ಕರ್‌ವಾದಿ ಹಾಗೂ ಪ್ರಗತಿಪರ ಸಂಘಟನೆಗಳು ಸೇರಿ ಹಲವು ಸಂಘಟನೆಗಳು ಬೆಂಬಲ ಸೂಚಿಸಿದ್ದವು.

ಜತೆಗೆ ಎಲ್ಲಾ ರೀತಿಯಲ್ಲೂ ಅನೇಕ ಸಿದ್ಧತೆಗಳನ್ನೂ ಮಾಡಿದ್ದವು. ಡಾ.ಸಿಂಗ್ ಅವರಿಗೆ ಗೌರವ ಸೂಚಿಸುವ ಸಲುವಾಗಿ ಈ ದಿನದ ಹೋರಾಟವನ್ನು ಮುಂದೂಡಲಾಗಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮಾಹಿತಿ ನೀಡಲಾಗಿದೆ.

ಡಿ.30ರಂದು ಜಿಲ್ಲಾ ಹಾಗೂ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲೂ ಬೆಳಗ್ಗೆ 8ರಿಂದ 5ರವರೆಗೆ ಬಂದ್ ನಡೆಸಲಾಗುತ್ತದೆ ಎಂದು ವಿವರಿಸಿದರು.

ಮುಖಂಡ ಅಬ್ದುಲ್ ಹಮೀದ್ ಮುಶ್ರೀಫ್ ಮಾತನಾಡಿ, ಡಾ.ಮನಮೋಹನ್ ಸಿಂಗ್ ನಮ್ಮ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಿದ್ದರು. ದೇಶದ ಪ್ರಧಾನಿಯಾಗಿ 10 ವರ್ಷಗಳ ಕಾಲ ಆಡಳಿತ ನಡೆಸಿದವರು. ಅವರ ನಿಧನ ಹಿನ್ನೆಲೆಯಲ್ಲಿ ಡಿ.28ರ ಬದಲಿಗೆ 30ಕ್ಕೆ ಬಂದ್ ಆಚರಣೆಗೆ ತೀರ್ಮಾನಿಸಲಾಗಿದೆ.

ಮುಖಂಡರಾದ ರಮೇಶ ಆಸಂಗಿ, ಅನಿಲ ಹೊಸಮನಿ, ಸಿದ್ದು ರಾಯಣ್ಣನವರ, ಮಲ್ಲಿಕಾರ್ಜುನ ಬಟಗಿ, ಮಹಾದೇವಿ ಗೋಕಾಕ್, ಫಯಾಜ್ ಕಲಾದಗಿ ಸೇರಿದಂತೆ ಹಲವರು ನಾಯಕರು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

**ಬಂದ್ ಆಚರಣೆ ಸರಿಯಲ್ಲ**

**ಬೃಹತ್ ಪ್ರತಿಭಟನಾ ಮೆರವಣಿಗೆ**

**ನಿಗದಿಯಂತೆ ಸಿದ್ದೇಶ್ವರ ದೇವಸ್ಥಾನದಿಂದ ಗಣಪತಿ ಚೌಕ್, ವಾಜಪೇಯಿ ಚರ್ಕಲ್, ಕಿರಾಣ ಬಜಾರ್, ಗಾಂಧಿ ವೃತ್ತ, ಬಸವೇಶ್ವರ ವೃತದ ಮಾರ್ಗವಾಗಿ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ಜರುಗಲಿದೆ. ಈ ಹೋರಾಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಬೇಕು ಎಂದು ಮನವಿ ಮಾಡಿದರು.**

**ಮುಖಂಡ ಸೋಮನಾಥ ಕಳ್ಳಿಮನಿ, ಈ ಹೋರಾಟವು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದಲ್ಲ. ಡಾ.ಅಂಬೇಡ್ಕರ್ ಅವರಿಗೆ ಕೇಂದ್ರ ಸಚಿವ ಅಮಿತ್ ಶಾ ಮಾಡಿರುವ ಅಪಮಾನ ಖಂಡಿಸಿ ರೈತ ಕಾರ್ಮಿಕ, ಮಹಿಳಾ ಹಾಗೂ ವಿದ್ಯಾರ್ಥಿ ಸಂಘಟನೆಗಳು, ಬೀದಿಬದಿ ವ್ಯಾಪಾರಸ್ಥರು ಸೇರಿ ಎಲ್ಲಾ ಸಂಘಟನೆಗಳು ಒಂದಾಗಿ ಬಂದ್‌ಗೆ ಕರೆ ಕೊಟ್ಟಿವೆ. ಅನೇಕ ಸಂಘಟನೆಗಳ ಪ್ರಮುಖರು ಒಟ್ಟಾಗಿ ಬಂದ್ ಹಾಗೂ ಹೋರಾಟ ನಡೆಸಲಾಗುತ್ತದೆ ಎಂದು ತಿಳಿಸಿದರು.**

# ಮಿನಿ ನ್ಯೂಸ್

## ಬೆಳಗಾವಿಗೆ ಬಂದಿದ್ದ ರಾಜ್ಯಸಭಾ ಸದಸ್ಯ ಅಸ್ವಸ್ಥ- ಆರೋಗ್ಯ ವಿಚಾರಿಸಿದ ಸಿಎಂ

• **ಉದಯವಾಹಿನಿ, ಬೆಳಗಾವಿ**

ಆಸ್ಪತ್ರೆಗೆ ದಾಖಲಾದ ರಾಜಸ್ಥಾನದ ರಾಜ್ಯಸಭೆ ಸದಸ್ಯ ನೀರಜ್ ಡಂಗಿ ಅವರು ಆರೋಗ್ಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ವಿಚಾರಿಸಿದರು. ಬೆಳಗಾವಿ ಮಹಾಧಿವೇಶನದ ಶತಮಾನೋತ್ಸವ ಕಾರ್ಯಕ್ರಮಕ್ಕೆ ಆಗಮಿಸಿದ್ದ ನೀರಜ್ ಡಂಗಿ ಅವರು ಅನಾರೋಗ್ಯಕ್ಕೀಡಾಗಿದ್ದರು. ಹೀಗಾಗಿ ಅವರನ್ನು ಬೆಳಗಾವಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇದೀಗ ಆಸ್ಪತ್ರೆಗೆ ಭೇಟಿಕೊಟ್ಟ ಸಿಎಂ ಅವರು ನೀರಜ್ ಆರೋಗ್ಯ ವಿಚಾರಿಸಿ ಬೇಗ ಗುಣಮುಖರಾಗುವಂತೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಸಚಿವರಾದ ಕೆ.ಜೆ.ಜಾರ್ಜ್, ಸತೀಶ್ ಜಾರಕಿಹೊಳಿ, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ತೆಂಗಿನ ನಾರು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ನಟರಾಜ್ ಜಾನಕಿರಾಮ್ ಅವರು ಸಾಥ್ ನೀಡಿದರು.

## ಮತ್ತೋರ್ವ ಅಯ್ಯಪ್ಪಮಾಲಾಧಾರಿ ಚಿಕಿತ್ಸೆ ಫಲಿಸದೇ ಸಾವು

• **ಉದಯವಾಹಿನಿ, ಹುಬ್ಬಳ್ಳಿ**

ಸಿಲಿಂಡರ್ ಸ್ಫೋಟಗೊಂಡ ದುರಂತದಲ್ಲಿ ಮತ್ತೋರ್ವ ಗಾಯಾಳು ಅಯ್ಯಪ್ಪ ಮಾಲಾಧಾರಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿರುವ ಘಟನೆ ಹುಬ್ಬಳ್ಳಿಯಲ್ಲಿ ನಡೆದಿದೆ. ಲಿಂಗರಾಜು (19) ಮೃತ ಯುವಕ. ಭಾನುವಾರ ರಾತ್ರಿ ಹಳೇ ಹುಬ್ಬಳ್ಳಿಯ ಸಾಯಿನಗರ ಈಶ್ವರ ದೇವಸ್ಥಾನ ಬಳಿ ಸಂಭವಿಸಿದ್ದ ಸಿಲಿಂಡರ್ ಸ್ಫೋಟ ಪ್ರಕರಣದಲ್ಲಿ 9 ಜನ ಅಯ್ಯಪ್ಪ ಮಾಲಾಧಾರಿಗಳು ಗಾಯಗೊಂಡಿದ್ದರು. ಗಾಯಾಳುಗಳನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಗುರುವಾರ ಇಬ್ಬರು ಗಾಯಾಳುಗಳು ಮೃತಪಟ್ಟಿದ್ದರು. ಶುಕ್ರವಾರ ಬೆಳಿಗ್ಗೆ ಓರ್ವ ಬಾಲಕ ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದ. ಇದರ ಬೆನ್ನಲ್ಲೇ ಇದೀಗ 19 ವರ್ಷದ ಲಿಂಗರಾಜು ಎಂಬ ಗಾಯಾಳು ಕೂಡ ಚಿಕಿತ್ಸೆ ಫಲಿಸದೇ ಸಾವನ್ನಪ್ಪಿದ್ದಾರೆ. ಈ ಮೂಲಕ ಸಿಲಿಂಡರ್ ಸ್ಫೋಟದಲ್ಲಿ ಸಾವನ್ನಪ್ಪಿದವರ ಸಂಖ್ಯೆ ನಾಲ್ಕಕ್ಕೆ ಏರಿಕೆಯಾಗಿದೆ. ಮೃತ ನಾಲ್ವರು ಶೇ.70ಕ್ಕಿಂತ ಹೆಚ್ಚು ಸುಟ್ಟಗಾಯಗಳಿಂದ ಬಳಲುತ್ತಿದ್ದರು. ಇನ್ನು ಐವರು ಗಾಯಾಳುಗಳಿಗೆ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರೆದಿದೆ.

## ಕೆರೆಗೆ ಈಜಲು ಹೋಗಿದ್ದ ವಿದ್ಯಾರ್ಥಿ ನೀರುಪಾಲು

• **ಉದಯವಾಹಿನಿ, ವಿಜಯಪುರ**

ಶಾಲೆಗೆ ರಜೆ ಹಿನ್ನೆಲೆಯಲ್ಲಿ ಸ್ನೇಹಿತರ ಜೊತೆ ಕೆರೆಯಲ್ಲಿ ಈಜಲು ಹೋಗಿದ್ದ ವಿದ್ಯಾರ್ಥಿ ನೀರುಪಾಲಾಗಿರುವ ಘಟನೆ ವಿಜಯಪುರ ಜಿಲ್ಲೆಯಲ್ಲಿ ನಡೆದಿದೆ. ಅನಿರುದ್ಧ ಸಾಮ್ರಾಣಿ (20) ನೀರು ಪಾಲಾಗಿರುವ ಯುವಕ ಶಾಲೆಗೆ ರಜೆ ಘೋಷಣೆ ಹಿನ್ನೆಲೆಯಲ್ಲಿ ಸಹೋದರ ಅನಿಕೇತ್ ಸಾಬ್ರಾಣಿ ಸೇರಿ ಮೂವರು ಕೆರೆಗೆ ಈಜಲೆಂದು ಹೋಗಿದ್ದರು. ಈ ವೇಳೆ ಅನಿರುದ್ಧಗೆ ಈಜಲು ಸಾಧ್ಯವಾಗದೇ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ. ಘಟನಾ ಸ್ಥಳಕ್ಕೆ ಪೊಲೀಸರು, ಅಗ್ನಿಶಾಮಕ ಸಿಬ್ಬಂದಿಗಳು ದೌಡಾಯಿಸಿ, ಮೃತದೇಹಕ್ಕಾಗಿ ಕೆರೆಯಲ್ಲಿ ಶೋಧ ನಡೆಸಿದ್ದಾರೆ. ಸ್ಥಳದಲ್ಲಿ ಕುಟುಂಬದ ಆಕ್ರಂದನ ಮುಗಿಲುಮುಟ್ಟಿದೆ.

## ಜಗಳ ಬಿಡಿಸಲು ಬಂದ ಯುವಕನ ಕತ್ತಿಗೆ ಸ್ಕ್ರೂಡ್ರೈವರ್ ಚುಚ್ಚಿದ ದುಷ್ಕರ್ಮಿಗಳು

• **ಉದಯವಾಹಿನಿ, ಗದಗ**

ಜಗಳ ಬಿಡಿಸಲು ಬಂದ ಯುವಕನ ಕುತ್ತಿಗೆಗೆ ಸ್ಕ್ರೂ ಡ್ರೈವರ್ ಚುಚ್ಚಿ ದುಷ್ಕರ್ಮಿಗಳು ಪರಾರಿಯಾಗಿರುವ ಘಟನೆ ಗದಗ ನಗರದ ಜುಮ್ಮಾ ಮಸೀದಿ ಬಳಿ ಗುರುವಾರ ರಾತ್ರಿ ನಡೆದಿದೆ. ಘಟನೆಯಲ್ಲಿ ಅನಿಲ್ ಮುಳ್ಳಾಳ್ (27) ಸೇರಿದಂತೆ ಆರು ಯುವಕರಿಗೆ ಗಾಯವಾಗಿದೆ. ಸ್ಕ್ರೂ ಡ್ರೈವರ್ ನಿಂದ ಇರಿತಕ್ಕೊಳಗಾಗಿರುವ ಅನಿಲ್ ಎಂಬಾತನನ್ನು ಧಾರವಾಡ ಎಸ್ ಡಿಎಂ ಆಸ್ಪತ್ರೆಗೆ ದಾಖಲಿಸಿ ಹೆಚ್ಚಿನ ಚಿಕಿತ್ಸೆ ನೀಡಲಾಗುತ್ತಿದೆ. ಇನ್ನುಳಿದ ಐವರಿಗೆ ಗದಗ ಜಿಮ್ಸ್ ಆಸ್ಪತ್ರೆಯಲ್ಲೇ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಯಲ್ಲಿ ಅನಿಲ್, ಚೇತನ್ ಮುಳ್ಳಾಳ, ವಿನಾಯಕ್ ಮುಳ್ಳಾಳ, ಅಭಿಷೇಕ್ ಹರ್ಲಾಪುರ, ಕಿರಣ್ ಸಾಲಿಮಠ, ಶಾರುಖ್ ಮುಲ್ಲಾ ಎಂಬ ಯುವಕರಿಗೆ ಗಾಯಗಳಾಗಿವೆ.

ಘಟನೆಗೆ ನಿಖರವಾಗಿ ಕಾರಣ ತಿಳಿದು ಬಂದಿಲ್ಲ. ವೈಯಕ್ತಿಕ ದ್ವೇಷದ ಹಿನ್ನೆಲೆ ಈ ಹಲ್ಲೆ ನಡೆದಿರಬಹುದು ಎನ್ನಲಾಗಿದೆ. ಅನಿಲ್ ಎನ್ನುವ ಕ್ರೀಡೆ ಯುವಕ ಶ್ರೀರಾಮ ಸೇನೆಯ ಸಕ್ರಿಯ ಕಾರ್ಯಕರ್ತನಾಗಿದ್ದು, ಈತನನ್ನೇ ಟಾರ್ಗೆಟ್ ಮಾಡಿ ಹಲ್ಲೆ ನಡೆದಿರುವ ಬಗ್ಗೆ ಕುಟುಂಬಸ್ಥರು ಆರೋಪ ವ್ಯಕ್ತಪಡಿಸಿದ್ದಾರೆ. ಧಾರವಾಡ ಎಸ್ ಡಿಎಂ ಆಸ್ಪತ್ರೆಗೆ ಶ್ರೀರಾಮಸೇನೆ ಮುಖಂಡ ಪ್ರಮೋದ್ ಮುತಾಲಿಕ್ ಭೇಟಿ ನೀಡಿ, ಅನಿಲ್ ಆರೋಗ್ಯದ ಕುರಿತು ವಿಚಾರಿಸಿದ್ದಾರೆ. ಗದಗ ಶಹರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು. ಪೊಲೀಸರು ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ.

## ನವಭಾರತದ ಚಾಣಕ್ಯ ಅಸ್ತಂಗತ ದೇಶಕ್ಕೆ ತುಂಬಲಾರದ ನಷ್ಟ

• **ಉದಯವಾಹಿನಿ, ಮಂಗಳೂರು**



ನವಭಾರತಕ್ಕೆ ಅರ್ಥಶಾಸ್ತ್ರ ಬರೆದ ಶ್ರೇಷ್ಠ ಆರ್ಥಿಕ ತಜ್ಞ ಮತ್ತು ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ಅಗ ಲಿಕೆ ಭಾರತದ ಮಾತ್ರವಲ್ಲ, ಜಗತ್ತಿನ ಆರ್ಥಿಕತೆಗೂ ತುಂಬಲಾರದ ನಷ್ಟವಾಗಿದೆ ಎಂದು ಯು. ಟಿ. ಖಾದರ್ ಸಂತಾಪ ವ್ಯಕ್ತಪಡಿಸಿದರು.

1991ರ ಆರ್ಥಿಕ ಬಿಕ್ಕಟ್ಟಿನ ತೀವ್ರ ಸಂಕಷ್ಟದಲ್ಲಿ ಭಾರತ ಸ್ಥಗಿತಗೊಂಡಿದ್ದ ಸಮಯದಲ್ಲಿ ಅಧಿಕಾರ ಚುಕ್ಕಾಣಿ ಹಿಡಿದ ಡಾ. ಮನಮೋಹನ್ ಸಿಂಗ್ ಅವರ ದೂರದರ್ಶಿತ್ವ ದೇಶವನ್ನು ಆರ್ಥಿಕ ಪುನಶ್ಚೇತನದ ಮಾರ್ಗದಲ್ಲಿ ನಡೆಸಿತು. ಅವರು ವಿದೇಶದಲ್ಲಿ ಅಡ ವಿಟ್ಟಿದ್ದ ಚಿನ್ನವನ್ನು ಬಿಡುಗಡೆ ಮಾಡಿದ್ದು ಮಾತ್ರವಲ್ಲದೆ, ಅವರ ನೇತೃತ್ವದಲ್ಲಿ ಆರಂಭವಾದ ಆರ್ಥಿಕ ಉದಾರೀಕರಣದ ನೀತಿಗಳು, ಭಾರತದ ಪಾಲಿಗೆ ಆರ್ಥಿಕ ಸ್ವಾವಲಂಬನೆ, ಸಮೃದ್ಧಿಯ ಹೊಸ ಅಧ್ಯಾಯವನ್ನೇ ತೆರೆಯಿತು ಎಂದರು. ಇಡೀ ವಿಶ್ವ ಆರ್ಥಿಕತೆಯಿಂದ ಕಂಗಾಲಾದಾಗ ಭಾರತದ ಆರ್ಥಿಕತೆ ದೃಢವಾಗಿತ್ತು ಮತ್ತು ಭಾರತದ ಪ್ರತಿ ಮನೆ ಬಾಗಿಲಲ್ಲೂ ಇಂದು ಆರ್ಥಿಕ ಸ್ವಾತಂತ್ರ ಹಾಗೂ ಸ್ವಾವಲಂಬನೆ ಕಂಡುಬಂದಿದ್ದರೆ ಅದು ಅವರ ಕೊಡುಗೆ ಎಂಬುವುದನ್ನು ಯಾರೂ ಮರೆಯಲು ಸಾಧ್ಯವಿಲ್ಲ ಅವರ ಪ್ರಗತಿಪರ ದೃಷ್ಟಿಕೋನ ಮತ್ತು ಅವಿಸ್ಮರಣೀಯ ಕೊಡುಗೆಗಳು ದೇಶದ ಮುಂದಿನ ತಲೆಮಾರಿಗೆ ಸ್ಫೂರ್ತಿಯಾಗಿವೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಕಟಣೆಯಲ್ಲಿ ತಿಳಿಸಿದರು.

# ನಾಸಾದ ಸೂರ್ಯ ಅಧ್ಯಯನ ನೌಕೆಯ ಐತಿಹಾಸಿಕ ಸಾಧನೆಗೆ ಜೈಕಾರ

## ಸೂರ್ಯನ ಅತ್ಯಂತ ಸಮೀಪದಲ್ಲಿ ಯಶಸ್ವಿ ಕಾರ್ಯಾಚರಣೆ ನಡೆಸಿದ ಬಾಹ್ಯಾಕಾಶ ನೌಕೆ, ಪಾರ್ಕರ್ ಸೋಲಾರ್ ಪ್ರೋಬ್ ಸುರಕ್ಷಿತ



**ಭಾಸ್ಕರನ ಗೆದ್ದ ಪಾರ್ಕರ**

**ವಾಷಿಂಗ್ಟನ್:** ಸೌರಮಂಡಲದ ಅಧಿಪತಿ ಸೂರ್ಯನ ಅಧ್ಯಯನಕ್ಕೆ ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ ರವಾನಿಸಿದ್ದ 'ಪಾರ್ಕರ್ ಸೋಲಾರ್ ಪ್ರೋಬ್' ಐತಿಹಾಸಿಕ ಸಾಧನೆ ಮಾಡಿದೆ. ಮಾನವ ನಿರ್ಮಿತ ಬಾಹ್ಯಾಕಾಶ ನೌಕೆಯೊಂದು ಸೂರ್ಯನ ಅತೀ ಸಮೀಪಕ್ಕೆ ಹೋದ ಕೀರ್ತಿಯನ್ನು 'ಪಾರ್ಕರ್ ಸೋಲಾರ್ ಪ್ರೋಬ್' ಮುಡಿಗೇರಿಸಿಕೊಂಡಿದೆ.

ನಾಸಾದ ಪಾರ್ಕರ್ ಸೋಲಾರ್ ಪ್ರೋಬ್ ಬಾಹ್ಯಾಕಾಶ ನೌಕೆಯು ಕಳೆದ ಡಿಸೆಂಬರ್ 24 (ಮಂಗಳವಾರ)ರಂದು, ಸೌರ ಮೇಲ್ಮೈಯಿಂದ ಕೇವಲ 3.8 ಮಿಲಿಯನ್ ಮೈಲಿ(6.1 ಮಿಲಿಯನ್ ಕಿ.ಮೀ) ಅಂತರದಲ್ಲಿ ಯಶಸ್ವಿ ಕಾರ್ಯಾಚರಣೆ ನಡೆಸಿದೆ. ಸೂರ್ಯನ ಈ ನಿಕಟ ಅಧ್ಯಯನವು ಈ ಪ್ರದೇಶದ ಅತಿಯಾದ ಬಿಸಿ ವಾತಾವರಣದ ಬಗ್ಗೆ ಸಾಕಷ್ಟು ಮಾಹಿತಿ ಒದಗಿಸಿದೆ. ಎಂದು ನಾಸಾ ಮಾಹಿತಿ ನೀಡಿದೆ. ಸೌರ ಪ್ರಭಾವದ ಈ ವಲಯದಲ್ಲಿ ತಾಪಮಾನ ಲಕ್ಷಾಂತರ ಡಿಗ್ರಿ ಸೆಲ್ಸಿಯಸ್‌ನಷ್ಟಿದ್ದು, ಸೌರ ಮಾರುತಗಳಿಗೆ ಮೂಲವಾಗಿದೆ.

ಹೀಗಾಗಿ 'ಪಾರ್ಕರ್ ಸೋಲಾರ್ ಪ್ರೋಬ್‌ನ ಇತ್ತೀಚಿನ ಕಾರ್ಯಾಚರಣೆ ಸೌರ ಮಾರುತಗಳ ಕುರಿತ ಖಗೋಳ ವಿಜ್ಞಾನಿಗಳ ಜ್ಞಾನವನ್ನು ಮತ್ತಷ್ಟು ಹೆಚ್ಚಿಸಿದೆ ಎಂದು ನಾಸಾ ಸಂತಸ ವ್ಯಕ್ತಪಡಿಸಿದೆ. ಮಾನವ ನಿರ್ಮಿತ ಯಾವ ಬಾಹ್ಯಾಕಾಶ ನೌಕೆಯು ಸೂರ್ಯನ ಇಷ್ಟೊಂದು ಸಮೀಪಕ್ಕೆ ಹೋಗಿರಲಿಲ್ಲ. ಇದೀಗ 'ಪಾರ್ಕರ್ ಸೋಲಾರ್ ಪ್ರೋಬ್' ಎಲ್ಲಾ ದಾಖಲೆಗಳನ್ನು ಪುಡಿ ಪುಡಿ ಮಾಡಿದ್ದು, ಸೌರಮಂಡಲದ ಅಸ್ತಿತ್ವಕ್ಕೆ ಕಾರಣೀಭೂತನಾದ ಸೂರ್ಯನ ಬಗ್ಗೆ ಅಗಾಧ ಮಾಹಿತಿಯನ್ನು ಭೂಮಿಗೆ ರವಾನಿಸಿದೆ.

ಕರೋನಾ ಎಂದು ಕರೆಯಲ್ಪಡುವ ಸೂರ್ಯನ ಹೊರಗಿನ ವಾತಾವರಣದಲ್ಲಿ ಕಾರ್ಯಾಚರಣೆ ನಡೆಸುವುದು ಅಷ್ಟು ಸುಲಭದ ಮಾತಲ್ಲ. ಆದರೆ ಪಾರ್ಕರ್ ಪ್ರೋಬ್ ಈ ಎಲ್ಲಾ ಅಡೆತಡೆಗಳನ್ನು ಮೀರಿ ಸಾಧನೆ ಮಾಡಿರುವುದು ನಿಜಕ್ಕೂ ಪ್ರಶಂಸನೀಯ. ಮೇರಿಲ್ಯಾಂಡ್‌ನ ಜಾನ್ಸ್ ಹಾಪ್ಕಿನ್ಸ್ ಅಪ್ಲೈಡ್ ಫಿಸಿಕ್ಸ್ ಲ್ಯಾಬೊರೇಟರಿಯಲ್ಲಿರುವ ಪಾರ್ಕರ್ ಪ್ರೋಬ್ ಕಾರ್ಯಾಚರಣೆ ತಂಡವು, ಬಾಹ್ಯಾಕಾಶ ನೌಕೆಯ ಮಾಹಿತಿಯನ್ನು ಕಲೆ ಹಾಕುತ್ತಿದೆ. ಸದ್ಯ ನೌಕೆಯಿಂದ ಮೊದಲ ಸಂಕೇತವನ್ನು ಸ್ವೀಕರಿಸಲಾಗಿದ್ದು, ಜನವರಿ 1ರಂದು ನೌಕೆಯು ತನ್ನ ಸ್ಥಿತಿಯ ಬಗ್ಗೆ ವಿವರವಾದ ಟೆಲಿಮೆಟ್ರಿ ಡೇಟಾವನ್ನು ಕಳುಹಿಸುವ ನಿರೀಕ್ಷೆಯಿದೆ.. ಎಂದು ನಾಸಾ ತಿಳಿಸಿದೆ.

ಭಾಸ್ಕರನ ಅಧ್ಯಯನಕ್ಕಾಗಿ 2018ರಲ್ಲಿ ನಭಕ್ಕೆ ಚಿಮ್ಮಿದ ಪಾರ್ಕರ್ ಸೋಲಾರ್ ಪ್ರೋಬ್, ಶುಕ್ರ ಗ್ರಹದ ಗುರುತ್ವಾಕರ್ಷಣೆಯನ್ನು ಬಳಸಿಕೊಂಡು ಹಂತ ಹಂತವಾಗಿ ಸೂರ್ಯನ ಸಮೀಪಕ್ಕೆ ಪ್ರಯಾಣಿಸುತ್ತಿದೆ. ಈ ಬಾಹ್ಯಾಕಾಶ ನೌಕೆ ಗಂಟೆಗೆ ಸುಮಾರು 430,000 ಮೈಲಿ (692,000 ಕಿ.ಮೀ) ವೇಗದಲ್ಲಿ ಸೂರ್ಯನ ಸಮೀಪಕ್ಕೆ ಚಲಿಸುತ್ತಿದೆ.

ಪಾರ್ಕರ್ ಸೋಲಾರ್ ಪ್ರೋಬ್ ಬಾಹ್ಯಾಕಾಶ ನೌಕೆಯು 1,800 ಡಿಗ್ರಿ ಫ್ಯಾರನ್‌ಹೀಟ್ (982 ಡಿಗ್ರಿ ಸೆಲ್ಸಿಯಸ್) ವರೆಗಿನ ಗರಿಷ್ಠ ತಾಪಮಾನವನ್ನು ಸಹಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದು ವಿಶೇಷ.

### ಸೂರ್ಯನ ಮೇಲ್ಮೈಗೆ ಸಮೀಪ ಹೋಗಿ ಹೊಸ ಇತಿಹಾಸ

**ಸೂರ್ಯ ಅಧ್ಯಯನದಲ್ಲಿ ನಿರತವಾಗಿರುವ ಅಮೆರಿಕದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ನಾಸಾ ರವಾನಿಸಿದ್ದ 'ಪಾರ್ಕರ್ ಸೋಲಾರ್ ಪ್ರೋಬ್', ಸೂರ್ಯನ ಮೇಲ್ಮೈಗೆ ಅತ್ಯಂತ ಸಮೀಪ ಹೋಗಿ ಹೊಸ ಇತಿಹಾಸ ಬರೆದಿದೆ. ಈ ಬಾಹ್ಯಾಕಾಶ ನೌಕೆಯು ಕಳೆದ ಡಿಸೆಂಬರ್ 24ರಂದು, ಸೌರ ಮೇಲ್ಮೈಯಿಂದ ಕೇವಲ 6.1 ಮಿಲಿಯನ್ ಕಿ.ಮೀ ಅಂತರದಲ್ಲಿ ಹಾದು ಹೋಗುವ ಮೂಲಕ, ಸೂರ್ಯನ ಇಷ್ಟೊಂದು ಸಮೀಪಕ್ಕೆ ಹೋದ ಮೊಟ್ಟ ಮೊದಲ ಮಾನವ ನಿರ್ಮಿತ ಬಾಹ್ಯಾಕಾಶ ನೌಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.**

**ಈ ಕುರಿತು ಮಾಹಿತಿ ನೀಡಿರುವ ನಾಸಾ, ಪಾರ್ಕರ್ ಪ್ರೋಬ್ ಸುರಕ್ಷಿತವಾಗಿದೆ ಮತ್ತು ಸಾಮಾನ್ಯ ಪರಿಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಬಾಹ್ಯಾಕಾಶ ನೌಕೆಯಿಂದ ಪಡೆದುಕೊಂಡ ಸ್ಪಷ್ಟ ಸಂದೇಶಗಳು ಕಾರ್ಯಾಚರಣೆ ಯಶಸ್ವಿಯಾಗಿರುವುದನ್ನು ಪುಷ್ಟೀಕರಿಸಿದೆ ಎಂದು ಹೇಳಿದೆ.**

# ಕೊಟ್ಟ ಮಾತಿನಂತೆ ಛಡಿಯೇಟು ಬಾರಿಸಿಕೊಂಡ ಅಣ್ಣಾಮಲೈ



**ಚೆನ್ನೈ:** ಕೊಟ್ಟ ಮಾತಿನಂತೆ ಇಂದು ತಮಿಳುನಾಡು ಬಿಜೆಪಿ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಅವರು ಶುಕ್ರವಾರ ತಮ್ಮ ನಿವಾಸದ ಎದುರು ಛಡಿಏಟು ಬಾರಿಸಿಕೊಂಡಿದ್ದಾರೆ. ಹಸಿರು ಮುಂಡು ಧರಿಸಿ, ಶರ್ಟ್ ರಹಿತ ಅಣ್ಣಾಮಲೈ ಮಾಧ್ಯಮ ಪ್ರತಿನಿಧಿಗಳು ಮತ್ತು ಭಾರತೀಯ ಜನತಾ ಪಕ್ಷದ ಸದಸ್ಯರ ಸಮುಖದಲ್ಲಿ ಉದ್ದವಾದ, ಬಿಳಿ ಚಾವಟಿಯಿಂದ ಮಗೆ ತಾವೇ ಹೊಡೆದುಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಕೆಲ ಬಿಜೆಪಿ ಕಾರ್ಯಕರ್ತರು ನಿಮಗೆ ನಾಚಿಕೆ ಇಲ್ಲವೇ ಸ್ಟಾಲಿನ್ , ಆರೋಪಿ ಜ್ಞಾನಶೇಖರನ್ ಅವರನ್ನು ಗಲ್ಲಿಗೇರಿಸಿ, ಶೇಮ್ ಆನ್ ಯೂ ಎಂಬ ಘೋಷಣೆಗಳ ಫಲಕಗಳನ್ನು ಬಿಜೆಪಿ ಬೆಂಬಲಿಗರು ಹಿಡಿದುಕೊಂಡಿದ್ದರು. ಅಣ್ಣಾಮಲೈ ಅವರನ್ನು ತಡೆಯಲು ಬೆಂಬಲಿಗರು ಧಾವಿಸುವ ಮುನ್ನವೇ ಅವರು ಸುಮಾರು ಎಂಟು ಬಾರಿ ಚಾಟಿ ಯಲ್ಲಿ ಹೊಡೆದುಕೊಂಡಿದ್ದರು.

ಸ್ವಯಂ ಚಾಟಿ ಬೀಸಿದ ಬಳಿಕ ಅವರು ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡಿದರು. ತಮಿಳು ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳುವ ಯಾರಿಗಾದರೂ ಈ ಆಚರಣೆಯ ಮಾರ್ಗಗಳು ಎಂದು ತಿಳಿಯುತ್ತದೆ ಎಂದು ಅವರು ಹೇಳಿದರು.

ನನ್ನ ಅನೇಕ ಪೂರ್ವಜರು ಈ ಮಾರ್ಗದಲ್ಲಿ ನಡೆದರು ಮತ್ತು ನಾನು ಕೂಡ ಅದನ್ನು ಆರಿಸಿಕೊಂಡಿದ್ದೇನೆ. ಇದು ಉನ್ನತ ಶಕ್ತಿಗೆ ಶರಣಾಗುವ, ದೇವರಿಗೆ ಶರಣಾಗುವ ಪ್ರಕ್ರಿಯೆ ಯಾಗಿದೆ ಎಂದು ಬಿಜೆಪಿ ರಾಜ್ಯ ಮುಖ್ಯಸ್ಥರು ಸೇರಿಸಿದರು. ತಮಿಳುನಾಡಿನಲ್ಲಿರುವ ಡಿಎಂಕೆ ಸರ್ಕಾರದಿಂದ ಜನರಿಗೆ ಅನ್ಯಾಯ ಆಗುತ್ತಿದೆ ಎಂದು ಆರೋಪಿಸಿರುವ ಅವರು ಈ ಸರ್ಕಾರ ಹೋಗು ವವರೆಗೆ ತಾವು ಕಾಲಿಗೆ ಚಪ್ಪಲಿ ತೊಡುವುದಿಲ್ಲ ಎಂದು ಅವರು ಘೋಷಿಸಿದ್ದರು.

**ನಮನ್ನು ನಾವೇ ಹೊಡೆದುಕೊಳ್ಳುವುದು, ನಮನ್ನು ನಾವೇ ಶಿಕ್ಷಿಸಿಕೊಳ್ಳುವುದು, ಅತ್ಯಂತ ಕಠಿಣವಾದ ಆಚರಣೆಗಳ ಮೂಲಕ ನಮನ್ನು ನಾವು ಹಾಕಿಕೊಳ್ಳುವುದು ಇತ್ಯಾದಿಗಳು ಈ ಸಂಸ್ಕೃತಿಯ ಭಾಗವಾಗಿದೆ. ಇದು ಯಾವುದೇ ವ್ಯಕ್ತಿಯ ವಿರುದ್ಧ ಅಲ್ಲ ಅಥವಾ ಯಾವುದರ ವಿರುದ್ಧವೂ ಅಲ್ಲ. ಇದು ರಾಜ್ಯದಲ್ಲಿ ಆಗುತ್ತಿರುವ ನಿರಂತರ ಅನ್ಯಾಯದ ವಿರುದ್ಧ. ಅಣ್ಣಾ ವಿಶ್ವವಿದ್ಯಾನಿಲಯದಲ್ಲಿ ನಡೆದಿರುವುದು ಒಂದು ಟಿಪ್ಪಿಂಗ್ ಪಾಯಿಂಟ್ ಮಾತ್ರ ಎಂದು ಅವರು ಹೇಳಿದ್ದಾರೆ.**

# ಫೆ. 23ರಂದು ಸಾರ್ವತ್ರಿಕ ಚುನಾವಣೆ ಘೋಷಣೆ



**ಫ್ರಾಂಕ್‌ಫರ್ಟ್:** ಚಾನ್ಸಲರ್ ಒಲಾಜ್ ಸ್ಕೋಲ್ಡ್ ಅವರ ಆಡಳಿತ ಒಕ್ಕೂಟದ ಪತನದ ಬೆನ್ನಲ್ಲೇ ಜರ್ಮನಿ ಸಂಸತ್ತನ್ನು ಅಧ್ಯಕ್ಷ ಫ್ರಾಂಕ್ ವಾಲ್ಟರ್ ಸ್ಟೀನ್‌ಮೀರ್ ಅವರು ಶುಕ್ರವಾರ ವಿಸರ್ಜಿಸಿದ್ದಾರೆ. ಜತೆಗೆ ಫೆ. 23ರಂದು ಸಾರ್ವತ್ರಿಕ ಚುನಾವಣೆಗೆ ದಿನಾಂಕ ನಿಗದಿಪಡಿಸಿದ್ದಾರೆ. ಜರ್ಮನಿಯ ನಿಶ್ಚಲ ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸುವಲ್ಲಿ ವಿಫಲರಾದ ವಿತ್ತ ಸಚಿವರನ್ನು ನ. 6ರಂದು ವಜಾಗೊಳಿಸಿದ ಬೆನ್ನಲ್ಲೇ ಮೂರು ಪಕ್ಷಗಳ ಸಮ್ಮಿಶ್ರ ಸರ್ಕಾರದಲ್ಲಿ ಭಿನ್ನಾಭಿಪ್ರಾಯ ಮೂಡಿತ್ತು. ಇದಾದ ನಂತರ ವಿಶ್ವಾಸ ಮತ ಕೋರಿದ ಸ್ಕೋಲ್ಡ್ ಅವರಿಗೆ ಡಿ. 16ರಂದು ಪರಾಭವ ಉಂಟಾಗಿತ್ತು.

ಇದರ ಬೆನ್ನಲ್ಲೇ ಅಧ್ಯಕ್ಷ ಸ್ಟೀನ್‌ಮೀರ್ ಅವರು ಸಂಸತ್ ವಿಸರ್ಜಿಸಿದ್ದಾರೆ. ಬಹುತೇಕ ಪಕ್ಷಗಳ ಮುಖಂಡರು ಫೆ. 23ರಂದು ಚುನಾವಣೆ ನಡೆಸಲು ಒಮ್ಮತ ವ್ಯಕ್ತಪಡಿಸಿ ಬೆನ್ನಲ್ಲೇ ದಿನಾಂಕವನ್ನು ಘೋಷಣೆ ಮಾಡಿದ್ದಾರೆ. ಪ್ರಸಕ್ತ ಸರ್ಕಾರದ ಅವಧಿಯು ಇನ್ನೂ ಏಳು ತಿಂಗಳು ಬಾಕಿ ಇದೆ. 2ನೇ ವಿಶ್ವ ಯುದ್ಧದ ನಂತರ ರಾಷ್ಟ್ರೀಯ ಸಂಸತ್ತು ತನ್ನಿಂತಾನೆ ವಿಸರ್ಜನೆಗೊಳ್ಳುವುದನ್ನು ಸಂವಿಧಾನ ಅನುಮತಿಸಿರಲಿಲ್ಲ. ಆದರೆ ಸ್ಟೀನ್‌ಮೀರ್ ಅವರು ಸಂಸತ್ ವಿಸರ್ಜಿಸಲು ನಿರ್ಧರಿಸಿ, ಚುನಾವಣೆ ಘೋಷಣೆ ಮಾಡಿದರು. ಇದಕ್ಕಾಗಿ ಅವರು 21 ದಿನಗಳನ್ನು ತೆಗೆದುಕೊಂಡರು.

### ಮುಖ್ಯಸ್ಥರಾಗಿ ಮುಂದು

**ಜರ್ಮನಿಯಲ್ಲಿ ಸಂಸತ್ ವಿಸರ್ಜನೆಗೊಂಡ 60 ದಿನಗಳ ಒಳಗಾಗಿ ಚುನಾವಣೆ ನಡೆಯಬೇಕು ಎಂಬ ನಿಯಮವಿದೆ. ಚುನಾವಣೆ ನಡೆದು ಹೊಸ ಸರ್ಕಾರ ರಚನೆಯಾಗುವವರೆಗೂ ಸೋಷಿಯಲ್ ಡೆಮಾಕ್ರಟಿಕ್ ಪಕ್ಷದ ಸ್ಕೋಲ್ಟ್ ಅವರೇ ಹಂಗಾಮಿ ಸರ್ಕಾರದ ಮುಖ್ಯಸ್ಥರಾಗಿ ಮುಂದುವರಿಯಲಿದ್ದಾರೆ.**

# 2025ರಲ್ಲಿ 4 ಗ್ರಹಣ: ಭಾರತದಲ್ಲಿ ಒಂದು ಮಾತ್ರ ಗೋಚರ



**ಇಂದೋರ್:** 2025ರಲ್ಲಿ 4 ಗ್ರಹಣಗಳು ಸಂಭವಿಸಲಿದ್ದು, ಭಾರತದಲ್ಲಿ ಒಂದು ಮಾತ್ರ ಗೋಚರಿಸಲಿದೆ ಎಂದು ಉಜ್ಜೈನ್ ಮೂಲದ ಜಿವಾಜಿ ವೀಕ್ಷಣಾಲಯದ ಅಧಿಕಾರಿಗಳು ತಿಳಿಸಿದ್ದಾರೆ. ಎರಡು ಚಂದ್ರಗ್ರಹಣ ಮತ್ತು ಎರಡು ಸೂರ್ಯಗ್ರಹಣ ಸಂಭವಿಸಲಿದ್ದು, ಮಾರ್ಚ್ 14ರಿಂದ ಸಂಪೂರ್ಣ ಚಂದ್ರಗ್ರಹಣ ನಡೆಯಲಿದೆ. ಇದು ಬೆಳಗಿನ ವೇಳೆ ಸಂಭವಿಸುವುದರಿಂದ ಭಾರತದಲ್ಲಿ ಗೋಚರಿಸುವುದಿಲ್ಲ ಎಂದು ವೀಕ್ಷಣಾಲಯದ ಅಧೀಕ್ಷಕ ಡಾ. ರಾಜೇಂದ್ರ ಪ್ರಕಾಶ್ ಗುಪ್ತಾ ಹೇಳಿದ್ದಾರೆ.

ಸೆಪ್ಟೆಂಬರ್ 7 ಮತ್ತು 8ರ ನಡುವೆ ಸಂಭವಿಸುವ ಪೂರ್ಣ ಚಂದ್ರಗ್ರಹಣವು ದೇಶದಲ್ಲಿ ಗೋಚರಿಸುತ್ತದೆ ಎಂಬ ಅಂಶದಿಂದ ಭಾರತೀಯ ಖಗೋಳ ಪ್ರೇಮಿಗಳು ಉತ್ಸುಕರಾಗಬಹುದು. ಇದು ಏಷ್ಯಾದ ಇತರ ದೇಶಗಳ ಜೊತೆಗೆ ಯುರೋಪ್, ಅಂಟಾರ್ಟಿಕಾ, ಪಶ್ಚಿಮ ಪೆಸಿಫಿಕ್ ಮಹಾಸಾಗರ, ಆಸ್ಟ್ರೇಲಿಯಾ ಮತ್ತು ಹಿಂದೂ ಮಹಾಸಾಗರ ಪ್ರದೇಶದಲ್ಲಿಯೂ ಗೋಚರಿಸುತ್ತದೆ' ಎಂದು ಗುಪ್ತಾ ಹೇಳಿದ್ದಾರೆ. 2025ರ ಕೊನೆಯ ಗ್ರಹಣವು ಸೆಪ್ಟೆಂಬರ್ 21 ಮತ್ತು 22ರ ನಡುವೆ ಭಾಗಶಃ ಸೂರ್ಯಗ್ರಹಣವಾಗಿರುತ್ತದೆ. ಭಾರತದಲ್ಲಿ ಈ ಖಗೋಳ ವಿಸ್ಮಯ ವೀಕ್ಷಿಸಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

ಈ ಭಾಗಶಃ ಸೂರ್ಯಗ್ರಹಣವು ನ್ಯೂಜಿಲೆಂಡ್, ಪೂರ್ವ ಮೆಲನೇಷಿಯಾ, ದಕ್ಷಿಣ ಪಾಲಿನೇಷ್ಯಾ ಮತ್ತು ಪಶ್ಚಿಮ ಅಂಟಾರ್ಟಿಕಾದಲ್ಲಿ ಗೋಚರಿಸುತ್ತದೆ' ಎಂದು ತಿಳಿಸಿದ್ದಾರೆ.

**ಅಮೆರಿಕ, ಪಶ್ಚಿಮ ಯೂರೋಪ್, ಪಶ್ಚಿಮ ಆಫ್ರಿಕಾ ಮತ್ತು ದಕ್ಷಿಣ ಹಾಗೂ ಉತ್ತರ ಅಂಟ್ಲಾಮಟಿಕ್ ಮಹಾಸಾಗರದ ಬಳಿ ಸಂಪೂರ್ಣ ಗ್ರಹಣ ಗೋಚರಿಸಲಿದೆ. ಮಾರ್ಚ್ 29ರಂದು ಭಾಗಶಃ ಸೂರ್ಯಗ್ರಹಣ ಇರುತ್ತದೆ. ಭಾರತದಲ್ಲಿ ಕಾಣು ವುದಿಲ್ಲ. ಉತ್ತರ ಅಮೆರಿಕ, ಗ್ರೀನ್‌ಲ್ಯಾಂಡ್, ಐಸ್‌ಲ್ಯಾಂಡ್, ಉತ್ತರ ಅಟ್ಲಾಂಟಿಕ್ ಮಹಾಸಾಗರ, ಇಡೀ ಯುರೋಪ್ ಮತ್ತು ವಾಯುವ್ಯ ರಷ್ಯಾದಲ್ಲಿ ಗ್ರಹಣ ಗೋಚರಿಸಲಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.**

# ಬಾಂಬ್ ದಾಳಿಯಿಂದ ಡಬ್ಲ್ಯುಎಚ್ ಒ ಮುಖ್ಯಸ್ಥರು ಬಚಾವ್



**ಜಿನೇವಾ:** ಇಸ್ರೇಲ್ ವೈಮಾನಿಕ ದಾಳಿಯ ಸಮಯದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಮಹಾನಿರ್ದೇಶಕ ಟೆಡ್ರೊಸ್ ಅಧಾನಮ್ ಘೆಬ್ರೆಯೆಸಸ್ ಮತ್ತು ವಿಶ್ವಸಂಸ್ಥೆಯ ಸಿಬ್ಬಂದಿ ಸನಾದಲ್ಲಿರುವ ಯೆಮೆನ್‌ನ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇದ್ದರು.ಕೆಲವೇ ಕ್ಷಣದಲ್ಲಿ ಬಾಂಬ್ ದಾಳಿಯಿಂದ ಬಚಾವ್ ಆಗಿದ್ದಾರೆ ಎನ್ನುವ ಸಂಗತಿ ಬಯಲಾಗಿದೆ.

ಇಸ್ರೇಲ್‌ನ ವೈಮಾನಿಕ ಬಾಂಬ್ ದಾಳಿಗೆ ಒಳಗಾದಾಗ ಸಂದರ್ಭದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಮುಖ್ಯಸ್ಥರು ಮತ್ತು ವಿಶ್ವಸಂಸ್ಥೆಯ ಸಿಬ್ಬಂದಿ ವಿಮಾನ ಹತ್ತಲು ನಿನ್ನೆ ವಿಮಾನ ನಿಲ್ದಾಣದಲ್ಲಿದ್ದರು ಎಂದು ಹೇಳಲಾಗಿದೆ.

ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಸಿಬ್ಬಂದಿಯೊಬ್ಬರು ಗಾಯಗೊಂಡಿದ್ದು , ವಿಮಾನ ನಿಲ್ದಾಣದಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ. ಹೌತಿ-ಚಾಲಿತ ಮಾಧ್ಯಮಗಳ ಪ್ರಕಾರ ವೈಮಾನಿಕ ದಾಳಿಯ ವೇಳೆ ವಿದ್ಯುತ್ ಕೇಂದ್ರಗಳು ಮತ್ತು ಬಂದರುಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆ. ಈ ವೇಳೆ ಹತ್ತಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ ಮತ್ತು ಕನಿಷ್ಠ ಮೂವರು ಸಾವನ್ನಪ್ಪಿದ್ದಾರೆ.

ದಾಳಿಯ ಹೊಣೆಯನ್ನು ಇಸ್ರೇಲ್ ವಹಿಸಿಕೊಂಡ ನಂತರ ಇರಾನ್ ಬೆಂಬಲಿತ ಬಂಡುಕೋರ ಗುಂಪು ದಾಳಿಯನ್ನು ''ಅನಾಗರಿಕ'' ಎಂದು ವಿವರಿಸಿದೆ.

ಮೃತರು ನಾಗರಿಕರೇ ಅಥವಾ ಹೌತಿ ಬಂಡುಕೋರರೇ ಎಂಬುದು ಸ್ಪಷ್ಟವಾಗಿಲ್ಲ. ಈ ಕುರಿತು ಮಾಹಿತಿ ಹಂಚಿಕೊಂಡಿರುವ ಇಸ್ರೇಲ್ ರಕ್ಷಣಾ ಪಡೆಗಳು ಯುದ್ಧ ವಿಮಾನಗಳು ಪಶ್ಚಿಮ ಕರಾವಳಿ ಮತ್ತು ಒಳನಾಡಿನ ಯೆಮೆನ್‌ನಲ್ಲಿರುವ ಹೌತಿ ಭಯೋತ್ಪಾದಕ ಆಡಳಿತಕ್ಕೆ ಸೇರಿದ ಮಿಲಿಟರಿ ಗುರಿಗಳ ಮೇಲೆ ಗುಪ್ತಚರ ಆಧಾರಿತ ದಾಳಿಗಳನ್ನು ನಡೆಸಿದೆ'' ಎಂದು ಹೇಳಿದೆ. ಸನಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ''ಮಿಲಿಟರಿ ಮೂಲಸೌಕರ್ಯ'' ಮತ್ತು ಹೆಜಿಯಾಜ್ ಮತ್ತು ರಾಸ್ ಕನಾಟಿಬ್ ವಿದ್ಯುತ್ ಕೇಂದ್ರಗಳು ಮತ್ತು ಪಶ್ಚಿಮ ಕರಾವಳಿಯ ಅಲ್-ಹುದ್ಯೆದಾ, ಸಲೀಫ್ ಮತ್ತು ರಾಸ್ ಕನಾಟಿಬ್ ಬಂದರುಗಳಲ್ಲಿನ ಸೈಟ್‌ಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಹೇಳಿದೆ.

ವೈಮಾನಿಕ ದಾಳಿಯ ಸ್ವಲ್ಪ ಸಮಯದ ನಂತರ ಇಸ್ರೇಲ್‌ನ ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹು ಪ್ರತಿಕ್ರಿಯೆ ನೀಡಿ ''ನಾವು ಕೆಲಸವನ್ನು ಪೂರ್ಣಗೊಳಿಸುವವರೆಗೆ ಇರಾನಿನ ದುಷ್ಟ ಅಕ್ಷದ ಭಯೋತ್ಪಾದಕ ತೋಳನ್ನು ಕತ್ತರಿಸುವುದನ್ನು ಮುಂದುವರಿಸುತ್ತೇವೆ'' ಎಂದು ಹೇಳಿದ್ದಾರೆ.

ಡಾ ಅಬ್ಬಾಸ್ ರಾಜೇ ಎಂದು ಗುರುತಿಸಿಕೊಂಡ ಒಬ್ಬ ವ್ಯಕ್ತಿ, ದಾಳಿಯ ನಂತರ 10 ರೋಗಿಗಳಿಗೆ ಚಿಕಿತ್ಸೆ ನೀಡುತ್ತಿರುವ ಪೊಲೀಸ್ ಆಸ್ಪತ್ರೆಯಲ್ಲಿ ಅವರು ಕೆಲಸ ಮಾಡುತ್ತಾರೆ ಒಬ್ಬರು ಈಗಾಗಲೇ ಸಾವನ್ನಪ್ಪಿದ್ದಾರೆ, ಇನ್ನೊಬ್ಬರು ಗಂಭೀರ ಸ್ಥಿತಿಯಲ್ಲಿದ್ದಾರೆ ಮತ್ತು ಇತರರಿಗೆ ಸಣ್ಣಪುಟ್ಟ ಗಾಯಗಳು ಅಥವಾ ಮೂಳೆ ಮುರಿದಿದೆ ಎಂದು ಹೇಳಲಾಗಿದೆ. 2023ರ ಅಕ್ಟೋಬರ್‌ನಲ್ಲಿ ಪ್ರಾರಂಭವಾದ ಗಾಜಾ ಯುದ್ಧದ ಮೊದಲ ತಿಂಗಳಿನಿಂದ ಹೌತಿ ಬಂಡುಕೋರರು ಇಸ್ರೇಲ್ ಮೇಲೆ ದಾಳಿ ಮಾಡುತ್ತಿದ್ದಾರೆ.ಕಳೆದ ವಾರ ಇಸ್ರೇಲ್‌ನಲ್ಲಿ ಹೌತಿ ಕ್ಷಿಪಣಿ ದಾಳಿಯಿಂದ ಹನ್ನೆರಡಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ಪ್ರತೀಕಾರವಾಗಿ ಇಸ್ರೇಲ್ ಹೌತಿಗಳ ವಿರುದ್ಧ ಮಧ್ಯಂತರ ದಾಳಿಗಳನ್ನು ನಡೆಸಿದೆ. ಈ ವಾರದ ಆರಂಭದಲ್ಲಿ, ಇಸ್ರೇಲ್‌ನ ರಕ್ಷಣಾ ಸಚಿವರು ಹೌತಿ ಬಂಡುಕೋರರ ಮೇಲೆ ''ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಹೇಳಿದ್ದಾರೆ.

**ಹೌತಿಗಳ ಸರ್ವೋಚ್ಚ ಕ್ರಾಂತಿಕಾರಿ ಸಮಿತಿಯ ಮುಖ್ಯಸ್ಥ ಮೊಹಮ್ಮದ್ ಅಲಿ ಅಲ್-ಹೌತಿ ಅವರು ಮುಷ್ಕರಗಳನ್ನು ಅನಾಗರಿಕ, ಆಕ್ರಮಣಕಾರಿ ಎಂದು ಕರೆದಿದ್ದಾರೆ. ಗಾಜಾದಲ್ಲಿನ ಸಂಘರ್ಷ ನಿಲ್ಲುವವರೆಗೂ ಅಮೆರಿಕ, ಇಸ್ರೇಲಿ ದುರಹಂಕಾರದೊಂದಿಗಿನ ಮುಖಾಮುಖಿ ಮುಂದುವರಿಯುತ್ತದೆ ಎಂದಿದ್ದಾರೆ.**

# ಬರೋಬ್ಬರಿ 49 ವರ್ಷಗಳ ಬಳಿಕ ಕುಟುಂಬ ಸೇರಿದ ಮಹಿಳೆ



**ಲಖನೌ:** 49 ವರ್ಷಗಳ ಹಿಂದೆ ಬಾಲ್ಯಾವಸ್ಥೆಯಲ್ಲಿದ್ದಾಗ ಕಾಣೆಯಾಗಿದ್ದ ಮಹಿಳೆಯೊಬ್ಬರನ್ನು ಇದೀಗ ಕುಟುಂಬದೊಂದಿಗೆ ಮತ್ತೆ ಸೇರಿಸುವ ಮೂಲಕ ಉತ್ತರ ಪ್ರದೇಶದ ಅಜಂಗಢ ಪೊಲೀಸರು ಭಾವನಾತ್ಮಕ ಕ್ಷಣಗಳಿಗೆ ಸಾಕ್ಷಿಯಾದರು.

57 ವರ್ಷದ ಫುಲ್ಮತಿ ಅಲಿಯಾಸ್ ಫುಲಾ ದೇವಿ ಅವರು ಮೊರಾದಾಬಾದ್ ಜಾತ್ರೆಯಲ್ಲಿ 8 ವರ್ಷ ವಯಸ್ಸಿನವರಿದ್ದಾಗ ನಾಪತ್ತೆಯಾಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ತಾಯಿಯೊಂದಿಗೆ ಜಾತ್ರೆಗೆ ಹೋಗಿದ್ದ ಫುಲಾ ದೇವಿ ನಾಪತ್ತೆಯಾಗಿದ್ದರು. ಆ ಸಂದರ್ಭದಲ್ಲಿ ವೃದ್ಧರೊಬ್ಬರು ಆಕೆಯನ್ನು ಕರೆದೊಯ್ದದ್ದು ಆಕೆಯನ್ನು ರಾಂಪುರದ ನಿವಾಸಿಗೆ ಮಾರಾಟ ಮಾಡಿದ್ದರು. ಬಳಿಕ ಫುಲ್ಮತಿ ಅಲ್ಲಿಯೇ ಬದುಕು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದಳು. ಆದರೆ ಆಕೆ ತನ್ನ ಕುಟುಂಬದ ಹುಡುಕಾಟದಲ್ಲಿ ಇದ್ದಳು ಎಂದು ಪೊಲೀಸರು ತಿಳಿಸಿದ್ದಾರೆ.

ಆಪರೇಷನ್ ಮುಸ್ಕಾನ್' ಕಾರ್ಯಕ್ರಮದ ಅಡಿಯಲ್ಲಿ ಆಕೆಯನ್ನು ಕುಟುಂಬಕ್ಕೆ ಮತ್ತೆ ಸೇರಿಸುವ ಪ್ರಕ್ರಿಯೆ ಭಾಗವಾಗಿ ಈ ಕಾರ್ಯಾ ಚರಣೆ ನಡೆಸಲಾಯಿತು ಎಂದು ಪೊಲೀಸ್ ಸೂಪರಿಂಟೆಂಡೆಂಟ್ ಹೇಮರಾಜ್ ಮೀನಾ ಹೇಳಿದ್ದಾರೆ.

ರಾಂಪುರದ ಶಾಲಾ ಶಿಕ್ಷಕಿ ಡಾ.ಪೂಜಾ ರಾಣಿ ಅವರು ಹೆಚ್ಚುವರಿ ಎಸ್ಪಿ ಶೈಲೇಂದ್ರ ಲಾಲ್ ಅವರಿಗೆ ಫುಲ್ಮತಿ ನಾಪತ್ತೆಯಾಗಿದ್ದ ಬಗ್ಗೆ ತಿಳಿಸಿದಾಗ ಈ ಪ್ರಕರಣ ಬೆಳಕಿಗೆ ಬಂದಿದೆ. ಇದೇ ವೇಳೆ ಫುಲ್ಮತಿ ಹಲವಾರು ವರ್ಷಗಳಿಂದ ಕುಟುಂಬದ ಹುಡುಕಾಟದಲ್ಲಿ ಇದ್ದಾರೆ ಎಂದೂ ಶಿಕ್ಷಕಿ ವಿವರಿಸಿದ್ದಾರೆ ತನಿಖೆಯನ್ನು ಆರಂಭಿಸಿದ ಪೊಲೀಸರು ಫುಲ್ಮತಿ ಚಿಕ್ಕಪ್ಪನ ವಿಳಾಸವನ್ನು ಪತ್ತೆ ಮಾಡಿದರು.

ಬಳಿಕ ಆಕೆಯ ಸಹೋದರ ಲಾಲ್‌ಧರ್‌ನನ್ನು ಅಜಂಗಡ್ ಜಿಲ್ಲೆಯ ಬೇಡ್‌ಪುರ್ ಗ್ರಾಮ ದಲ್ಲಿರುವುದನ್ನು ಪತ್ತೆ ಹಚ್ಚಲಾಯಿತು. 49 ವರ್ಷಗಳ ಬಳಿಕ ಆಕೆಗೆ ಕುಟುಂಬ ಸಿಕ್ಕಿದೆ. ದಶಕಗಳ ನಂತರ ಕುಟುಂಬವನ್ನು ಒಟ್ಟಿಗೆ ನೋಡುವುದು ಹೃದಯಸ್ಪರ್ಶಿಯಾಗಿದೆ ಎಂದು ಮೀನಾ ಸಂತಸ ಹಂಚಿಕೊಂಡಿದ್ದಾರೆ. ಫುಲ್ಮತಿ ಮತ್ತು ಆಕೆಯ ಕುಟುಂಬದವರು ಪೊಲೀಸರ ಸಮರ್ಪಣಾ ಮನೋಭಾವಕ್ಕೆ ಪ್ರಶಂಸೆ ಜತೆಗೆ ಧನ್ಯವಾದ ಅರ್ಪಿಸಿದ್ದಾರೆ.

# ಉತ್ತರ ಪ್ರದೇಶ ಮಹಿಳೆಯರಿಗೆ ಸುರಕ್ಷಿತವಲ್ಲ



**ಲಖನೌ:** ರಾಜ್ಯದ ಕಾನೂನು ಸುವ್ಯವಸ್ಥೆ ಕುರಿತು ಉತ್ತರ ಪ್ರದೇಶ ರಾಜ್ಯಪಾಲರಾದ ಆನಂದಿಬೆನ್ ಪಟೇಲ್ ಅವರು ನೀಡಿರುವ ಹೇಳಿಕೆಗೆ ಆಕ್ರೋಶ ವ್ಯಕ್ತಪಡಿಸಿರುವ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ರಾಜಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ್ದ ಪಟೇಲ್, 'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸುಧಾರಿಸಿದೆ. ಆದರೆ, ಮಹಿಳೆಯರಿಗೆ ಶೇ 100ರಷ್ಟು ಸುರಕ್ಷಿತ ಎಂದು ಕರೆಯಲು ಇನ್ನೂ ಸಮಯವಿದೆ' ಎಂದು ಹೇಳಿಕೆ ನೀಡಿದ್ದರು. ರಾಜ್ಯಪಾಲರು ಶೇ 100ರಷ್ಟು 'ಸತ್ಯ ವಚನ'ಗಳನ್ನು ಹೇಳಿದ್ದಾರೆ' ಎಂದು ಅಖಿಲೇಶ್ ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಮಹಿಳೆಯರು ಸಂಸತ್ತಿನಲ್ಲಿ ಚರ್ಚೆ ನಡೆಸುವಂತಾಗಬೇಕು. ಅವರ ಗಂಡಂದಿರು ಅಡುಗೆ ಮಾಡಿ ಮನೆಯಲ್ಲಿ ಅವರಿಗಾಗಿ ಕಾಯಬೇಕು. ಅಂತಹ ದಿನ ಬರಲಿ ಎಂದು ಆಶಿಸುತ್ತೇನೆ ಎಂದು ಪಟೇಲ್ ಅವರು ಹೇಳಿದ್ದಾರೆ.

**'ಉತ್ತರ ಪ್ರದೇಶದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವ ಮೊದಲು, ಸಂಜೆ 5 ಗಂಟೆಯ ನಂತರ ಮಹಿಳೆಯರು ಹೊರಗೆ ಹೋಗುವುದು ಕಷ್ಟಕರವಾಗಿತ್ತು. ಈಗ ಉತ್ತರ ಪ್ರದೇಶದ ಪರಿಸ್ಥಿತಿಯು ಕಾನೂನು ಮತ್ತು ಸುವ್ಯವಸ್ಥೆಯ ವಿಷಯದಲ್ಲಿ ಹೆಚ್ಚು ಸುಧಾರಿಸಿದೆ. ಆದರೆ, ರಾಜ್ಯವು ಶೇ 100ರಷ್ಟು ಸುರಕ್ಷಿತವಾಗಿದೆಯೇ ಎಂದು ನನ್ನನ್ನು ಕೇಳಿದರೆ, ಅದಕ್ಕಾಗಿ ಇನ್ನೂ ಮಾಡಬೇಕಾದ ಕೆಲವು ಕೆಲಸಗಳಿವೆ' ಎಂದು ಪಟೇಲ್ ತಿಳಿಸಿದ್ದಾರೆ.**

# ಮಧ್ಯಮ ವರ್ಗಕ್ಕೆ ಬಜೆಟ್‌ನಲ್ಲಿ ಆದಾಯ ತೆರಿಗೆ ರಿಲೀಫ್

## ಆರ್ಥಿಕತೆಗೆ ಬೂಸ್ಟ್ ನೀಡಲು ಕ್ರಮ ಕೈಗೊಳ್ಳಲು ಆರ್ಥಿಕ ತಜ್ಞರ ಸಲಹೆ, ಜನರ ಕೈಯಲ್ಲಿ ಹೆಚ್ಚಿನ ಹಣ ಉಳಿಸುವ ಮೂಲ ಬೇಡಿಕೆಗೆ ಉತ್ತೇಜನ



**ತೆರಿಗೆ ವಿನಾಯಿತಿ ಹೆಚ್ಚಳ**

**ಹೊಸದಿಲ್ಲಿ:** ಮಧ್ಯಮ ವರ್ಗದವರಿಗೆ ತೆರಿಗೆ ಹೊರೆಯನ್ನು ತಪ್ಪಿಸುವ ಮತ್ತು ಮಂದಗತಿಯ ಆರ್ಥಿಕತೆಗೆ ವೇಗ ನೀಡುವ ನಿಟ್ಟಿನಲ್ಲಿ ವಿತ್ತ ಸಚಿವಾಲಯವು ಈ ಬಾರಿ ಬಜೆಟ್‌ನಲ್ಲಿ ತೆರಿಗೆ ರಿಲೀಫ್ ಪ್ರಕಟಿಸುವ ಸಾಧ್ಯತೆಯಿದೆ.

ವಾರ್ಷಿಕ 15 ಲಕ್ಷ ರೂ.ವರೆಗೆ ವರಮಾನ ಹೊಂದಿರುವವರಿಗೆ ತೆರಿಗೆ ಹೊರೆಯನ್ನು ಕಡಿಮೆ ಮಾಡುವ ಸಾಧ್ಯತೆಯಿದೆ. ತೆರಿಗೆ ವಿನಾಯಿತಿ ಮಿತಿ ಹೆಚ್ಚಳ ಅಥವಾ ತೆರಿಗೆ ದರಗಳ ಕಡಿತದ ಮೂಲಕ ಈ ಅನುಕೂಲ ಒದಗಿಸುವ ಸಂಭವವಿದೆ. ಆದರೆ ''ಕಡಿತದ ಪ್ರಮಾಣ ಎಷ್ಟೆಂಬುದು ಇನ್ನೂ ನಿರ್ಧಾರವಾಗಿಲ್ಲ. ಫೆಬ್ರವರಿ 1ರಂದು 2025-26ನೇ ಸಾಲಿನ ಬಜೆಟ್ ಮಂಡನೆಯಾಗಲಿದ್ದು, ಅಷ್ಟರ ಒಳಗಾಗಿ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆ ಇದೆ. ಇದರಿಂದ ಬೊಕ್ಕಸಕ್ಕೆ ಎಷ್ಟು ನಷ್ಟವಾಗಲಿದೆ ಎಂಬುದನ್ನು ಈವರೆಗೂ ಅಂದಾಜಿಸಿಲ್ಲ, ಎಂದು ಮೂಲಗಳು ತಿಳಿಸಿವೆ. ಈ ಕ್ರಮ ಕೈಗೊಂಡಲ್ಲಿ ನಗರ ಪ್ರದೇಶದ ದುಬಾರಿ ಜೀವನ ವೆಚ್ಚದಿಂದ ತತ್ತರಿಸಿರುವ ಕೋಟ್ಯಂತರ ಸಂಬಳ ದಾರರಿಗೆ ಪ್ರಯೋಜನವಾಗಲಿದೆ.

**ಆರ್ಥಿಕತೆ ಮಂದಗತಿ:** ದಾಖಲೆ ಮಟ್ಟಕ್ಕೆ ಜಿಗಿದ ಹಣದುಬ್ಬರ, ಬೇಡಿಕೆ ಕುಸಿತ, ಕೈಗಾರಿಕಾ ಉತ್ಪಾದನಾ ಕುಸಿತದಿಂದ ಆರ್ಥಿಕತೆ ಪ್ರಗತಿ ಮಂದವಾಗಿದೆ. ಇತ್ತೀಚೆಗೆ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ 2024-25ನೇ ಸಾಲಿನ ಭಾರತದ ಜಿಡಿಪಿ ಅಂದಾಜು ಬೆಳವಣಿಗೆ ದರವನ್ನು ಶೇ. 7ರಿಂದ ಶೇ. 6.5ಕ್ಕೆ ಇಳಿಸಿದೆ. ರಿಸರ್ವ್ ಬ್ಯಾಂಕ್ ಸಹ ಅಂದಾಜು ಆರ್ಥಿಕ ಪ್ರಗತಿ ದರವನ್ನು ಶೇ. 7.2ರಿಂದ ಶೇ. 6.6ಕ್ಕೆ ಇಳಿಸಿದೆ. ಈ ಹಿನ್ನೆಲೆಯಲ್ಲಿ, ಜನರ ಕೈಯಲ್ಲಿ ಹೆಚ್ಚಿನ ಹಣ ಉಳಿಸುವ ಮೂಲ ಬೇಡಿಕೆಗೆ ಉತ್ತೇಜನ ನೀಡಲು ಸರಕಾರ ಕ್ರಮ ಕೈಗೊಳ್ಳುವ ಸಾಧ್ಯತೆಯಿದೆ ಎಂದು ತಜ್ಞರು ಹೇಳಿದ್ದಾರೆ.

**ಪ್ರಧಾನಿಗೆ ಅರ್ಥಶಾಸ್ತ್ರಜ್ಞರ ಸಲಹೆ:** ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ಮಂಗಳವಾರ ಪ್ರಮುಖ ಅರ್ಥಶಾಸ್ತ್ರಜ್ಞರ ಜತೆ ಬಜೆಟ್ ಪೂರ್ವ ಸಭೆ ನಡೆಸಿದ್ದು, ಈ ವೇಳೆ ಆರ್ಥಿಕ ತಜ್ಞರು ಸಹ ತೆರಿಗೆ ಹೊರೆ ಇಳಿಸುವ ಮೂಲಕ ಜನರ ಜೀವನ ಸುಗಮಗೊಳಿಸಬೇಕೆಂದು ಸಲಹೆ ನೀಡಿದ್ದಾರೆ ಎಂದು ತಿಳಿದುಬಂದಿವೆ.

### ಶೀಘ್ರದಲ್ಲೇ ಸಮಿತಿ ವರದಿ

**ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆದಾಯ ತೆರಿಗೆ ಕಾಯಿದೆಯ ಸಮಗ್ರ ಮರುಪರಿಶೀಲನೆ ಮಾಡುವುದಾಗಿ ಕಳೆದ ಜುಲೈನಲ್ಲಿ ಮಂಡಿಸಿದ 2024-25ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದರು. ಇದರ ಭಾಗವಾಗಿ, ಆದಾಯ ತೆರಿಗೆ ಮುಖ್ಯ ಆಯುಕ್ತ ವಿ.ಕೆ. ಗುಪ್ತಾ ನೇತೃತ್ವದಲ್ಲಿ ಪರಿಶೀಲನಾ ಸಮಿತಿಯನ್ನು ರಚನೆ ಮಾಡಿದ್ದರು. ಈ ಸಮಿತಿಯು ಫೆಬ್ರವರಿಯಲ್ಲಿ ಬಜೆಟ್ ಮಂಡನೆಗೆ ಮುನ್ನ ತನ್ನ ಶಿಫಾರಸು ವರದಿಯನ್ನು ಸರಕಾರಕ್ಕೆ ಸಲ್ಲಿಸುವ ಸಾಧ್ಯತೆಯಿದೆ. ಸಮಿತಿಯು ತೆರಿಗೆ ಪದ್ಧತಿಯನ್ನು ಮತ್ತಷ್ಟು ಸರಳೀಕರಿಸುವ ಬಗ್ಗೆ ಸಲಹೆ-ಸೂಚನೆಗಳನ್ನು ನೀಡುವ ಸಾಧ್ಯತೆಯಿದೆ.**

**ಇತ್ತ ಹೆಚ್ಚುತ್ತಿರುವ ನೇರ ಹಾಗೂ ಪರೋಕ್ಷ ತೆರಿಗೆ ಒಂದೆಡೆಯಾದರೆ, ಅತ್ತ ಆದಾಯ ತೆರಿಗೆ ಪಾವತಿ ದರದಲ್ಲಿ ಯಾವುದೇ ವಿನಾಯಿತಿ ನೀಡದೆ ಇರುವುದು ಜನಸಾಮಾನ್ಯರನ್ನು ಹೈರಾಣಾಗಿಸಿದೆ. ಪ್ರತಿ ಬಾರಿಯ ಬಜೆಟ್‌ನಲ್ಲಿಯೂ ಆದಾಯ ತೆರಿಗೆ ಮಿತಿ ಹೆಚ್ಚಿಸುವ ನಿರೀಕ್ಷೆಗಳು ಹುಸಿಯಾಗುತ್ತಿವೆ. ಆದರೆ ಈ ಬಾರಿ ಆದಾಯ ತೆರಿಗೆ ರಿಲೀಫ್ ನೀಡುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.**

## ಮಿನಿ ನ್ಯೂಸ್

### ಭಯೋತ್ಪಾದಕ ಸಂಘಟನೆ ಜೆಯುಡಿ ಉಪನಾಯಕ ಅಬ್ದುಲ್ ಸಾವು

**ಲಾಹೋರ್:** 2006ರ ಮುಂಬೈ ದಾಳಿಯ ರೂವಾರಿ, ಉಗ್ರ ಹಫೀಜ್ ಸಯೀದ್ ಅವರ ಸಂಬಂಧಿ ಮತ್ತು ನಿಷೇಧಿತ ಭಯೋತ್ಪಾದಕ ಸಂಘಟನೆ ಜಮಾತ್-ಉದ್-ದವಾ(ಜೆಯುಡಿ) ಉಪ ನಾಯಕ ಹಫೀಜ್ ಅಬ್ದುಲ್ ರಹಮಾನ್ ಮಕ್ಕಿ ಅವರು ಇಂದು ಹೃದಯಸ್ತಂಭನದಿಂದ ಮೃತ ಪಟ್ಟಿದ್ದಾನೆ. ಜೆಯುಡಿ ಪ್ರಕಾರ, ಅಬ್ದುಲ್ ರಹಮಾನ್ ಮಕ್ಕಿ ಕಳೆದ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದನು. ಮಧುಮೇಹ ಸಮಸ್ಯೆ ಬಿಗಡಾಯಿಸಿದ್ದರಿಂದ ಲಾಹೋರ್‌ನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದನು. ಮಕ್ಕಿಗೆ ಬೆಳಗ್ಗೆ ಹೃದಯಸ್ತಂಭನವಾಗಿದೆ. ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾನೆ ಎಂದು ಜೆಯುಡಿ ತಿಳಿಸಿದೆ. ಮಕ್ಕಿಗೆ ಭಯೋತ್ಪಾದನೆಗೆ ಹಣಕಾಸು ನೆರವು ನೀಡಿದ ಆರೋಪದಡಿ 2020ರಲ್ಲಿ ಭಯೋತ್ಪಾದನೆ ನಿಗ್ರಹ ನ್ಯಾಯಾಲಯ 6 ತಿಂಗಳ ಜೈಲು ಶಿಕ್ಷೆ ವಿಧಿಸಿತ್ತು. ಮಕ್ಕಿ ಪಾಕಿಸ್ತಾನ ಸಿದ್ಧಾಂತದ ಪ್ರತಿಪಾದಕರಾಗಿದ್ದರು ಎಂದು ಪಾಕಿಸ್ತಾನದ ಮುತಾಹಿದ ಮುಸ್ಲಿಂ ಲೀಗ್ (ಪಿಎಂಎಂಎಲ್) ಪ್ರಕಟಣೆಯಲ್ಲಿ ತಿಳಿಸಿದೆ. 2023ರಲ್ಲಿ ಮಕ್ಕಿಯನ್ನು ಜಾಗತಿಕ ಭಯೋತ್ಪಾದಕ ಎಂದು ವಿಶ್ವಸಂಸ್ಥೆ ಘೋಷಿಸಿತ್ತು. ಈ ಸಂಬಂಧ ಆತನ ಆಸ್ತಿ ಮುಟ್ಟುಗೋಲು, ಸಂಚಾರ ಮತ್ತು ಶಸ್ತ್ರಾಸ್ತ್ರ ಬಳಕೆಗೆ ನಿರ್ಬಂಧ ಹೇರಲಾಗಿತ್ತು.

### ಸೇತುವೆಯಿಂದ ಉರುಳಿದ ಬಸ್ ಎಂಟು ಮಂದಿ ಸಾವು

**ಬಟಿಂಡಾ:** ಪಂಜಾಬ್‌ನ ಬಟಿಂಡಾದಲ್ಲಿ ಸೇತುವೆ ಮೇಲಿಂದ ಬಸ್ ಉರುಳಿ ಎಂಟು ಮಂದಿ ಮೃತಪಟ್ಟಿದ್ದಾರೆ ಎಂದು ವರದಿಯಾಗಿದೆ. ಬಸ್ ತಲವಂಡಿ ಸಾಬೊ ಮಾರ್ಗವಾಗಿ ಬಟಿಂಡಾ ಕಡೆಗೆ ಸಂಚರಿಸುತ್ತಿದ್ದ ಸಂದರ್ಭದಲ್ಲಿ ಅವಘಡ ಸಂಭವಿಸಿದೆ. ಪೊಲೀಸರು ಹಾಗೂ ಸ್ಥಳೀಯರ ನೇತೃತ್ವದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಘಟನೆಯಲ್ಲಿ ಅನೇಕ ಮಂದಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರದೇಶದಲ್ಲಿ ಭಾರಿ ಮಳೆಯಾಗುತ್ತಿದೆ. ಇದು ಅವಘಡಕ್ಕೆ ಕಾರಣವಾಗಿರಬಹುದು ಎಂದು ಅಂದಾಜಿಸಲಾಗಿದೆ.

### ಚರ್ಚ್‌ನಲ್ಲಿ ಜೈ ಶ್ರೀರಾಮ್ ಘೋಷಣೆ: ವ್ಯಕ್ತಿ ವಿರುದ್ಧ ಪ್ರಕರಣ

**ಶಿಲ್ಲಾಂಗ್:** ಮೇಘಾಲಯದ ಪೂರ್ವ ಕಾಸಿ ಜಿಲ್ಲೆಯ ಚರ್ಚ್‌ಗೆ ಅತಿಕ್ರಮ ಪ್ರವೇಶ ಮಾಡಿ ಜೈ ಶ್ರೀರಾಮ್ ಎಂದು ಕೂಗುವ ಮೂಲಕ ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ ಆರೋಪದ ಮೇಲೆ ವ್ಯಕ್ತಿಯೊಬ್ಬರ ಮೇಲೆ ಮೇಘಾಲಯ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾವಿನ್ನಾಂಗ್ ಗ್ರಾಮದ ಚರ್ಚ್‌ಗೆ ಪ್ರವೇಶಿಸಿದ ವ್ಯಕ್ತಿ ಜೈ ಶ್ರೀರಾಮ್ ಎಂದು ಕೂಗಿದ್ದು, ಅದನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾನೆ ಎಂದು ಅಧಿಕಾರಿ ಹೇಳಿದ್ದಾರೆ. ಕೃತ್ಯವನ್ನು ಖಂಡಿಸಿರುವ ಮೇಘಾಲಯ ಮುಖ್ಯಮಂತ್ರಿ ಸಿ.ಕೆ.ಸಂಗ್ಮಾ, 'ಜನರ ಶಾಂತಿ ಮತ್ತು ಸಹಬಾಳ್ವೆಯನ್ನು ಹಾಳುಮಾಡಲು ಉದ್ದೇಶಿಸಿರುವ ವ್ಯಕ್ತಿಯ ವಿರುದ್ಧ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದು. ಈ ಕೃತ್ಯವು ಉದ್ದೇಶಪೂರ್ವಕವಾಗಿ ತೋರುತ್ತಿದೆ.

ಸಾಮಾಜಿಕ, ಧಾರ್ಮಿಕ, ಕೋಮು ಸೌಹಾರ್ದ ಕದಡಲು ಪ್ರಯತ್ನಿಸುವವರ ವಿರುದ್ಧ ರಾಜ್ಯ ಸರ್ಕಾರ ಕಠಿಣ ಕ್ರಮ ತೆಗೆದುಕೊಳ್ಳುತ್ತದೆ' ಎಂದು ಹೇಳಿದ್ದಾರೆ. ಇನ್‌ಸ್ಟಾಗ್ರಾಮ್‌ನಲ್ಲಿ ಆಕಾಶ್ ಸಾಗರ್ ಎಂಬ ಹೆಸರಿರುವ ವ್ಯಕ್ತಿಯ ವಿರುದ್ಧ ಪಿನುರ್ಸ್ಲಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಆರೋಪಿಯನ್ನು ಬಂಧಿಸಲು ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಸಿಲ್ವೆಸ್ಟರ್ ನಾಂಗ್ಟಿಂಗರ್ ತಿಳಿಸಿದ್ದಾರೆ.

### ಗರ್ಭಿಣಿಗೆ 14 ಬಾರಿ ಚಾಕುವಿನಿಂದ ಇರಿದ ಪಿಜ್ಜಾ ಡೆಲಿವರಿ ವರ್ಕರ್

**ನ್ಯೂಯಾರ್ಕ್:** ಕೇವಲ 170 ಟಿಪ್ಸ್ ಕೊಟ್ಟರು ಎಂದು ಗರ್ಭಿಣಿಗೆ ಪಿಜ್ಜಾ ಡೆಲಿವರಿ ಕೆಲಸಗಾರ್ತಿ ಚಾಕುವಿನಿಂದ 14 ಬಾರಿ ಇರಿದಿರುವ ಘಟನೆ ಅಮೆರಿಕದ ಫ್ಲೋರಿಡಾದಲ್ಲಿ ನಡೆದಿದೆ. ಬ್ರಿಯಾನ್ನಾ ಅಲ್ವೆಲೊ (22) ಚಾಕುವಿನಿಂದ ಇರಿದ ಆರೋಪಿ. ಸಂತ್ರಸ್ತ ಮಹಿಳೆ ಕುಟುಂಬದವರು ಹುಟ್ಟುಹಬ್ಬದ ಸಂಭ್ರಮದಲ್ಲಿದ್ದರು. ಅದಕ್ಕಾಗಿ ಪಿಜ್ಜಾ ಆರ್ಡರ್ ಮಾಡಿದ್ದರು. ಆರ್ಡರ್ ತಂದುಕೊಟ್ಟ ಆರೋಪಿಯು ಕೇವಲ 2 ಡಾಲರ್ ಕೊಟ್ಟಿದ್ದಕ್ಕೆ ಚಾಕುವಿನಿಂದ ಗರ್ಭಿಣಿ ಮೇಲೆ ಹಲ್ಲೆ ನಡೆಸಿದ್ದಾಳೆ.

ದಾಳಿಯ ಸಮಯದಲ್ಲಿ ಸಂತ್ರಸ್ತ ಮಹಿಳೆ, ಆಕೆಯ ಗೆಳೆಯ ಮತ್ತು ಆಕೆಯ 5 ವರ್ಷದ ಮಗಳು ಮೋಟೆಲ್ ಕೋಣೆಯಲ್ಲಿದ್ದರು. ಆರೋಪಿ ಅಲ್ವೆಲೊ ಪಿಜ್ಜಾ ಡೆಲಿವರಿ ಮಾಡಿದ್ದಳು. ಒಟ್ಟು ಮೊತ್ತ 33 (ಸುಮಾರು ರೂ. 2,800) ಆಗಿತ್ತು. ಡೆಲಿವರಿ ವರ್ಕರ್‌ಗೆ ಕೇವಲ 2 ಅನ್ನು ನೀಡಿದ್ದರು. ಅದನ್ನು ಪಡೆದು ಹೋಗಿದ್ದ ಆರೋಪಿ ಮತ್ತೆ 90 ನಿಮಿಷಗಳ ನಂತರ ತನ್ನ ಕೆಂಪು ಟೊಯೋಟಾದಲ್ಲಿ ಮುಸುಕುಧಾರಿ ಸಹಚರನೊಂದಿಗೆ ಹಿಂದಿರುಗಿ ಮಹಿಳೆ ಮೇಲೆ ಹಲ್ಲೆ ನಡೆಸಿದ್ದಾಳೆ.

ಗರ್ಭಿಣಿಗೆ 14 ಬಾರಿ ಇರಿದು ಹಲ್ಲೆ ನಡೆಸಿದ್ದಾಳೆ. ವಿಷಯ ತಿಳಿದು ಪೊಲೀಸರು ಆಗಮಿಸುತ್ತಿದ್ದಂತೆ ಆರೋಪಿಗಳು ಪರಾರಿಯಾಗಿದ್ದಾರೆ. ಗಾಯಾಳು ಗರ್ಭಿಣಿಯನ್ನು ಹತ್ತಿರದ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ. ಆರೋಗ್ಯ ಸ್ಥಿರವಾಗಿದೆ ಎಂದು ತಿಳಿದುಬಂದಿದೆ. ಮರುದಿನ ಅಧಿಕಾರಿಗಳು ಆರೋಪಿತಳನ್ನು ಬಂಧಿಸಿದ್ದಾರೆ. ಕೊಲೆಯ ಯತ್ನ, ಬಂದೂಕಿನಿಂದ ಮನೆ ಮೇಲೆ ಆಕ್ರಮಣ ಕೇಸ್ ದಾಖಲಿಸಲಾಗಿದೆ. ಆಕೆಯನ್ನು ಬಾಂಡ್ ಇಲ್ಲದೆ ಓಸ್ಸಿಯೋಲಾ ಕೌಂಟಿ ಜೈಲಿನಲ್ಲಿ ಇರಿಸಲಾಗಿದೆ.

### ವಿಮಾನ ದುರಂತ ಅಜರ್‌ಬೈಜಾನ್‌ನಲ್ಲಿ ಶೋಕಾಚರಣೆ



**ಬಾಕು:** ವಿಮಾನ ಪತನಗೊಂಡು 38 ಜನರು ಮೃತಪಟ್ಟಿರುವ ಕಾರಣ ಅಜರ್‌ಬೈಜಾನ್‌ನಲ್ಲಿ ಗುರುವಾರ ದೇಶದಾದ್ಯಂತ ಶೋಕಾಚರಣೆ ಮಾಡಲಾಯಿತು. ರಾಷ್ಟ್ರಧ್ವಜವನ್ನು ಅರ್ಧದವರೆಗೆ ಕೆಳಗಿಳಿಸಿ, ಶೋಕಾಚರಣೆ ಮಾಡಲಾಯಿತು. ರಸ್ತೆಗಳಲ್ಲಿ ಕೆಲ ಹೊತ್ತು ವಾಹನ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು. ಅಜರ್‌ಬೈಜಾನ್ ಏರ್‌ಲೈನ್ಸ್ ವಿಮಾನಯಾನ ಕಂಪನಿಗೆ ಸೇರಿದ ವಿಮಾನವು ಕಜಕಸ್ತಾನದ ಅಕೌ ನಗರದಲ್ಲಿ ಅಪಘಾತಕ್ಕೀಡಾಗಿತ್ತು. ದುರಂತದಲ್ಲಿ 29 ಮಂದಿ ಗಾಯಗೊಂಡಿದ್ದು, ವಿಮಾನ ಪತನಕ್ಕೆ ಕಾರಣ ಏನೆಂದು ಪತ್ತೆಹಚ್ಚಲು ತನಿಖೆ ನಡೆಯುತ್ತಿದೆ.

# ಈ ವಾರ ಒಟಿಟಿಗೆ ಬಂದಿವೆ ಬೊಂಬಾಟ್ ಸಿನಿಮಾಗಳು



**ಯುವ ಜನರಿಗೆ ಹೆಚ್ಚು ಮನರಂಜನೆ**

ಈ ವಾರ ಸಿನಿಮಾ ಪ್ರೇಮಿಗಳಿಗೆ ಒಳ್ಳೆಯ ವಾರ. ಚಿತ್ರಮಂದಿರದಲ್ಲಿ ಈ ವಾರ ಕೆಲವು ಒಳ್ಳೆಯ ಸಿನಿಮಾಗಳು ಬಿಡುಗಡೆ ಆಗಿವೆ. ಇದೇ ವಾರ ಒಟಿಟಿಯಲ್ಲಿಯೂ ಸಹ ಕೆಲವು ಬಹಳ ಒಳ್ಳೆಯ ಸಿನಿಮಾ ಹಾಗೂ ವೆಬ್ ಸರಣಿಗಳು ಬಿಡುಗಡೆ ಆಗಿವೆ. ಬಾಕ್ಸ್ ಆಫೀಸ್‌ನಲ್ಲಿ ಭರ್ಜರಿ ಹಿಟ್ ಆದ ಸಿನಿಮಾಗಳು ಕೆಲವು ಒಟಿಟಿಯಲ್ಲಿ ಈ ವಾರ ತೆರೆಗೆ ಬರುತ್ತಿವೆ. ಈ ವಾರ ಸಿನಿಮಾ ಪ್ರೇಮಿಗಳಿಗೆ ಹಬ್ಬ. ಚಿತ್ರಮಂದಿರದಲ್ಲಿ ಕೆಲ ಒಳ್ಳೆಯ ಸಿನಿಮಾಗಳು ಪ್ರದರ್ಶನ ಕಾಣುತ್ತಿವೆ. ಸುದೀಪ್ ನಟನೆಯ 'ಮ್ಯಾಕ್ಸ್', ಉಪೇಂದ್ರ ನಟಿಸಿ, ನಿರ್ದೇಶಿಸಿರುವ 'ಯುಐ' ಸಿನಿಮಾಗಳು ಚಿತ್ರಮಂದಿರದಲ್ಲಿ ಒಳ್ಳೆಯ ಪ್ರದರ್ಶನ ಕಾಣುತ್ತಿವೆ. ಇದರ ಜೊತೆಗೆ ತೆಲುಗಿನ 'ಪುಷ್ಪ 2' ತಮಿಳಿನ 'ವಿಡುದಲೈ 2' ಸಿನಿಮಾಗಳು ಸಹ ಚಿತ್ರಮಂದಿರದಲ್ಲಿವೆ. ಇದರ ನಡುವೆ ಒಟಿಟಿಯಲ್ಲಿಯೂ ಸಹ ಈ ವಾರ ಕೆಲವು ಒಳ್ಳೆಯ ಸಿನಿಮಾ ಹಾಗೂ ವೆಬ್ ಸರಣಿಗಳು ಬಿಡುಗಡೆ ಕಂಡಿವೆ. ಆ ಮೂಲಕ ಸಿನಿಮಾ ಪ್ರೇಮಿಗಳಿಗೆ ಈ ವಾರ ಬೊಂಬಾಟ್ ಸಿನಿಮಾಗಳು ವೀಕ್ಷಣೆಗೆ ಲಭ್ಯವಿವೆ.

ಸಿಂಘಂ ಅಗೇನ್ ಅಜಯ್ ದೇವಗನ್, ಅಕ್ಷಯ್ ಕುಮಾರ್, ರಣ್ವೀರ್ ಸಿಂಗ್, ದೀಪಿಕಾ ಪಡುಕೋಣೆ, ಕರೀನಾ ಕಪೂರ್, ಟೈಗರ್ ಶ್ರಾಫ್, ಅರ್ಜುನ್ ಕಪೂರ್ ಸೇರಿದಂತೆ ಹಲವು ಬಾಲಿವುಡ್ ಸ್ಟಾರ್‌ಗಳು ನಟಿಸಿ, ರೋಹಿತ್ ಶೆಟ್ಟಿ ನಿರ್ದೇಶನ ಮಾಡಿರುವ 'ಸಿಂಘಂ ಅಗೇನ್' ಅಮೆಜಾನ್ ಪ್ರೈಂನಲ್ಲಿ ಬಿಡುಗಡೆ ಆಗಿದೆ. ರಾಮಾಯಣದ ಕತೆಯ ಹೋಲಿಕೆಯೊಂದಿಗೆ ಮಾಡಲಾಗಿರುವ ಸಿನಿಮಾ ಇದಾಗಿದೆ. ಬಾಕ್ಸ್ ಆಫೀಸ್‌ನಲ್ಲಿ ಸಿನಿಮಾ ಉತ್ತಮ ಕಲೆಕ್ಷನ್ ಮಾಡಿತ್ತು. ಭೂಲ್ ಭುಲಯ್ಯ 3 'ಸಿಂಘಂ ಅಗೇನ್' ಸಿನಿಮಾ ಬಿಡುಗಡೆ ಆದ ದಿನವೇ ಬಿಡುಗಡೆ ಆಗಿದ್ದ 'ಭೂಲ್ ಭುಲಯ್ಯ 3' ಸಿನಿಮಾ ಸಹ ಬಾಕ್ಸ್ ಆಫೀಸ್‌ನಲ್ಲಿ ಉತ್ತಮ ಕಲೆಕ್ಷನ್ ಮಾಡಿತ್ತು. ಬಾಕ್ಸ್ ಆಫೀಸ್‌ನಲ್ಲಿ ಪರಸ್ಪರ ಸ್ಪರ್ಧೆಗೆ ಇಳಿದಿದ್ದ ಈ ಎರಡು ಸಿನಿಮಾಗಳು ಈಗ ಒಟಿಟಿಯಲ್ಲಿಯೂ ಸ್ಪರ್ಧೆಗೆ ಇಳಿದಿವೆ. 'ಸಿಂಘಂ ಅಗೇನ್' ಒಟಿಟಿಗೆ ಬಿಡುಗಡೆ ಆದ ದಿನವೇ (ಡಿಸೆಂಬರ್ 27) 'ಭೂಲ್ ಭುಲಯ್ಯ 3' ನೆಟ್‌ಫ್ಲಿಕ್ಸ್‌ಗೆ ಬಿಡುಗಡೆ ಆಗಿದೆ.

ಸ್ಕಿಡ್ ಗೇಮ್ಸ್ 2 2021 ರಲ್ಲಿ ಬಿಡುಗಡೆ ಆಗಿ ವಿಶ್ವದಾದ್ಯಂತ ಸೂಪರ್ ಹಿಟ್ ಆಗಿದ್ದ 'ಸ್ಕ್ವಿಡ್ ಗೇಮ್' ಕೊರಿಯನ್ ವೆಬ್ ಸರಣಿಯ ಎರಡನೇ ಸೀಸನ್ ಈಗ ಬಿಡುಗಡೆ ಆಗಿದೆ. 2021ರ ವೆಬ್ ಸರಣಿಯ ಮುಂದಿನ ಕತೆಯೇ ಇದಾಗಿದೆ. ಮೊದಲ ಸೀಸನ್‌ನಲ್ಲಿ ಮುಖ್ಯ ಪಾತ್ರದಲ್ಲಿ ನಟಿಸಿದ್ದ ಲೋ ಜುಂಗ್ ಜೇ ಈ ಸೀಸನ್‌ನಲ್ಲೂ ಮುಖ್ಯ ಪಾತ್ರದಲ್ಲಿ ನಟಿಸಿದ್ದಾರೆ. ಮೊದಲ ಸೀಸನ್‌ನಲ್ಲಿ ನಡೆದ ಆಟಗಳೇ ಪುನರಾವರ್ತನೆ ಆಗುತ್ತಿವೆ ಆದರೆ ಕತೆ ಮಾತ್ರ ಬೇರೆ. ಸೊರ್ಗವಾಸಲ್ ಜೈಲುವಾಸಿಗಳು ಮತ್ತು ಅವರನ್ನು ಕಾವಲು ಕಾಯುವ ಪೊಲೀಸರ ಕತೆ ಒಳಗೊಂಡ ಸೊರ್ಗವಾಸಲ್ ಇಂದು (ಡಿಸೆಂಬರ್ 27) ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆ ಆಗಿದೆ.

# ಸೋನು ಸೂದ್‌ಗೆ ಕೊಡಲಾಗಿತ್ತು ಸಿಎಂ, ಡಿಸಿಎಂ ಪದವಿಯ ಆಫರ್



ಬಹುಭಾಷಾ ನಟ ಸೋನು ಸೂದ್ ಕೋವಿಡ್ ಸಮಯದಲ್ಲಿ ಸಾವಿರಾರು ಮಂದಿಗೆ ಸಹಾಯ ಮಾಡಿದ್ದಾರೆ. ಕಾರ್ಮಿಕರ ಪಾಲಿಗೆ ದೇವರೇ ಆಗಿದ್ದರು.

ಆ ಸಂದರ್ಭದಲ್ಲಿ ಹಲವು ರಾಜಕೀಯ ಪಕ್ಷಗಳು ಸೋನು ಸೂದ್ ಅವರನ್ನು ತಮ್ಮ ಪಕ್ಷಕ್ಕೆ ಎಳೆದುಕೊಳ್ಳಲು ಪ್ರಯತ್ನಿಸಿದ್ದರು. ಆದರೆ ಸೋನು ಸೂದ್ ಯಾವ ಪಕ್ಷವನ್ನೂ ಸೇರಲಿಲ್ಲ. ಆದರೆ ಆ ಸಮಯದಲ್ಲಿ ತಮಗೆ ಸಿಕ್ಕಿದ್ದ ಆಫರ್‌ಗಳು ಹೇಗಿದ್ದವು ಎಂಬುದನ್ನು ಈಗ ಹೇಳಿದ್ದಾರೆ. ಬಹುಭಾಷಾ ನಟ ಸೋನು ಸೂದ್, ದಕ್ಷಿಣ ಹಾಗೂ ಬಾಲಿವುಡ್ ಸಿನಿಮಾಗಳಲ್ಲಿ ಬಹುತೇಕ ವಿಲನ್ ಪಾತ್ರಗಳಿಂದಲೇ ಹೆಚ್ಚು ಪರಿಚಿತರು. ತೆರೆಯ ಮೇಲೆ ಖಳನಟನ ಪಾತ್ರಗಳಲ್ಲಿ ನಟಿಸುತ್ತಾರಾದರೂ ವೈಯಕ್ತಿಕವಾಗಿ ಮಾನವೀಯತೆ, ಕರುಣೆ ತುಂಬಿದ ವ್ಯಕ್ತಿ ಸೋನು ಸೂದ್. ಕೋವಿಡ್ ಸಮಯದಲ್ಲಂತೂ ಕೇಂದ್ರ ಸಚಿವರೊಬ್ಬರು ಮಾಡುವುದಕ್ಕಿಂತಲೂ ಹೆಚ್ಚಿನ ಕೆಲಸವನ್ನು ಅವರು ಮಾಡಿದ್ದರು. ಮನೆ ಬಿಟ್ಟು ಬೇರೆ ರಾಜ್ಯಗಳಿಗೆ ಕೆಲಸಗಳಿಗೆ ತೆರಳಿದ್ದ ಕಾರ್ಮಿಕರ ಪಾಲಿಗಂತೂ ದೇವರೆ ಆಗಿದ್ದರು ಸೋನು ಸೂದ್. ಇದೇ ಕಾರಣಕ್ಕೆ ಅವರಿಗೆ 'ಮಸೀಹಾ' (ಆಪತ್ತಿನಲ್ಲಿ ಬಂದ ದೇವರು) ಎಂದು ಹೆಸರು ನೀಡಲಾಗಿತ್ತು. ಆ ಸಂದರ್ಭದಲ್ಲಿ ಸೋನು ಸೂದ್ ಸೇವೆಯ ಬಗ್ಗೆ ಪ್ರತಿದಿನವೂ ವರದಿಗಳಾಗುತ್ತಿದ್ದವು. ಸೋನು ಸೂದ್‌ರಿಂದ ಸಹಾಯ ಪಡೆದ ಹಲವರು ತಮ್ಮ ಮಕ್ಕಳಿಗೆ ಸೋನು ಸೂದ್‌ರ ಹೆಸರು ಇರಿಸಿದರು. ಹಲವು ರಾಜಕೀಯ ನಾಯಕರುಗಳು ಸಹ ಸೋನು ಸೂದ್‌ರ ಸೇವೆಯನ್ನು ಮೆಚ್ಚಿ ಟ್ವೀಟ್‌ಗಳನ್ನು ಮಾಡಿದ್ದರು. ಕೆಲವು ರಾಜ್ಯಗಳ ರಾಜ್ಯಪಾಲರು ಸೋನು ಸೂದ್‌ರನ್ನು ಕರೆಸಿ ಸನ್ಮಾನ ಮಾಡಿದರು. ಅಮಿತ್ ಶಾ, ಮೋದಿಯವರು ಸಹ ಸೋನು ಸೂದ್‌ರನ್ನು ಭೇಟಿಯಾಗಿದ್ದರು. ಅದೇ ಸಮಯದಲ್ಲಿ ಸೋನು ಸೂದ್, ರಾಜಕೀಯಕ್ಕೆ ಬರಲಿದ್ದಾರೆ ಎಂಬ ಸುದ್ದಿ ಜೋರಾಗಿ ಹಬ್ಬಿತ್ತು ಆದರೆ ಅದು ಸುಳ್ಳಾಯ್ತು.

ಇದೀಗ ಹ್ಯೂಮನ್ಸ್ ಆಫ್ ಬಾಂಬೆಗೆ ನೀಡಿರುವ ಸಂದರ್ಶನದಲ್ಲಿ ಮಾತನಾಡಿರುವ ಸೋನು ಸೂದ್, ಆ ಸಮಯದಲ್ಲಿ ತಮಗೆ ಬಂದ ರಾಜಕೀಯದ ಆಫರ್‌ಗಳ ಬಗ್ಗೆ ಬಾಯ್ಬಿಟ್ಟಿದ್ದಾರೆ. ತಮಗೆ ಸಿಎಂ ಮಾಡುವ ಅಲ್ಲದಿದ್ದರೆ ಡಿಸಿಎಂ ಮಾಡುವ ಭರವಸೆಗಳು ಬಂದಿದ್ದವು ಎಂದಿದ್ದಾರೆ. ನೀನು ಚುನಾವಣೆ ಸಹ ನಿಲ್ಲಬೇಡ ಕೇವಲ ನಮ್ಮ ಜೊತೆಗೆ ನಿಂತಿರು ಸಾಕು ಎಂದು ಸಹ ಕೆಲವು ಪ್ರಮುಖ ರಾಜಕೀಯ ನಾಯಕರು ಹೇಳಿದ್ದರು. ರಾಷ್ಟ್ರಮಟ್ಟದ ನಾಯಕರಿಂದ ಆ ಆಫರ್‌ಗಳು ಬಂದಿದ್ದವು ಎಂದು ಸೋನು ಸೂದ್ ಹೇಳಿದ್ದಾರೆ. ರಾಜ್ಯಸಭಾ ಸದಸ್ಯನನ್ನಾಗಿ ಮಾಡುವ ಆಫರ್ ಸಹ ಒಂದು ಪಕ್ಷದಿಂದ ಬಂದಿತ್ತಂತೆ. ಆದರೆ ಯಾವ ಪಕ್ಷದಿಂದ, ಯಾವ ನಾಯಕ ಆಫರ್ ನೀಡಿದ್ದರು ಎಂಬುದನ್ನು ಸೋನು ಸೂದ್ ಹೇಳಿಲ್ಲ.

'ರಾಜಕೀಯ ಎಂಬುದು ಹಲವರ ಪಾಲಿಗೆ ಅಧಿಕಾರ ಮತ್ತು ಹಣ. ಆದರೆ ನನಗೆ ಅವೆರಡೂ ಸಹ ಮುಖ್ಯವಲ್ಲ. ನಾನು ಈಗಾಗಲೇ ಜನರಿಗೆ ಸಹಾಯ ಮಾಡುತ್ತಿದ್ದೇನೆ. ನಾನು ಯಾರಿಗೂ ಉತ್ತರ ನೀಡುವ ಅವಶ್ಯಕತೆ ಇಲ್ಲ, ನನಗೆ ಗಡಿಗಳು ಸಹ ಇಲ್ಲ. ನಾನು ರಾಜಕೀಯದಲ್ಲಿ ಇದ್ದಿದ್ದರೆ ನಾನು ಯಾರಿಗಾದರೂ ಉತ್ತರ ಕೊಡಬೇಕಿತ್ತು, ನನ್ನನ್ನು ನಿಯಂತ್ರಿಸಲು ಕೆಲವರು ಇರುತ್ತಿದ್ದರು.

# 10 ದಿನಗಳ ಸಿನಿಮಾ ಶೂಟಿಂಗ್‌ಗೆ 9 ಕೋಟಿ ಸಂಭಾವನೆ



ಸದ್ಯ ಸೌತ್ ಸಿನಿಮಾ ಇಂಡಸ್ಟ್ರಿಯತ್ತ ತಿರುಗಿ ನೋಡುವಂತಹ ಚಿತ್ರಗಳು ಬಂದಿದೆ. ಅದರಲ್ಲೂ ಕೆಲವು ವರ್ಷಗಳಿಂದ ಟಾಲಿವುಡ್ ಸಿನಿಮಾಗಳು ಪ್ಯಾನ್ ಇಂಡಿಯಾ ಬಾಕ್ಸ್ ಆಫೀಸ್ ನಲ್ಲಿ ಉತ್ತಮ ಪ್ರದರ್ಶನ ನೀಡುತ್ತಿವೆ. ಇದ್ರಿಂದಾಗಿ ಬೇರೆ ಭಾಷೆಯ ನಟ-ನಟಿಯರು ಕೂಡ ತೆಲುಗಿನತ್ತ ಮುಖ ಮಾಡ್ತಿದ್ದಾರೆ. ಈ ಬಾಲಿವುಡ್ ನಟಿ 10 ದಿನದ ಶೂಟಿಂಗ್ಗೆ 9 ಕೋಟ್ರ್ಟ ಚಾರ್ಜ್ ಮಾಡಿದ್ದಾರೆ. ಟಾಲಿವುಡ್ ಸಿನಿಮಾಗಳಲ್ಲಿ ಚಿಕ್ಕ ಚಿಕ್ಕ ಚಾನ್ಸ್ ಸಿಕ್ಕರೂ ನಟಿಸಲು ಹಲವು ನಾಯಕಿಯರು ರೆಡಿಯಾಗಿದ್ದಾರೆ. ಜೊತೆಗೆ ಹೆಚ್ಚು ಸಂಭಾವನೆಯನ್ನೇ ಪಡೆಯುತ್ತಿದ್ದಾರೆ. ಈ ನಟಿ ಬಾಲಿವುಡ್ ಇಂಡಸ್ಟ್ರಿಯಲ್ಲಿ ಸ್ಟಾರ್ ಹೀರೋಯಿನ್. ತೆಲುಗಿನಲ್ಲಿ ಒಂದೇ ಒಂದು ಸಿನಿಮಾ ಮಾಡಿದ್ದಾರೆ. ಆದ್ರೆ, ಹತ್ತು ದಿನಗಳ ಶೂಟಿಂಗ್ ಗೆ 9 ಕೋಟಿ ಪಡೆದ ಬ್ಯೂಟಿ, ಮೊದಲ ಚಿತ್ರದಲ್ಲೇ ತೆಲುಗು ಪ್ರೇಕ್ಷಕರ ಗಮನ ಸೆಳೆದಿದ್ರು. ಆ ನಾಯಕಿ ಬೇರೆ ಯಾರು ಅಲ್ಲ ನಟಿ ಆಲಿಯಾ ಭಟ್, ಬಾಲಿವುಡ್ ಖ್ಯಾತ ನಿರ್ದೇಶಕ ಮಹೇಶ್ ಭಟ್ ಅವರ ಪುತ್ರಿಯಾಗಿ ಆಲಿಯಾ ಭಟ್ ಚಿತ್ರರಂಗಕ್ಕೆ ಎಂಟ್ರಿ ಕೊಟ್ರು. ಸ್ಟೂಡೆಂಟ್ ಆಫ್ ದಿ ಇಯರ್ ಚಿತ್ರದ ಮೂಲಕ ಇಂಡಸ್ಟ್ರಿಗೆ ಎಂಟ್ರಿ ಕೊಟ್ಟ ಆಲಿಯಾ ಮೊದಲ ಸಿನಿಮಾದಲ್ಲೇ ಸೂಪರ್ ಹಿಟ್ ಪಡೆದ್ರು. ಬಳಿಕ ನಟಿ ಮುಟ್ಟಿದ್ದೆಲ್ಲಾ ಚಿನ್ನವಾಯ್ತು. ಆ ನಂತರ ವಿಭಿನ್ನ ಕಥೆಗಳನ್ನ ಆಯ್ದುಕೊಂಡು ಸಿನಿಮಾ ಮಾಡಿ ಬಾಲಿವುಡ್ ಟಾಪ್ ನಟಿಯ ಸ್ಥಾನಕ್ಕೇರಿದ್ದಾರೆ.

# ಸಂಭಾವನೆಯಲ್ಲಿ ದಾಖಲೆ ಬರೆದ ಯಶ್



ಸ್ಟಾರ್ ನಟರ ಸಿನಿಮಾಗಳು ಬಾಕ್ಸ್ ಆಫೀಸ್‌ನಲ್ಲಿ ಸಾವಿರಾರು ಕೋಟಿ ಗಳಿಕೆ ಮಾಡುತ್ತಿವೆ. ಸ್ಟಾರ್ ನಟರ ಸಿನಿಮಾಗಳು ಚೆನ್ನಾಗಿಲ್ಲವೆಂದರು ಬಾಕ್ಸ್ ಆಫೀಸ್‌ನಲ್ಲಿ 200-300 ಕೋಟಿ ಸುಲಭವಾಗಿ ಗಳಿಕೆ ಮಾಡುತ್ತಿವೆ. ಇದೇ ಕಾರಣಕ್ಕೆ ನಟರ ಸಂಭಾವನೆಯೂ ಹಲವು ಪಟ್ಟು ಹೆಚ್ಚಾಗಿದೆ. ಇತ್ತೀಚೆಗಷ್ಟೆ ಬಿಡುಗಡೆ ಆದ 'ಪುಷ್ಪ 2' ಸಿನಿಮಾಕ್ಕೆ ಅಲ್ಲು ಅರ್ಜುನ್ 300 ಕೋಟಿಗೂ ಹೆಚ್ಚು ಹಣ ಸಂಭಾವನೆಯಾಗಿ ಪಡೆದಿದ್ದಾರಂತೆ. ಭಾರತದಲ್ಲಿ ಈವರೆಗೆ ಯಾವುದೇ ನಟ ಪಡೆದ ಸಂಭಾವನೆಯಲ್ಲಿ ಅತಿ ಹೆಚ್ಚು ಇದು. ಇದೀಗ ನಟ ಯಶ್ ಸಹ ಸಂಭಾವನೆ ಪಡೆವ ವಿಷಯದಲ್ಲಿ ದಾಖಲೆಯೊಂದನ್ನು ಬರೆದಿದ್ದಾರೆ.

ಭಾರತೀಯ ಚಿತ್ರರಂಗದಲ್ಲಿ ಸ್ಟಾರ್ ನಟರ ಸಂಭಾವನೆ ಬಹಳ ಹೆಚ್ಚು. ಸ್ಟಾರ್ ನಟನೊಬ್ಬನಿಗೆ ನೂರು ಕೋಟಿ ರೂಪಾಯಿ ಸಂಭಾವನೆ ನೀಡಿದ್ದಾರೆಂದರೆ, ಇನ್ನುಳಿದ ಎಲ್ಲಾ ಪಾತ್ರವರ್ಗದವರ ಸಂಭಾವನೆಯ ಒಟ್ಟು ಮೊತ್ತ ನೂರು ಕೋಟಿ ಸಹ ಆಗುವುದಿಲ್ಲ. ಸಿನಿಮಾದ ನಾಯಕಿಗೆ ಅದೂ ಜನಪ್ರಿಯ ನಾಯಕಿ ಆಗಿದ್ದರೆ 5 ಕೋಟಿ ನೀಡಲಾಗುತ್ತದೆ. ಸಿನಿಮಾದ ವಿಲನ್ ಪಾತ್ರಧಾರಿಗೆ ಎರಡು ಕೋಟಿ ನೀಡಿದರೆ ಹೆಚ್ಚು, ಬಾಬಿ ಡಿಯೋಲ್, ಫಹಾದ್ ಫಾಸಿಲ್, ವಿಜಯ್ ಸೇತುಪತಿ ಅಂಥಹವರಿಗೆ ಬಹಳ ಹೆಚ್ಚೆಂದರೆ 10 ಕೋಟಿ ನೀಡಬಹುದು, ಆದರೆ ಯಶ್ ಈಗ ಆಂಟಿ ಹೀರೋ ಅಥವಾ ವಿಲನ್ ಪಾತ್ರದಲ್ಲಿ ನಟಿಸಲು ಭಾರತದಲ್ಲಿಯೇ ಅತಿ ಹೆಚ್ಚು ಸಂಭಾವನೆ ಪಡೆದ ನಟ ಎನಿಸಿಕೊಂಡಿದ್ದಾರೆ.

# ಭದ್ರತಾ ಲೋಪ

## ಕೊಹ್ಲಿಯ ಭುಜದ ಮೇಲೆ ಕೈಯಿಟ್ಟು ಡ್ಯಾನ್ಸ್ ಮಾಡಿದ ಅಭಿಮಾನಿ




ಭಾರತ-ಆಸ್ಟ್ರೇಲಿಯಾ ನಡುವಿನ ಟೆಸ್ಟ್ ಪಂದ್ಯದ ವೇಳೆ ಒಬ್ಬ ವ್ಯಕ್ತಿ ಮೈದಾನಕ್ಕೆ ನುಗ್ಗಿ ಕೊಹ್ಲಿಯನ್ನು ತಬ್ಬಿದ ಘಟನೆ ವೈರಲ್ ಆಗಿದೆ. ಮೊದಲು ರೋಹಿತ್ ಶರ್ಮಾ ಬಳಿಗೆ ಓಡಿದ ಆತ, ನಂತರ ಕೊಹ್ಲಿಯನ್ನು ತಬ್ಬಿ, ಭುಜದ ಮೇಲೆ ಕೈಯಿಟ್ಟು ಮಾತನಾಡಿದ್ದಾನೆ.

ಭದ್ರತಾ ಸಿಬ್ಬಂದಿ ಆತನನ್ನು ಹಿಡಿದು ಹೊರಗೆ ಕರೆದೊಯ್ದಿದ್ದಾರೆ. ಈ ಘಟನೆಯ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಭಾರತ-ಆಸ್ಟ್ರೇಲಿಯಾ ನಡುವೆ ನಡೆಯುತ್ತಿರುವ ನಾಲ್ಕನೇ ಟೆಸ್ಟ್ ಪಂದ್ಯದ ಎರಡನೇ ದಿನದಾಟದ ವೇಳೆ ವ್ಯಕ್ತಿಯೊಬ್ಬ ಭದ್ರತಾ ಕವಚವನ್ನು ಮುರಿದು ಮೈದಾನಕ್ಕೆ ನುಗ್ಗಿದ್ದಾನೆ. ಭಾರತ ತಂಡದ ಆಟಗಾರರು ಫೀಲ್ಡಿಂಗ್ ಮಾಡುತ್ತಿದ್ದಾಗ, ಏಕಾಏಕಿ ಮೈದಾನಕ್ಕೆ ನುಗ್ಗಿದ ವ್ಯಕ್ತಿಯೊಬ್ಬ ಕ್ಯಾಪ್ಟನ್ ರೋಹಿತ್ ಪಡೆಗೆ ಓಡಿದ್ದಾನೆ. ಆದರೆ ರೋಹಿತ್ ಕೋಪಕ್ಕೆ ಹೆದರಿದ ಆ ವ್ಯಕ್ತಿ ಕಿಂಗ್ ಕೊಹ್ಲಿಯತ್ತ ಓಡಿದ್ದಾನೆ. ಆ ಬಳಿಕ ಕೊಹ್ಲಿ ಬಳಿಕ ಬಂದ ಆ ವ್ಯಕ್ತಿ ಕೊಹ್ಲಿಯ ಭುಜದ ಮೇಲೆ ಕೈಯಿಟ್ಟು ಮೈದಾನದ ಮಧ್ಯದಲ್ಲೇ ಡಾನ್ಸ್ ಮಾಡಿದ್ದಾನೆ. ಇದೀಗ ಆ ಘಟನೆಯ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗುತ್ತಿದೆ. ಈ ವೇಳೆ ಭದ್ರತಾ ಸಿಬ್ಬಂದಿ ಕೂಡಲೇ ಆತನನ್ನು ಹಿಡಿದು ಮೈದಾನದಿಂದ ಹೊರ ಹಾಕಿದ್ದಾರೆ.

**ಮೈದಾನಕ್ಕೆ ನುಗ್ಗಿದ ಅಭಿಮಾನಿ**

ವೈರಲ್ ಆಗುತ್ತಿರುವ ವಿಡಿಯೋದಲ್ಲಿ ಒಬ್ಬ ವ್ಯಕ್ತಿ ಇದ್ದಕ್ಕಿದ್ದಂತೆ ಮೈದಾನದೊಳಗೆ ಓಡಿಬರುವುದನ್ನು ಕಾಣಬಹುದು. ಮೊದಲಿಗೆ ರೋಹಿತ್ ಬಳಿಗೆ ಓಡಿದ ಆ ವ್ಯಕ್ತಿ ಆ ಬಳಿಕ ಕೊಹ್ಲಿ ಬಳಿಗೆ ಬಂದಿದ್ದಾನೆ. ನಂತರ ಕೊಹ್ಲಿಯನ್ನು ತಬ್ಬಿ ಭುಜದ ಮೇಲೆ ಕೈಯಿಟ್ಟು ಮಾತನಾಡಲಾರಂಭಿಸಿದ್ದಾನೆ. ಈ ವೇಳೆ ಕಿಂಗ್ ಕೊಹ್ಲಿ ಕೂಡ ಭದ್ರತಾ ಸಿಬ್ಬಂದಿಗೆ ಸೂಚನೆ ನೀಡಿದ್ದು, ಕೂಡಲೇ ಭದ್ರತಾ ಸಿಬ್ಬಂದಿ ಆ ವ್ಯಕ್ತಿಯನ್ನು ಹಿಡಿದು ಮೈದಾನದಿಂದ ಹೊರಗೆ ಕರೆದೊಯ್ದಿದ್ದಾರೆ.

**ಬೃಹತ್ ಮೊತ್ತ ಕಲೆಹಾಕಿದ ಆಸ್ಟ್ರೇಲಿಯಾ**

ಈ ಪಂದ್ಯದ ಬಗ್ಗೆ ಹೇಳುವುದಾದರೆ ಆಸ್ಟ್ರೇಲಿಯ ಮೊದಲ ಇನಿಂಗ್ಸ್‌ನಲ್ಲಿ 474 ರನ್‌ಗಳ ಬೃಹತ್ ಮೊತ್ತ ಕಲೆಹಾಕಿದೆ. ತಂಡದ ಪರ ಸ್ಯಾಮ್ ಕೊನ್ಸ್ಟಾಸ್ 60, ಉಸ್ಮಾನ್ ಖವಾಜಾ 52, ಮಾರ್ನಸ್ ಲಬುಶೇನ್ 72 ರನ್ ಗಳಿಸಿದರು. ಈ ಸರಣಿಯಲ್ಲಿ ಭಾರತದ ವಿರುದ್ಧ ಸತತ ಎರಡನೇ ಶತಕ ದಾಖಲಿಸಿದ ಸ್ಟೀವ್ ಸ್ಮಿತ್ 197 ಎಸೆತಗಳಲ್ಲಿ 140 ರನ್‌ಗಳ ಅತ್ಯಧಿಕ ಇನ್ನಿಂಗ್ಸ್ ಆಡಿದರು. ನಾಯಕ ಪ್ಯಾಟ್ ಕಮ್ಮಿನ್ಸ್ ಕೇವಲ ಒಂದು ರನ್ ನಿಂದ ಅರ್ಧಶತಕ ವಂಚಿತರಾದರು.

# 2ನೇ ದಿನದಾಟ ಅಂತ್ಯ; 6 ರನ್‌ಗೆ 3 ವಿಕೆಟ್, ಸಂಕಷ್ಟದಲ್ಲಿ ಟೀಂ ಇಂಡಿಯಾ



ಆಸ್ಟ್ರೇಲಿಯಾ ವಿರುದ್ಧದ ಮೆಲ್ಬೋರ್ನ್‌ನಲ್ಲಿ ನಡೆಯುತ್ತಿರುವ 4ನೇ ಟೆಸ್ಟ್ ಪಂದ್ಯದಲ್ಲಿ ಭಾರತ ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಮೊದಲ ಇನ್ನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾವನ್ನು 474 ರನ್‌ಗೆ ಆಲೌಟ್ ಮಾಡಿದ ಭಾರತ, ಎರಡನೇ ದಿನಾಂತ್ಯಕ್ಕೆ 5 ವಿಕೆಟ್ ಕಳೆದುಕೊಂಡು 164 ರನ್ ಗಳಿಸಿದೆ. ಯಶಸ್ವಿ ಜೈಸ್ವಾಲ್ ಅವರ 82ರನ್‌ಗಳ ಇನ್ನಿಂಗ್ಸ್ ಹೊರತುಪಡಿಸಿ ಉಳಿದ ಆಟಗಾರರ ಪ್ರದರ್ಶನ ನಿರಾಸಾದಾಯಕವಾಗಿದೆ. ಭಾರತ ಇನ್ನೂ 310 ರನ್‌ಗಳ ಹಿನ್ನಡೆಯಲ್ಲಿದೆ.

ಮೆಲ್ಬೋರ್ನ್‌ನಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ವಿರುದ್ಧದ 4ನೇ ಟೆಸ್ಟ್ ಪಂದ್ಯದಲ್ಲಿ ಟೀಂ ಇಂಡಿಯಾ ಸಂಕಷ್ಟಕ್ಕೆ ಸಿಲುಕಿದೆ. ಆಸ್ಟ್ರೇಲಿಯಾವನ್ನು 474 ರನ್‌ಗಳಿಗೆ ಆಲೌಟ್ ಮಾಡಿ ಮೊದಲ ಇನ್ನಿಂಗ್ಸ್ ಆರಂಭಿಸಿರುವ ಟೀಂ ಇಂಡಿಯಾ ಎರಡನೇ ದಿನದಾಟದಂತ್ಯಕ್ಕೆ ಪ್ರಮುಖ 5 ವಿಕೆಟ್‌ಗಳನ್ನು ಕಳೆದುಕೊಂಡು 164 ರನ್ ಕಲೆಹಾಕಿದೆ. ಈ ಮೂಲಕ ಭಾರತ ಇನ್ನೂ 310 ರನ್‌ಗಳ ಹಿನ್ನಡೆಯಲ್ಲಿದೆ. ತಂಡದ ಪರ ಯಶಸ್ವಿ ಜೈಸ್ವಾಲ್ ಮಾತ್ರ 82 ರನ್‌ಗಳ ಉಪಯುಕ್ತ ಇನ್ನಿಂಗ್ಸ್ ಆಡಿದ್ದನ್ನು ಬಿಟ್ಟರೆ ಉಳಿದವರಿಂದ ಮತ್ತದೆ ನಿರಸ ಪ್ರದರ್ಶನ ಕಂಡುಬಂತು. ತಂಡದ ಪರ ರಿಷಬ್ ಪಂತ್ 6 ರನ್ ಹಾಗೂ ರವೀಂದ್ರ ಜಡೇಜಾ 4 ರನ್ ಕಲೆಹಾಕಿ ಮೂರನೇ ದಿನದಾಟಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

**ಆಸೀಸ್ ಬಿಗಿ ಹಿಡಿತ**

ಇಡೀ ಟೆಸ್ಟ್ ಪಂದ್ಯದಲ್ಲಿ ಮೊದಲ ದಿನದಿಂದಲೂ ಬಿಗಿ ಹಿಡಿತ ಸಾಧಿಸಿರುವ ಆಸ್ಟ್ರೇಲಿಯಾ ಎರಡನೇ ದಿನದಾಟದಲ್ಲೂ ಅದನ್ನು ಮುಂದುವರೆಸಿತು. ಎರಡನೇ ದಿನದಾಟದ ಮೂರು ಸೆಷನ್‌ಗಳಲ್ಲಿ ಆಸ್ಟ್ರೇಲಿಯಾವೇ ಪಾರುಪತ್ಯ ಮೆರೆಯಿತು. ದಿನದಾಟದ ಕೊನೆಯ ಸೆಷನ್‌ನಲ್ಲಿ ಟೀಂ ಇಂಡಿಯಾ ಒಂದು ಹಂತದಲ್ಲಿ 2 ವಿಕೆಟ್‌ಗೆ 153 ರನ್ ಕಲೆಹಾಕಿತ್ತು. ಇದಾದ ಬಳಿಕ ಟೀಂ ಇಂಡಿಯಾ ಆರು ರನ್ ಗಳಿಸುವಷ್ಟರಲ್ಲಿ ಪ್ರಮುಖ ಮೂರು ವಿಕೆಟ್ ಕಳೆದುಕೊಂಡಿತು.

# ಆರಂಭಿಕನಾಗಿಯೂ ರೋಹಿತ್ ಫೇಲ್




**ನಿವೃತ್ತಿ ಘೋಷಿಸಿ ಎಂದ ಫ್ಯಾನ್ಸ್**

ಆಸ್ಟ್ರೇಲಿಯಾದ ಮೆಲ್ಬೋರ್ನ್‌ನಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡಕ್ಕೆ ಆರಂಭಿಕ ಆಘಾತ ಎದುರಾಗಿದೆ. ನಾಯಕ ರೋಹಿತ್ ಶರ್ಮಾ ಕೇವಲ 3 ರನ್‌ಗಳಿಗೆ ಔಟ್ ಆದರು. ಪ್ಯಾಟ್ ಕಮಿನ್ಸ್ ರೋಹಿತ್ ಅವರನ್ನು ಔಟ್ ಮಾಡುವ ಮೂಲಕ ಭಾರತಕ್ಕೆ ಆರಂಭಿಕ ಆಘಾತ ನೀಡಿದರು. ಇಡೀ ಸರಣಿಯಲ್ಲಿ ಕಳಪೆ ಫಾರ್ಮ್‌ನಿಂದ ಬಳಲುತ್ತಿರುವ ರೋಹಿತ್ ಶರ್ಮಾ 4ನೇ ಟೆಸ್ಟ್ ಪಂದ್ಯದಲ್ಲೂ ಬಿಗ್ ಇನ್ನಿಂಗ್ಸ್ ಆಡುವಲ್ಲಿ ವಿಫಲರಾಗಿದ್ದಾರೆ. ಉಸ್ಮಾನ್ ಖವಾಜಾ, ಸ್ಯಾಮ್ ಕೊನ್‌ಸ್ಟನ್ಸ್, ಮಾರ್ನಸ್ ಲಬುಶೇನ್ ಅವರ ಅರ್ಧ ಶತಕ ಮತ್ತು ಅನುಭವಿ ಬ್ಯಾಟ್ಸ್‌ಮನ್ ಸ್ಟೀವ್ ಸ್ಮಿತ್ ಅವರ ಶತಕದಿಂದಾಗಿ ಆಸ್ಟ್ರೇಲಿಯಾ ಮೆಲ್ಬೋರ್ನ್ ಟೆಸ್ಟ್‌ನಲ್ಲಿ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 474 ರನ್ ಕಲೆ ಹಾಕಿದೆ. ಆಸೀಸ್ ಬ್ಯಾಟಿಂಗ್ ನೋಡಿದವರು ಟೀಂ ಇಂಡಿಯಾದಿಂದಲೂ ಅದೇ ರೀತಿಯ ಪ್ರದರ್ಶನವನ್ನು ನಿರೀಕ್ಷಿಸಿದ್ದರು. ಆದರೆ ತನ್ನ ಮೊದಲ ಇನ್ನಿಂಗ್ಸ್ ಆರಂಭಿಸಿದ್ದ ಟೀಂ ಇಂಡಿಯಾಕ್ಕೆ ಆರಂಭಿಕ ಆಘಾತ ಎದುರಾಯಿತು. ಮಧ್ಯಮ ಕ್ರಮಾಂಕದಿಂದ ಮತ್ತೆ ಆರಂಭಿಕನಾಗಿ ಬಡ್ತಿ ಪಡೆದಿದ್ದ ನಾಯಕ ರೋಹಿತ್ ಶರ್ಮಾ ಈ ಬಾರಿಯೂ ವಿಫಲರಾದರು. ತಮ್ಮ ಬ್ಯಾಟಿಂಗ್ ಕ್ರಮಾಂಕವನ್ನು ಬದಲಾಯಿಸುವುದಕ್ಕಾಗಿಯೇ ಶುಭ್‌ಮನ್ ಗಿಲ್‌ರನ್ನು 4ನೇ ಟೆಸ್ಟ್‌ನಿಂದ ಹೊರಗಿಟ್ಟಿದ ರೋಹಿತ್ ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 3 ರನ್ ಗಳಿಸಿ ಆಸ್ಟ್ರೇಲಿಯಾದ ನಾಯಕ ಪ್ಯಾಟ್ ಕಮಿನ್ಸ್ ಎಸೆತದಲ್ಲಿ ಪೆವಿಲಿಯನ್ ಸೇರಿಕೊಂಡರು. ಇತ್ತ ಕಮಿನ್ಸ್ ರೋಹಿತ್ ವಿಕೆಟ್ ಕಬಳಿಸಿದ್ದು ಮಾತ್ರವಲ್ಲದೆ ನಾಯಕತ್ವದ ಪಾಠವನ್ನೂ ಹೇಳಿಕೊಟ್ಟರು. ಈ ಪಂದ್ಯದಲ್ಲಿ ಯಶಸ್ವಿ ಜೈಸ್ವಾಲ್ ಅವರೊಂದಿಗೆ ಭಾರತದ ಇನ್ನಿಂಗ್ಸ್ ಆರಂಭಿಸಿದ ರೋಹಿತ್ ಶರ್ಮಾ ಎರಡನೇ ಓವರ್‌ನಲ್ಲೇ ಪೆವಿಲಿಯನ್ ಹಾದಿ ಹಿಡಿದರು.

# ಮೆಲ್ಬೋರ್ನ್‌ನಲ್ಲಿ ಬೇಡದ ದಾಖಲೆ ಬರೆದ ಸಿರಾಜ್




ಮೆಲ್ಬೋರ್ನ್‌ನಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ಮತ್ತು ಭಾರತದ ನಡುವಿನ ಟೆಸ್ಟ್ ಪಂದ್ಯದಲ್ಲಿ ಆಸ್ಟ್ರೇಲಿಯಾ ಮೇಲುಗೈ ಸಾಧಿಸಿದೆ. ಆಸ್ಟ್ರೇಲಿಯಾ ಮೊದಲ ಇನ್ನಿಂಗ್ಸ್‌ನಲ್ಲಿ 474 ರನ್ ಕಲೆಹಾಕಿದ್ದು, ಟೀಂ ಇಂಡಿಯಾದ ದುರ್ಬಲ ಬೌಲಿಂಗ್ ಮತ್ತೊಮ್ಮೆ ಜಗಜ್ಜಾಹೀರಾಗಿದೆ. ತಂಡದ ವೇಗದ ಬೌಲರ್ ಮೊಹಮ್ಮದ್ ಸಿರಾಜ್ ಯಾವುದೇ ವಿಕೆಟ್ ಪಡೆಯದೆ 122 ರನ್‌ಗಳನ್ನು ಬಿಟ್ಟುಕೊಟ್ಟು ತೀರ ದುಬಾರಿಯಾಗಿದ್ದಾರೆ. ಮೆಲ್ಬೋರ್ನ್ ಟೆಸ್ಟ್‌ನಲ್ಲಿ ಆತಿಥೇಯ ಆಸ್ಟ್ರೇಲಿಯಾ ಮೇಲುಗೈ ಸಾಧಿಸಿದೆ. ಮೊದಲ ಇನ್ನಿಂಗ್ಸ್‌ನಲ್ಲಿ ಆಸೀಸ್ ಪಡೆ 474 ರನ್‌ಗಳ ಬೃಹತ್ ಮೊತ್ತ ಕಲೆಹಾಕಿದೆ. ತಂಡದ ಪರ ಉಸ್ಮಾನ್ ಖವಾಜಾ, ಸ್ಯಾಮ್ ಕೊನ್ಸ್ಟಾಸ್, ಮಾರ್ನಸ್ ಲಬುಶೇನ್ ಅರ್ಧಶತಕ ಗಳಿಸಿದರೆ ಸ್ಟೀವ್ ಸ್ಮಿತ್ ಶತಕ ಬಾರಿಸಿದರು. ಇತ್ತ ಟೀಂ ಇಂಡಿಯಾದ ವೇಗಿ ಮೊಹಮ್ಮದ್ ಸಿರಾಜ್ ಕೂಡ ಬೇಡದ ಶತಕವನ್ನು ತಮ್ಮ ಖಾತೆಗೆ ಹಾಕಿಕೊಂಡರು. ಮೆಲ್ಬೋರ್ನ್ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ ಆಸೀಸ್ ಪಡೆ ಇಷ್ಟು ಬೃಹತ್ ಮೊತ್ತ ಕಲೆಹಾಕಲು ಟೀಂ ಇಂಡಿಯಾದ ಬೌಲಿಂಗ್ ವಿಭಾಗವೂ ಒಂದು ಕಡೆ ಕಾರಣವಾಯಿತು. ತಂಡದ ಪರ ಎಂದಿನಂತೆ ಅದ್ಭುತ ಬೌಲಿಂಗ್ ಪ್ರದರ್ಶನ ನೀಡಿದ ಜಸ್ಪ್ರೀತ್ ಬುಮ್ರಾ ನಾಲ್ಕು ವಿಕೆಟ್ ಪಡೆದರೆ, ರವೀಂದ್ರ ಜಡೇಜಾ ಮೂರು ವಿಕೆಟ್, ಆಕಾಶ್ ದೀಪ್ ಎರಡು ವಿಕೆಟ್ ಹಾಗೂ ವಾಷಿಂಗ್ಟನ್ ಸುಂದರ್ ಕೂಡ ಒಂದು ವಿಕೆಟ್ ಪಡೆದರು. ಆದರೆ ಮೊಹಮ್ಮದ್ ಸಿರಾಜ್‌ಗೆ ಮಾತ್ರ ಒಂದೇ ಒಂದು ವಿಕೆಟ್ ಪಡೆಯಲು ಸಾಧ್ಯವಾಗಲಿಲ್ಲ. ಮೆಲ್ಬೋರ್ನ್ ಟೆಸ್ಟ್‌ನ ಮೊದಲ ಇನ್ನಿಂಗ್ಸ್‌ನಲ್ಲಿ 23 ಓವರ್‌ಗಳನ್ನು ಬೌಲ್ ಮಾಡಿದ ಸಿರಾಜ್ ಒಂದೇ ಒಂದು ವಿಕೆಟ್ ಪಡೆಯಲು ಸಾಧ್ಯವಾಗಲಿಲ್ಲ. ಇತ್ತ ರನ್ ನೀಡುವುದರಲ್ಲೂ ದಾರಾಳತೆ ಮೆರೆದ ಸಿರಾಜ್ 100 ಕ್ಕೂ ಅಧಿಕ ರನ್ ಬಿಟ್ಟುಕೊಟ್ಟು ನಾಚಿಕೆಗೇಡಿನ ದಾಖಲೆಯನ್ನೂ ನಿರ್ಮಿಸಿದ್ದಾರೆ. ಆಸ್ಟ್ರೇಲಿಯದ ಮೊದಲ ಇನ್ನಿಂಗ್ಸ್‌ನಲ್ಲಿ ಮೊಹಮ್ಮದ್ ಸಿರಾಜ್ ವಿಕೆಟ್ ಕಬಳಿಸಲು ತಮ್ಮ ಕೈಲಾದಷ್ಟು ಪ್ರಯತ್ನಿಸಿದರೂ ಯಾವುದೇ ಯಶಸ್ಸನ್ನು ಪಡೆಯಲಿಲ್ಲ. ಆದರೆ ಇದಕ್ಕೆ ವಿರುದ್ಧವಾಗಿ ಸಿರಾಜ್ ಸಾಕಷ್ಟು ರನ್‌ಗಳನ್ನು ಬಿಟ್ಟುಕೊಟ್ಟರು. 23 ಓವರ್ ಬೌಲ್ ಮಾಡಿದ ಸಿರಾಜ್ 5.30ರ ಎಕಾನಮಿಯಲ್ಲಿ 122 ರನ್ ಬಿಟ್ಟುಕೊಟ್ಟರು.

ಇದರೊಂದಿಗೆ ಮೆಲ್ಬೋರ್ನ್ ಕ್ರಿಕೆಟ್ ಮೈದಾನದಲ್ಲಿ ಯಾವುದೇ ವಿಕೆಟ್ ಪಡೆಯದೆ ಅತಿ ಹೆಚ್ಚು ರನ್ ವ್ಯಯಿಸಿದ ಭಾರತೀಯ ಬೌಲರ್ ಎನಿಸಿಕೊಂಡರು. ಸಿರಾಜ್‌ಗೂ ಮುನ್ನ 2014ರ ಟೆಸ್ಟ್‌ನಲ್ಲಿ ಇಶಾಂತ್ ಶರ್ಮಾ ಯಾವುದೇ ವಿಕೆಟ್ ಪಡೆಯದೆ 104 ರನ್ ಬಿಟ್ಟುಕೊಟ್ಟಿದ್ದರು. ಇದಲ್ಲದೆ ಯಾವುದೇ ವಿಕೆಟ್ ಪಡೆಯದೇ 100ಕ್ಕೂ ಹೆಚ್ಚು ರನ್ ನೀಡಿದ ಭಾರತದ ಇತ್ತೀಚಿನ 10 ವೇಗಿಗಳ ಪಟ್ಟಿಗೆ ಇದೀಗ ಸಿರಾಜ್ ಎಂಟ್ರಿಕೊಟ್ಟಿದ್ದಾರೆ. 2023 ರಲ್ಲಿ ನಡೆದಿದ್ದ ಅಹಮದಾಬಾದ್ ಟೆಸ್ಟ್‌ನಲ್ಲಿ ಉಮೇಶ್ ಯಾದವ್ ಆಸ್ಟ್ರೇಲಿಯಾ ವಿರುದ್ಧ ಯಾವುದೇ ವಿಕೆಟ್ ಪಡೆಯದೆ 105 ರನ್ ನೀಡಿದರು. ಅದಕ್ಕೂ ಮುನ್ನ ಭುವನೇಶ್ವರ್ ಕುಮಾರ್ 2015 ರಲ್ಲಿ ಸಿಡ್ನಿ ಟೆಸ್ಟ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ 122 ರನ್ ಬಿಟ್ಟುಕೊಟ್ಟಿದ್ದರು.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966